# ಹೊಸ ಮನುಷ್ಯ

ಒಂಭತ್ತನೇ ಹುಟ್ಟುಹಬ್ಬದ ಸಂಚಿಕೆ

ಸಮಾಜವಾದಿ ಮಾಸಿಕ

ಫೆಬ್ರುವರಿ, ೨೦೨೦ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೧ ಸಂಚಿಕೆ: ೦೧

ಚಂದಾ ರೂ. ೧೫೦/- (೨೦೨೦ರ ಜನವರಿಯಿಂದ ಸೆಪ್ಟಂಬರ್‌ವರೆಗೆ) ಸಂಸ್ಥೆಗಳಿಗೆ ರೂ. ೨೫೦/- ಪುಟ: ೨೦ ಬೆಲೆ: ರೂ. ೨೫/

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಮತ್ತೊಂದು ಗಣರಾಜ್ಯೋತ್ಸವ ಬಂದು ಹೋಗಿದೆ. ಗಣರಾಜ್ಯ ಎಂದರೆ ಪ್ರಜೆಗಳು ತಾವು ರೂಪಿಸಿಕೊಂಡ ಸಂಹಿತೆಯೊಂದಿಗೆ ಬಾಳಲು ನಿಶ್ಚಿಸಿಕೊಂಡಿರುವ, ಪ್ರಜೆಗಳದ್ದೇ ಪರಮಾಧಿಕಾರವಿರುವ ರಾಜ್ಯ ವ್ಯವಸ್ಥೆ. ಇದು ಚುನಾವಣಾಧಾರಿತ ವ್ಯವಸ್ಥೆಯೂ ಆಗಿರುವುದರಿಂದ ಪ್ರಜೆಗಳ ಪರಮಾಧಿಕಾರ ಅದರ ಪ್ರತಿನಿಧಿಗಳಲ್ಲಿ ನಿಯೋಜಿತವಾಗಿರುತ್ತದೆ. ಈ ಅಧಿಕಾರ ಬಳಕೆಗಾಗಿ ಅನೇಕ ಸಂಸ್ಥೆಗಳನ್ನು ರಚಿಸಲಾಗಿದ್ದು ಅವುಗಳ ಮೂಲಕ ಈ ರಾಜ್ಯ ವ್ಯವಸ್ಥೆ ಕ್ರಿಯಾಶೀಲವಾಗಿರುತ್ತದೆ. ಇಂತಹ ವ್ಯವಸ್ಥೆಯ ಸಂಕಲ್ಪ ಮೂಡಿದ್ದು ಮೂರು ನೂರು ವರ್ಷಗಳ ಗುಲಾಮಿತನದ ವಿರುದ್ಧ ಮೂಡಿದ ನಮ್ಮ ಸ್ವಾತಂತ್ರ್ಯ ಹೋರಾಟದ ಮೂಸೆಯಲ್ಲಿ. ಆ ಸಂಕಲ್ಪ ಸಾಕಾರಗೊಂಡದ್ದು ಈ ಹೋರಾಟದ ವಿವೇಕವೆಲ್ಲ ಪ್ರತಿಫಲನಗೊಂಡಂತೆ ರೂಪಿತವಾದ ನಮ್ಮ ಸಂವಿಧಾನದಲ್ಲಿ. ಹಾಗಾಗಿ ಗಣರಾಜ್ಯೋತ್ಸವ ಎಂದರೆ ಸಂವಿಧಾನದ ಉತ್ಸವ ಆದರೆ ನಾವು ಕಳೆದ ೭೦ ವರ್ಷಗಳಲ್ಲಿ ನಡೆಸಿದ ರಾಷ್ಟ್ರಜೀವನವನ್ನೊಮ್ಮೆ ಹಿಂತಿರುಗಿ ನೋಡಿದರೆ ನಾವು ಈ ವರ್ಷ ಆಚರಿಸಿದ ಉತ್ಸವ ಎಷ್ಟು ಪ್ರಾಮಾಣಿಕವಾದದ್ದು ಎಂದು ಕೇಳಿಕೊಳ್ಳಬೇಕಾಗುತ್ತದೆ. ನಿರ್ದಿಷ್ಟವಾಗಿ ಕಳೆದ ಒಂದು ವರ್ಷದಲ್ಲಿ ನಡೆದಿರುವ ನಾಟಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಪ್ರಶ್ನೆ ಇನ್ನಷ್ಟು ಕರಾಳ ಬಣ್ಣ ಪಡೆಯುತ್ತದೆ.

. ಪ್ರಜಾಪ್ರಭುತ್ವಕ್ಕೆ ಒಂದು ನೆಪ ಮಾತ್ರವಾಗಿರಬೇಕಿದ್ದ ಚುನಾವಣೆಯೇ ಈಗ ಅದರ ಎಲ್ಲವೂ ಆಗಿಬಿಟ್ಟಿದೆ. ಅದು ನಡೆಯುವ ರೀತಿಯೇ ರಾಷ್ಟ್ರಜೀವನದ ಎಲ್ಲವನ್ನೂ ನಿಯಂತ್ರಿಸುವಂತಾಗಿದೆ. ಇದಕ್ಕೆ ಕಾರಣ ನಾವು ನಮ್ಮನ್ನು ಸಾಂವಿಧಾನಿಕ ಆಡಳಿತ ವ್ಯವಸ್ಥೆಗೆ ಅರ್ಪಿಸಿಕೊಂಡಾಗ ಪ್ರಜೆ ತನ್ನ ನಿಯಂತ್ರಣದಲ್ಲಿ ತಾನಿದ್ದು, ಸಹಬಾಳ್ವೆಯ ವಿವೇಕವನ್ನು ಕಳೆದುಕೊಳ್ಳುವುದಿಲ್ಲ ಎಂಬ ನಂಬಿಕೆ ಇತ್ತು. ಆದರೆ ಕಳೆದ ಎಪ್ಪತ್ತು ವರ್ಷಗಳ ಅವಧಿಯಲ್ಲಿ ನಾವು 'ಅಭಿವೃದ್ಧಿ' ಹೊಂದಲು ಬಳಸಿದ ವಿಧಾನಗಳು ಮತ್ತು ಅದಕ್ಕಾಗಿ ಸೃಜಿಸಿದ ಹಾಗೂ ಅವುಗಳ ಜಾಗದಲ್ಲಿ ಪಡೆದುಕೊಂಡ ಮೌಲ್ಯಗಳು ನಮ್ಮನ್ನು ಕೇಂದ್ರರಹಿತರನ್ನಾಗಿ ಮಾಡಿವೆ. ಹಾಗಾಗಿಯೇ ಇಂದು ಚುನಾವಣೆಗಳು ಪ್ರಜಾಧಿಕಾರದ ಪವಿತ್ರ ಅಭಿವ್ಯಕ್ತಿಯಾಗದೆ ಒಂದು ಮಹಾ ದಂಧೆಯ, ಹೂಡಿಕೆ, ಲಾಭಗಳ, ಕತ್ತು ಕೊಯ್ಯುವ ಕ್ರೂರ ಆಖಾಡವಾಗಿದೆ. ಇದರ ಹಿಂದಿನ ಮೌಲ್ಯ ಪಲ್ಲಟ ಎಲ್ಲ ವಲಯಗಳಲ್ಲೂ ಪ್ರಭಾವ ಬೀರಿದ್ದು ಅವು ನಮ್ಮ ಸಾಂವಿಧಾನಿಕ ಸಂಸ್ಥೆಗಳನ್ನೂ ಬಿಕ್ಕಟ್ಟಿಗೆ ಸಿಕ್ಕಿಸಿರುವುದರಲ್ಲಿ ಆಶ್ಚರ್ಯವೇನು?

ಪೌರತ್ವ ತಿದ್ದುಪಡಿ ಕಾಯಿದೆ ವಿರುದ್ಧ ರಾಷ್ಟ್ರಾದ್ಯಂತ ಜನ ದನಿ ಎತ್ತಿ ಪ್ರತಿಭಟಿಸುತ್ತಿದ್ದರೂ, ಬಹುತೇಕ ರಾಜ್ಯಸರ್ಕಾರಗಳು ಅದರ ಸಾಂವಿಧಾನಿಕತೆಯನ್ನು ಪ್ರಶ್ನಿಸಿ ಅದರ ಅನುಷ್ಠಾನ ಮಾಡುವುದಿಲ್ಲವೆಂದು ಹೇಳುತ್ತಿದ್ದರೂ ಕೇಂದ್ರ ಸರ್ಕಾರ ಜಿದ್ದಿಗೆ ಬಿದ್ದಂತೆ ಈ ಪ್ರತಿಭಟನೆಗಳನ್ನು ಅಡಗಿಸುವ, ಅವುಗಳಿಗೆ ಕೋಮುವಾದದ ಮತ್ತು ರಾಷ್ಟ್ರದ್ರೋಹದ ಬಣ್ಣ ನೀಡುವ ಪ್ರಯತ್ನದಲ್ಲಿ ತೊಡಗಿರುವುದು ನಮ್ಮ ಗಣರಾಜ್ಯತ್ವಕ್ಕೆ, ಪ್ರಜಾಶಕ್ತಿಗೆ ಮಾಡುತ್ತಿರುವ ಅಪಚಾರವೇ ಆಗಿದೆ.. ಸಂವಾದ, ಸಂಧಾನದ ಬಾಗಿಲುಗಳನ್ನೇ ಮುಚ್ಚಿರುವ ಕೇಂದ್ರ ಸರ್ಕಾರದ ಧಾರ್ಷ್ಟ್ಯ ಅದಕ್ಕೆ ಬಂದಿರುವುದು ಕಳೆದ ಚುನಾವಣೆಗಳಲ್ಲಿ ಅದಕ್ಕೆ ದೊರೆತಿರುವ ಅತಿಶಯದ ಬಹುಮತ. ಇದನ್ನು ಸಾಧ್ಯಮಾಡಿರುವುದು ಏನೆಂದು ಮೇಲೆ ಸೂಚಿಸಲಾಗಿದೆ. ಇವುಗಳ ಜೊತೆ ಈಗ ಸೇರಿರುವುದು ಮತ ಮತ್ತು ರಾಷ್ಟ್ರಭಕ್ತಿಗಳ ಉನ್ಮಾದ ಹಾಗೂ 'ಬಲಿಷ್ಠ ರಾಷ್ಟ್ರ'ದ ಕನಸು. ಈ ಸರ್ಕಾರ ರಿಸರ್ವ್ ಬ್ಯಾಂಕ್, ಚುನಾವಣಾ ಆಯೋಗ ಮತು ನ್ಯಾಯಾಲಯಗಳ ಪ್ರತಿಕೂಲ ಅಭಿಪ್ರಾಯಗಳ ಹೊರತಾಗಿಯೂ ರಾಜಕೀಯ ಪಕ್ಷಗಳಿಗೆ ಗುಪ್ತ ದೇಣಿಗೆ ನೀಡಲು ಅವಕಾಶವಿರುವ ಚುನಾವಣಾ ಬಾಂಡ್ ವ್ಯವಸ್ಥೆಯನ್ನು ಜಾರಿಗೆ ತಂದಿರುವ ರೀತಿಯೇ ಇದಕ್ಕೊಂದು ಉದಾಹರಣೆ.

. ಇನ್ನು ಪೌರತ್ವ ತಿದ್ದುಪಡಿ ಕಾಯಿದೆ ರಾಷ್ಟ್ರದಲ್ಲಿ ಎದುರಿಸುತ್ತಿರುವ ಪ್ರತಿರೋಧ ಕಣ್ಣ ಮುಂದಿದ್ದರೂ ನಮ್ಮ ಸರ್ವೋನ್ನತ ನ್ಯಾಯಾಲಯ ಅದರ ವಿಚಾರಣೆಯ ತುರ್ತನ್ನು ಅರಿಯದೇ ಹೋಗಿದೆಯೇನೋ ಎಂಬ ಆತಂಕ ಹಲವರಲ್ಲಿ ಉಂಟಾಗಿರುವುದಂತೂ ನಿಜ. ಅದು ಹಿಂಸೆ ನಿಲ್ಲುವವರೆಗೂ ವಿಚಾರಣೆ ಅಸಾಧ್ಯ ಎಂಬರ್ಥದ ಮಾತಾಡಿರುವುದಂತೂ ಇನ್ನಷ್ಟು ಆತಂಕನ್ನುಂಟು ಮಾಡುವಂತಹದ್ದು. ಏಕೆಂದರೆ ಇದು ಸರ್ಕಾರದ ಭಾಷೆ. ಹಾಗೇ ರಾಷ್ಟ್ರಪತಿ ಕೋವಿಂದ್ ಅವರು ತಮ್ಮ ಗಣರಾಜ್ಯೋತ್ಸವ ಭಾಷಣದಲ್ಲಿ ಮಹಾತ್ಮ ಗಾಂಧಿಯವರನ್ನು ನೆನಪಿಸಿಕೊಂಡು ರಾಷ್ಟ್ರಕ್ಕೆ ಅಹಿಂಸೆಯ ಸಂದೇಶ ನೀಡಿರುವುದು. ಇಂದು ಈ ಸಂದೇಶ ಬೇಕಿರುವುದು ಜನಗಳಿಗಲ್ಲ, ಶಾಂತಿಯುತ ಪ್ರತಿಭಟನೆಗಳು ಪೋಲೀಸರ ಗೋಲಿಬಾರ್ ಮತ್ತು ಹಲವು ನಾಗರೀಕರ ಸಾವುಗಳಲ್ಲಿ ಕೊನೆಗೊಳ್ಳುವಂತೆ ಮಾಡಿರುವ ಮತ್ತು ಪ್ರತಿಭಟನೆಗಳನ್ನು ವಸಾಹತುಶಾಹಿ ಕಾಲದ ಸೆಕ್ಷನ್ ೧೪೪ನ್ನು ಜಾರಿಗೆ ತಂದು ಹತ್ತಿಕ್ಕುತ್ತಿರುವ ಪ್ರಯತ್ನಗಳನ್ನು ಮಾಡಿರುವ ಬಿಜೆಪಿ ಆಡಳಿತದ ರಾಜ್ಯ ಸರ್ಕಾರಗಳಿಗೆ. 'ನಾವು ಅಧಿಕಾರದಲ್ಲಿದ್ದೆಡೆಯಲ್ಲೆಲ್ಲ ಪ್ರತಿಭಟನಾಕಾರರನ್ನು ನಾಯಿಗಳಂತೆ ಹೊಡೆದುಹಾಕಿದ್ದೇವೆ' ಎಂದಿರುವ ಪ. ಬಂಗಾಳದ ಬಿಜೆಪಿ ಅಧ್ಯಕ್ಷ ಮಹಾಶಯನ ಮಾತು ಹೇಳುವುದೂ ಇದನ್ನೇ ಅಲ್ಲವೆ?

ಜೊತೆಗೆ ನೆಪ ಸಿಕ್ಕರೆ ಸಾಕೆಂಬಂತೆ ರಾಷ್ಟ್ರದ್ರೋಹದ ಮೊಕದ್ದಮೆಗಳನ್ನು ಹೂಡಿ ಕಿರುಕುಳ ಕೊಡುವ ಪ್ರವೃತ್ತಿ. ಮೊನ್ನೆ ಮೈಸೂರಿನ ಪ್ರತಿಭಟನೆಯೊಂದರಲ್ಲಿ 'ಫ್ರೀ ಕಾಶ್ಮೀರ್' ಎಂಬ ಫಲಕ ಹಿಡಿದದಕ್ಕಾಗಿ ಓರ್ವ ಯುವತಿಯ ಮೇಲೆ ರಾಷ್ಟ್ರದ್ರೋಹದ ಮೊಕದ್ದಮೆ ಹೂಡಿದ್ದಲ್ಲದೆ ಆಕೆಯ ಪರ ಯಾರೂ ವಕಾಲತ್ತು ವಹಿಸಬಾರದೆಂಬ ಅ ಊರಿನ ವಕೀಲರ ಸಂಘ ಅನುಮೋದಿಸಿರುವ ನಿರ್ಣಯ ಬರಲಿರುವ ದಿನಗಳ ಬಗ್ಗೆ ನಿಜವಾಗಿಯೂ ಭಯವನ್ನೇ ಹುಟ್ಟಿಸುತ್ತಿದೆ. ರಾಷ್ಟ್ರ ನಿಷ್ಠೆ ಅಥವಾ ಭಕ್ತಿ ಎನ್ನುವುದು ನಾಗರಿಕ ಹಕ್ಕುಗಳ ದಮನದ ಅಸ್ತ್ರವಾಗುತ್ತಿರುವುದಾದರೂ ಏನನ್ನು ಸೂಚಿಸುತ್ತದೆ? ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿದೆ ಎಂಬುದು ಎಂದೋ ತೀರ್ಮಾನವಾಗಿರುವ ವಿಷಯ. ಆದರೆ ನಮ್ಮಲ್ಲಿ ಮಾತ್ರವಲ್ಲ, ನಾಗರಿಕ ಹಕ್ಕುಗಳ ಹಲವು ಜಾಗತಿಕ ಸಂಸ್ಥೆಗಳ ಮತ್ತು ಮುತ್ಸದ್ದಿಗಳ ಆತಂಕಕ್ಕೆ ಕಾರಣವಾಗಿರುವುದು ಅಲ್ಲಿನ ಸಾಮಾನ್ಯ ಪ್ರಜೆಗಳು ಮತ್ತು ನಾಯಕರ ಮೇಲೆ ಹೇರಿರುವ ದೀರ್ಘಕಾಲೀನ ನಿರ್ಬಂಧಗಳ ಬಗ್ಗೆ. ಆ ಯುವತಿಯ ಫಲಕ ಸೂಚಿಸಿದ್ದೂ ಈ ಆತಂಕವನ್ನೇ. ಆದರೆ ಅದನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸುವಂತೆ ಹೇರಿರುವ ಒತ್ತಾಯ ನಮ್ಮ ಪ್ರಜೆತನವನ್ನೂ ಹೀಗೆ ಸಾಬೀತುಗೊಳಿಸಲು ಒತ್ತಾಯಿಸುವಂತೆ ತೋರುವ ಪೌರತ್ವ ನೋಂದಣಿ ಕಾಯಿದೆ ಕುರಿತ ಮುನ್ನೆಚ್ಚರಿಕೆಯಂತೆಯೇ ಕೇಳಿಸುತ್ತಿದೆ. ಇಂತಹ ಸಂದರ್ಭದಲ್ಲಿ ರಾಷ್ಟ್ರ ಆರ್ಥಿಕವಾಗಿ ಮಾತ್ರವಲ್ಲ, ಪ್ರಜಾಪ್ರಭುತ್ವದ ಸೂಚ್ಯಂಕಗಳಲ್ಲೂ ಕುಸಿಯುತ್ತಿದೆ ಎಂಬ ಜಾಗತಿಕ ಸಂಸ್ಥೆಗಳ ವರದಿಗಳು ಸರ್ಕಾರಕ್ಕೆ ಮುಜುಗರವನ್ನುಂಟು ಮಾಡಬಲ್ಲವೆಂದು ನಾವು ನಿರೀಕ್ಷಿಸಲಾಗದೇನೋ.

ಈ ದುರಂತದ ನೋವನ್ನು ಹೆಚ್ಚಿಸಿರುವುದು, ನಮ್ಮ ಪ್ರತಿಪಕ್ಷಗಳ, ನಿರ್ದಿಷ್ಟವಾಗಿ ಕಾಂಗ್ರೆಸ್ ಪಕ್ಷದ ನೈತಿಕ ದಿವಾಳಿತನ. ಈ ಪ್ರತಿಪಕ್ಷಗಳ ಹಲವು ನಾಯಕರ ಹಳೆಯ ಭೋಜನಗಳ ಪರಿಣಾಮಗಳು ಅವರ ಗಂಟಲುಗಳನ್ನು ಅರೆಮುಚ್ಚಿಬಿಟ್ಟಿವೆ. ಇನ್ನು ಕಾಂಗ್ರೆಸ್ ಇತ್ತೀಚೆಗೆ ಹಲವು ರಾಜ್ಯಗಳಲ್ಲಿ ಮತ್ತೆ ಚಿಗುರೊಡೆದಿರುವ ಸಂಭ್ರಮದಲ್ಲಿ ತನ್ನ ವಂಶಾಡಳಿತಕ್ಕೆ ಮತ್ತೆ ಸಮರ್ಥನೆಯನ್ನು ಕಂಡುಕೊಂಡ ನೆಮ್ಮದಿಯಲ್ಲಿದ್ದಂತಿದೆ!.

ಈ ಸಂಕಟದ ಸಂದರ್ಭದಲ್ಲಿ ;ಹೊಸ ಮನುಷ್ಯ;' ತನ್ನ ೯ನೇ ಹುಟ್ಟುಹಬ್ಬವನ್ನು ಯಾವ ಸಂಭ್ರಮದೊಂದಿಗೆ ಆಚರಿಸಿಕೊಳ್ಳಬೇಕೋ ತೋಚದಾಗಿದೆ. ಆದರೆ ಒಂದು ಮಾತು: ಓದುಗರ ನೈತಿಕ ಬೆಂಬಲ ಇರುವರೆಗೂ ಪತ್ರಿಕೆ ನಿಷ್ಠುರ ಸತ್ಯಗಳನ್ನು ಹೇಳಲು ಹಿಂಜರಿಯುವುದಿಲ್ಲ.

-ಸಂಪಾದಕ

# 'ಹೊಸ ಮನುಷ್ಯ'ದ ೯ನೇ ವರ್ಷ ಓದುಗರ ಅನ್ನಿಸಿಕೆಗಳು



ಪತ್ರಿಕೆಯ ಖಚಿತ ಹೆಜ್ಜೆ, ತನಗೆ ಕಂಡ ಸತ್ಯವನ್ನು ನಿರ್ಭಿಡೆಯಿಂದ ನುಡಿಯುವ ಆತ್ಮಸ್ಥೈರ್ಯ ನನಗೆ ತುಂಬ ಮೆಚ್ಚುಗೆ.ನನ್ನೊಳಗೆ ಸಂವಾದದ ಧ್ವನಿ ಏಳಿಸುವ 'ಹೊಸ ಮನುಷ್ಯ' ಈಗ ನನ್ನ ಓದಿನ ಒಂದು ಮುಖ್ಯ ಅಂಗವೇ ಆಗಿದೆ.

**–ವೈದೇಹಿ,** ಮಣಿಪಾಲ

'ಹೊಸ ಮನುಷ್ಯ"ನ ಪಯಣ ಅರ್ಥಪೂರ್ಣ ಹಾಗೂ ಸಾರ್ಥಕ.ಮನದ ಪರಿಶುದ್ಧಿ, ಚಿಂತನೆಗಳ ಸ್ಪಷ್ಟತೆ, ಸಿದ್ಧಾಂತಗಳ ಪರಿಚಯ ವಿಮರ್ಶೆ, ಸಮಕಾಲೀನ ಆಗು ಹೋಗುಗಳ ಬಗ್ಗೆ ಪರಿಶೀಲನೆ, ಕಥೆ ಕವನ ನಾಟಕವನ್ನೊಳಗೊಂಡ ಸಾಹಿತ್ಯ ಧಾರೆಗಳ ಒಳನೋಟ, ಆಧ್ಯಾತ್ಮಿಕ ಲೋಕದ ಒಳಹರಿವುಗಳಿಂದ ಓದುಗರನ್ನು ಮಾನಸಿಕವಾಗಿ ಸಮೃದ್ಧಗೊಳಿಸುತ್ತಲೇ ಸದಾ ಎಚ್ಚರದ ಸ್ಥಿತಿಯಲ್ಲಿ ಇಟ್ಟಿರುವ ಪರಿ ಅನನ್ಯವಾದುದು.

**–ಬಿ.ಎಸ್, ದಿವಾಕರ್,**ಅಲ್ಮೋರಾ (ಉತ್ತರಾಖಂಡ)

ಕಳೆದ ನಾಲ್ಕಾರು ವರ್ಷ್ಯಂದ ನಾನು ಇಷ್ಟಪಟ್ಟು ಓದುತ್ತಿರುವ 'ಹೊಸ ಮನುಷ್ಯ', ಸ್ವಾತಂತ್ರ್ಯ ಸಮಾನತೆ ಮತ್ತು ಪ್ರಜಾಪ್ರಭುತ್ವಗಳ ಮೌಲ್ಯಗಳನ್ನು ಕಾಪಾಡುವ ಮತ್ತು ಸಾಂಸ್ಕೃತಿಕ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿರುವ ಸಂದರ್ಭದ ಅಗತ್ಯ ವೇದಿಕೆಯಾಗಿದೆ.

**–ಎಂ..ಜಿ. ಚಂದ್ರಶೇಖರಯ್ಯ,** ದೊಡ್ಡಬಳ್ಳಾಪುರ

ನಿಷ್ಠುರ, ನಿರ್ಭಿಡೆಯ ಖಡಕ್ ಪತ್ರಿಕೆ. ವರ್ಷ ಒಂಬತ್ತಾದರೂ ಹೊಸತನವು ಮಾಸಿಲ್ಲ; ಎಂದಿನ ಜೀವಂತಿಕೆಯನ್ನು ಉಳಿಸಿಕೊಂಡಿದೆ.

**–ಮಿರ್ಜಾ ಬಷೀರ್,** ತುಮಕೂರು

ಕನ್ನಡದಲ್ಲಿ ಗಂಭೀರವಾದ ಮತ್ತು ಬೌದ್ಧಿಕವಾಗಿ ಶ್ರೀಮಂತವಾದ ಚಿಂತನೆಗಳನ್ನು ಪ್ರಚುರಗೊಳಿಸುವ ತನ್ನ ಕೆಲಸವನ್ನು ಈ ಎಂಟು ವರ್ಷಗಳಲ್ಲಿ ಒಂದು ವ್ರತದಂತೆ ಪಾಲಿಸಿಕೊಂಡು ಬಂದಿರುವ 'ಹೊಸ ಮನುಷ್ಯ' ಈಗ ಇಡೀ ಸಮಾಜವೇ 'ಆಂಟಿ ಇಂಟೆಲೆಕ್ಚುಯಲ್' ಆಗಿದೆಯೇನೋ ಎಂದು ಭಾಸವಾಗುತ್ತಿರುವ ಈ ಕಾಲದಲ್ಲಿ ಹೀಗೆ ಅಚಲವಾಗಿ, ಬಾಗದೆ ಇರುವುದು ಸಂತೋಷದ, ಹೆಮ್ಮೆಯ ಸಂಗತಿಯಾಗಿದೆ.

**–ನಿತ್ಯಾನಂದ ಬಿ. ಶೆಟ್ಟಿ,** ತುಮಕೂರು

ಕೆಲವೊಮ್ಮೆ ನನ್ನ ಮನಸ್ಸಿನ ತಲ್ಲಣ–ತಾಕಲಾಟಗಳಿಂದ ಮೂಡುವ ಆಲೋಚನೆಗಳನ್ನೇ ತನ್ನ ಸಂಪಾದಕೀಯದಲ್ಲಿ ಮೂಡಿಸುತ್ತಿರುವಂತಹ 'ಹೊಸ ಮನುಷ್ಯ' ಮನುಷ್ಯ ಮನುಷ್ಯನಾಗಿ ಉಳಿಯದೆ ರಾಕ್ಷಸನಾಗಿ ತಾನು ವಾಸಿಸುತ್ತಿರುವ ಈ ಭೂಮಿಯನ್ನೇ ಗಂಡಾಂತರಕ್ಕೊಡ್ಡಿರುವ ಈ ವಿಷಮ ದಿನಗಳಲ್ಲಿ ಹೊಸ ಮನುಷ್ಯರ ಸೃಷ್ಟಿಯ ತನ್ನ ಕಾಯಕವನ್ನು ಮುಂದುವರೆಸಲಿ.

**–ಜಯರಾಮ ಪಾಟೀಲ,** ಹದಜನ (ಮೈಸೂರು ಜಿ.)

ಈತ್ತೀಚಿನ ದಿನಗಳಲ್ಲಿ ಸಮಕಾಲೀನ ಸಾಮಾಜಿಕ ರಾಜಕೀಯ ಸಂಗತಿಗಳನ್ನು ನಿರ್ಭಿಡೆಯಿಂದ ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ ಓದುಗರಿಗೆ ತಲುಪಿಸುವ ಏಕೈಕ ಪತ್ರಿಕೆಯಾದ 'ಹೊಸ ಮನುಷ್ಯ'ದ ಬರವನ್ನು ನಾನು ಪ್ರತಿ ತಿಂಗಳೂ ಎದುರು ನೋಡುತ್ತಿರುತ್ತೇನೆ. ಗಾಂಧಿ, ಲೋಹಿಯಾ, ಅಂಬೇಡ್ಕರ್ ಚಿಂತನೆಗಳನ್ನು ಅದು ಮಂಡಿಸುವ ರೀತಿ, ಪೌರತ್ವ ತಿದ್ದುಪಡಿ ಕಾಯ್ದೆಯ ಕುರಿತು ಬರೆದ ವಿಸ್ತೃತ ಲೇಖನ ಹಾಗೂ ಸಂಪಾದಕೀಯಗಳು ನಿಖರವಾಗಿವೆ ಮತ್ತು ಮೊನಚಾಗಿವೆ. 'ಹೊಸ ಮನುಷ್ಯ' ನಮ್ಮ ಬಗೆಯನ್ನು ಹೊಸದಾಗಿಸುತ್ತ ಬೆಳೆಯಲಿ, ಬೆಳಸಲಿ.

**– ಬಿ.ಆರ್.ವೆಂಕಟರಮಣ ಐತಾಳ,** ಹೆಗ್ಗೋಡು

ಇತ್ತೀಚೆಗೆ ಪ್ರಕಟವಾದ 'ಗಾಂಧಿ ಕಥನ' ಮತ್ತು ಪ್ರತಿವರ್ಷ ಕುಪ್ಪಳಿಯಲ್ಲಿ ನಡೆಸುವ ವಾರ್ಷಿಕ ಸಮಾಜವಾದಿ ಶಿಬಿರಗಳ ಜೊತೆ 'ಎಂಟು ವರ್ಷಗಳ 'ಹೊಸ ಮನುಷ್ಯ' ಸೇರಿ ಡಿಎಸ್ಸೆನ್ ಅವರ ಸಾಧನೆಯ ತ್ರಿಭುಜ ರಚಿತವಾಗಿದೆ. ರಾಜಕೀಯ ಎಂಬುದು ಅಧೋಗತಿಗೂ, ಸಾಮಾಜಿಕ ತಿಳುವಳಿಕೆ ಎಂಬುದು ಪಾತಾಳಕ್ಕೂ ತಲುಪಿರುವ ಈ ಕಾಲಘಟ್ಟದಲ್ಲಿ ಗಾಂಧಿಯ ಪ್ರಸ್ತುತತೆಯನ್ನು ಸಾರುತ್ತಲೇ ತನ್ನ ಅನನ್ಯತೆಯನ್ನೂ ಕಾಪಿಟ್ಟುಕೊಂಡು ಬಂದಿರುವ ಈ ಪುಟ್ಟ ಪತ್ರಿಕೆ ಇನ್ನಷ್ಟು ಕಾಲ ಹೊಸ ಪೀಳಿಗೆಯ ಆಲೋಚನೆಗಳನ್ನು ಇನ್ನಷ್ಟು ಸಮೃದ್ಧಗೊಳಿಸುತ್ತಾ ಬೆಳೆಯಲಿ..

**–ರೋಹಿತ್** ಅಗಸರಹಳ್ಳಿ, ಹಾಸನ

'ಹೊಸ ಮನುಷ್ಯ' ಎಂಟು ವರ್ಷಗಳನ್ನು ಮುಗಿಸಿ ಈ ಫೆಬ್ರುವರಿ ಸಂಚಿಕೆಯೊಂದಿಗೆ ೯ನೇ ವರ್ಷಕ್ಕೆ ಕಾಲಿಡುತ್ತಿರುವ ಸಂಗತಿ ತಿಳಿದು ತುಂಬ ಸಂತೋಷವಾಯಿತು. ಸುದ್ದಿಗಳು ಮಾತ್ರವಲ್ಲ, ಅವುಗಳ ವಿಶ್ಲೇಷಣೆಗಳ ಮಟ್ಟಿಗೆ ಕೂಡ. ನಾನು ಈಗ ಕನ್ನಡದ ಜನಪ್ರಿಯ ಮಾಧ್ಯಮಗಳನ್ನು ಸುತರಾಂ ನಂಬುವುದಿಲ್ಲ. ನಾಡಿನಲ್ಲಿ ಏನು ನಡೆಯುತ್ತಿದೆ ಎಂಬುದರ ಅರಿವಿಗಾಗಿ ನಾನು ನೆಚ್ಚಿಕೊಂಡಿರುವುದು 'ಹೊಸ ಮನುಷ್ಯ' ಪತ್ರಿಕೆಯನ್ನು ಮಾತ್ರ. ನನ್ನ ಈ ನೆಚ್ಚಿನ ಪತ್ರಿಕೆ ಎಂಟು ವರ್ಷಗಳನ್ನು ಪೂರೈಸಿ ಈಗ ಒಂಬತ್ತನೇ ಹುಟ್ಟು ಹಬ್ಬವನ್ನು ಆಚರಿಸುಸುತ್ತಿರುವ ಈ ಸಂದರ್ಭದಲ್ಲಿ ನಿಮ್ಮನ್ನು ಅಭಿನಂದಿಸುತ್ತೇನೆ.

**–ಜಿ. ರಾಜಶೇಖರ,** ಉಡುಪಿ

'ಹೊಸ ಮನುಷ್ಯ' ಎಂಬ ಪುಟ್ಟ ಪತ್ರಿಕೆ ನಿಮ್ಮ ಪ್ರೀತಿಯ ನಮ್ಮ ಅಭಿಮಾನದ ಪುಟ್ಟ ಗಿಡ. ಈ ಮನುಷ್ಯ ಪಂಚಮರ ಸೋದರನೇ ಇರಬೇಕೆನಿಸುತ್ತಿದೆ..ಅದು ಒಣ ವೈಚಾರಿಕತೆಗಿಂತ ಲಂಕೇಶರ 'ಅವ್ವ'ನ ಒಳಗೊಳ್ಳುವಿಕೆಯಂತಿರಲಿ.

**–ಸುಬ್ಬು ಹೊಲೆಯಾರ್,** ಬೆಂಗಳೂರು

ಕಳೆದ ಎರಡು ವರ್ಷಗಳಿಂದ ಹೊಸ ಮನುಷ್ಯ ಪತ್ರಿಕೆಯ ಓದುಗನಾಗಿರುವ ನಾನು ಸದಾ ಪತ್ರಿಕೆಯ ನಿರೀಕ್ಷೆಯಲ್ಲಿರುತ್ತೇನೆ. ಪತ್ರಿಕೆ ನನಗೆ ಸಾಹಿತ್ಯ–ಸಂಸ್ಕೃತಿ–ರಾಜಕೀಯ ಸಂಗತಿಗಳನ್ನು ನೋಡುವ ಹೊಸ ಬಗೆಯನ್ನು ಕಲಿಸಿಕೊಟ್ಟಿದೆ. ಸಮಕಾಲೀನ ರಾಜಕೀಯ ಮತ್ತು ಸಾಮಾಜಿಕ ವಿದ್ಯಮಾನಗಳ ಬಗ್ಗೆ ದಾಕ್ಷಿಣ್ಯರಹಿತ,ವಸ್ತುನಿಷ್ಠ ಮತ್ತು ವಿಮರ್ಶಾತ್ಮಕ ಒಳನೋಟಗಳನ್ನು ಹೊಂದಿರುವ ಲೇಖನಗಳನ್ನು ಪ್ರತೀ ಸಂಚಿಕೆಯಲ್ಲಿ ಹೊತ್ತು ತರುವ ಪತ್ರಿಕೆ ನಿಜಕ್ಕೂ ಓದುಗನನ್ನು ಹೊಸ ಮನುಷ್ಯನನ್ನಾಗಿ ರೂಪಿಸುತ್ತಿದೆ.

**–ದಿನೇಶ್ ನಾಯಕ್,** ಮಂಗಳೂರು

ಏಳೆಂಟು ವರ್ಷಗಳ ಹಿಂದೆ ಈ ಪತ್ರಿಕೆಯಲ್ಲಿನ ಲೋಹಿಯಾ ಕುರಿತ ಹೊಸ ನೋಟದ ಲೇಖನವೊಂದರಿಂದ ಸೆಳೆಯಲ್ಪಟ್ಟ ನಾನು ಆಗಿನಿಂದಲೂ ಇದನ್ನು ಎಡೆಬಿಡದೆ ಓದುತ್ತಿದ್ದು, ಇದು ಗಾಂಧಿ, ಲೋಹಿಯಾ ಮತ್ತು ಅಂಬೇಡ್ಕರ್ ಮುಂತಾದ ಮಹಾ ಚಿಂತಕರ ಸಿದ್ಧಾಂತಗಳನ್ನು ಯಾವ ಅಭಿಮಾನಕ್ಕೂ ಒಳಗಾಗದೆ ಸಮಕಾಲೀನ ಸವಾಲುಗಳಿಗೆ ತಕ್ಕಂತೆ ಮರು ರೂಪಿಸುತ್ತಾ ನನ್ನ ಕುತೂಹಲವನ್ನು ಕಾಯ್ದುಕೊಂಡಿದೆ.

**–ಸಂಜಯಕುಮಾರ್,** ಬೊಕ್ಕಲೆಪುರ (ಚಾಮರಾಜನಗರ ಜಿ.)

'ಹೊಸ ಮನುಷ್ಯ' ಒಂದು ಒಳ್ಳೆಯ ಚಟವಿದ್ದಂತೆ. ತಿಂಗಳ ಮೊದಲ ವಾರ ಪತ್ರಿಕೆಗಾಗಿ ಕಾಯುವಂತಾಗುತ್ತದೆ. ಮೊದಲ ಪುಟದ ವಸ್ತುನಿಷ್ಠ ಸಂಪಾದಕೀಯದಿಂದ ಹಿಡಿದು ಕೊನೆಯ ಪುಟದ ಕೊನೆಯ ಸಾಲುಗಳಲ್ಲಿನ ಅನುಭಾವಿಕ ಉಲ್ಲೇಖದವರೆಗೂ ಮೌಲ್ಯಯುತ ಓದಿಗೆ ದೊರೆಯುವ ಪತ್ರಿಕೆ ಇದು. ಹುಟ್ಟುಹಬ್ಬದ ಶುಭಾಶಯಗಳು.

**–ಎನ್. ಆರ್. ಬಾಲಸುಬ್ರಮಣ್ಯ,** ಬೆಂಗಳೂರು

ಕೊನೆಯ ಪುಟದ ಕೊನೆಯ ಸಾಲುಗಳಲ್ಲೂ ಚಿಂತನಶೀಲತೆ ತುಂಬಿಕೊಂಡಿರುವ ಸಮಾಜವಾದದ ಈ ಕೈದೀವಿಗೆ ನನ್ನ ಅಕ್ಕರೆಯ, ಅಭಿಮಾನದ ಪತ್ರಿಕೆ.

**–ಆರ್. ಜ್ಯೋತಿ,** ಕಾರ್ಕಳ

ಪೌರತ್ವ ಮತ್ತು ನೋಂದಣಿ ಕಾಯ್ದೆ ಕುರಿತು ತಮ್ಮ ವಿಶ್ಲೇಷಣೆ ತುಂಬಾ ಪ್ರಬುದ್ಧವಾದುದು. ಕೇವಲ ಪೌರತ್ವ ಕಾಯ್ದೆಗೆ ಇಷ್ಟೊಂದು ಪ್ರತಿರೋಧ ಬರುತ್ತಿರಲಿಲ್ಲ ವೇನೋ. ಈಗ ಎಲ್ಲವೂ ಸಂಕೀರ್ಣಗೊಂಡಂತಾಗಿದೆ. ಇದು ಮತೀಯ ಆಧಾರದಲ್ಲಿ ಜನರನ್ನು ವಿಭಜಿಸುವ ಹುನ್ನಾರದಲ್ಲಿ ಯಶಸ್ವಿಯಾಗಿದೆ ಅಷ್ಟೆ. ಆದರೆ ಇಂಥ ಕ್ರಮ ಬೀದಿ ಕಾಳಗದ ಮಟ್ಟಕ್ಕೆ ಇಳಿದಿರುವುದು ಆತಂಕಕಾರಿ ಬೆಳವಣಿಗೆ ಆಗಿದೆ. ಇಸ್ಲಾಂ ಮೂಲಭೂತವಾದ ಅದಕ್ಕಾಗಿ ಸಾಕಷ್ಟು ಬೆಲೆ ತೆರುತ್ತಿದೆ .ಅಲ್ಲಿ ಸುಧಾರಣೆ ಒಳಗಿಂದಲೇ ಬರಬೇಕು. ಮೂಲಭೂತವಾದವನ್ನು ಪ್ರಚೋದಿಸುವ ಮೂಲಗಳ ನಿರ್ಮೂಲನೆ ಕಡೆಗೆ ಜಗತ್ತು ಗಮನಹರಿಸಬೇಕು.

ದೇಶಕ್ಕೆ ನೆಹರು ಅವರ ಕೊಡುಗೆಯನ್ನು ನೆನಪಿಸುವ ಲೇಖನ ಈಗ ಹೆಚ್ಚು ಪ್ರಸ್ತುತವೆನಿಸುತ್ತದೆ. ಆದಿವಾಸಿಗಳ ಕುರಿತು ಲೇಖನ ಸಕಾಲಿಕ. ಸುಜಾತಾ ಅವರ ಕತೆಯನ್ನು ತುಂಬಾ ಗಮನವಿಟ್ಟು ಓದಿದರೆ ಮಾತ್ರ ರಸಸ್ವಾದ. ಪುಸ್ತಕಗಳ ಅವಲೋಕನ, ಬಿಡಿ ಟಿಪ್ಪಣಿಗಳು ಬಹಳ ನಿಷ್ಟೂರವಾಗಿವೆ..

**–ವೆಂಕಟೇಶ ಮಾಚಕನೂರ,** ಧಾರವಾಡ



**'ಹೊಸ ಮನುಷ್ಯ'ದ ಮುಂದಿನ ಸಂಚಿಕೆ**
**ಮಹಿಳಾ ವಿಶೇಷ ಸಂಚಿಕೆ**

# ಡಾ. ಎಂ. ಚಿದಾನಂದ ಮೂರ್ತಿ



ನನ್ನ ಗುರುಗಳಾಗಿದ್ದ ಡಾ. ಎಂ. ಚಿದಾನಂದಮೂರ್ತಿಯವರನ್ನು ಕುರಿತು ಬರೆಯುವುದು ಸವಾಲು. ಭಾವುಕರೂ ಪ್ರಾಮಾಣಿಕರೂ ಧೈರ್ಯಶಾಲಿಯೂ ಹಟಮಾರಿಯೂ ನಿಸ್ವಾರ್ಥಿಯೂ ಆದ ಈ 'ಸಂಶೋಧಕ'ರ ಜೀವನವು ಪ್ರೀತಿ–ದ್ವೇಷಗಳೆರಡನ್ನೂ ಪಡೆದುಕೊಂಡಿದೆ. ಅವರ ಇತಿಮಿತಿಗಳನ್ನು ಕಾಣಿಸುವ ಕನ್ನಡಿಯಲ್ಲಿ, 'ಬೆಲೆಕಟ್ಟುವ' ನಮ್ಮ ಇತಿಮಿತಿಗಳೂ ಢಾಳಾಗಿ ಕಾಣಿಸುತ್ತಿವೆ. ವ್ಯಕ್ತಿಯ 'ವರ್ತಮಾನ'ವನ್ನು ಮಾತ್ರ ಗಮನಿಸಿ ಅವರು ಕಳೆದ ಕಾಲದಲ್ಲಿ ಮಾಡಿದ್ದನ್ನು ಮರೆಯುವುದು ನಮ್ಮ ಪರಿಪಾಠವಾಗಿಬಿಟ್ಟಿದೆ. ಆ ಮರವೆಯಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಸೇರುತ್ತವೆ. ಚಿದಾನಂದಮೂರ್ತಿಯವರ ಬದುಕು–ಬರಹಗಳಲ್ಲಿ ಬದಲಾಗದ ಕೆಲವು ಒಳ್ಳೆಯ ಲಕ್ಷಣಗಳಿದ್ದವು. ಅಂತೆಯೇ ಅವರು 'ಪ್ರಾಮಾಣಿಕ'ವಾಗಿಯೇ ಪ್ರಗತಿಪರವಾದ ಹಲವು ಮೌಲ್ಯಗಳನ್ನು ನಿರಾಕರಿಸುತ್ತಾ ಹೋದರು. ಕೊನೆಕೊನೆಯ ವರ್ಷಗಳಲ್ಲಿ 'ಹಿಂದುತ್ವ'ವನ್ನು ಮೆರೆಸುವ ಸಂಸ್ಥೆಗಳು ತಮ್ಮನ್ನು 'ವಶ' ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟರು.

ಅವರ ಜೀವನವನ್ನು ಮೈಸೂರಿನ 'ಅಕಡೆಮಿಕ್' ಸಂಶೋಧನೆ, ಬೆಂಗಳೂರಿನಲ್ಲಿ ಆಕಾರ ಪಡೆದುಕೊಂಡ ಅಂತರ್ಶಿಸ್ತೀಯ ಸಂಶೋಧನೆ, ಕನ್ನಡ ಚಳುವಳಿಗಳ ಮರುರೂಪಣ ಮತ್ತು ಹಿಂದುತ್ವದ ಪ್ರತಿಪಾದನೆ ಎಂದು ವಿಂಗಡಿಸಬಹುದು. ಮೆಡಿಕಲ್ ಸೀಟನ್ನು ತಿರಸ್ಕರಿಸಿ ಕನ್ನಡ ಆನರ್ಸ್ ಮಾಡಿದ್ದು, ಚೀನಾ–ಭಾರತ ಯುದ್ಧದ ಸಂದರ್ಭದಲ್ಲಿ, ಚಿನ್ನದ ಪದಕಗಳನ್ನು ಫುಟ್‌ಪಾತಿನಲ್ಲಿ ಮಾರಾಟಮಾಡಿ ರಕ್ಷಣಾನಿಧಿಗೆ ಹಣ ಸಂಗ್ರಹಿಸಿದ್ದು, ರೆಕ್ಸ್ ಟಾಕೀಸಿನಲ್ಲಿ, ಕನ್ನಡದಲ್ಲಿ ಕೇಳಿದಾಗ ಟಿಕೆಟ್ ಕೊಡಲಿಲ್ಲವೆಂಬ ಮುನಿಸಿನಿಂದ ಕನ್ನಡ ಚಳುವಳಿಗೆ, 'ಹಫ್ತಾ ಕಲೆಕ್ಷನ್' ಮೀರಿದ ಆಯಾಮಗಳನ್ನು ಕೊಟ್ಟಿದ್ದು, ಬೆಂಗಳೂರಿನಿಂದ ಹಂಪಿಯವರೆಗೆ 'ಕಾಲ್ನಡಿಗೆ'ಯ ಕನ್ನಡಾಯಾಣ, ತುಂಗಭದ್ರೆಯಲ್ಲೇ ಜಲಸಮಾಧಿಯಾಗುವ ಪ್ರಯತ್ನ ... ಇವೆಲ್ಲವೂ ಅನೇಕರಿಗೆ 'ಹುಂಬತನದ ಆವೇಶ'ದಂತೆ ಕಂಡರೂ ಅದು ಅವರ ಪ್ರಾಮಾಣಿಕವಾದ 'ಡಾನ್ ಕ್ವಿಕ್ಸೋಟ್‌ತನ'ಕ್ಕೆ ಸಾಕ್ಷಿ. ಅವರು ಹಣ–ಕಾಸು, ಸ್ಥಾನ–ಮಾನ, ಕೀರ್ತಿ, ಲೋಲುಪತೆ ಮುಂತಾದವುಗಳ ಬೆನ್ನುಬಿದ್ದು ಭ್ರಷ್ಟರಾಗಲಿಲ್ಲ. ಆದರೆ, ಕಪ್ಪು–ಬಿಳಿಗಳನ್ನು ನಿಷ್ಠುರವಾಗಿ ಗುರುತಿಸುತ್ತಿದ್ದ ಅವರ 'ನೈತಿಕತೆ'ಗೆ, ತನ್ನ ಆಸಕ್ತಿಯಾಚೆಗಿನ ಸಾಮಾಜಿಕ/ರಾಜಕೀಯ ಚಲನವಲನಗಳು, ಸೂಕ್ಷ್ಮಗಳು ಅರ್ಥವಾಗಲಿಲ್ಲ, ಇಷ್ಟವಾಗಲಿಲ್ಲ. ಆದ್ದರಿಂದಲೇ ಅವರಿಗೆ ಕರ್ನಾಟಕದ 'ಬಹುತ್ವ'ವನ್ನು ಕಂಡುಕೊಳ್ಳಲು ಸಾಧ್ಯವಾಗಲಿಲ್ಲ. .ಅವರು ವರ್ಣ, ವರ್ಗ ಮತ್ತು ಲಿಂಗಗಳ ಪರಿಣಾಮವಾದ ದುರಂತಗಳನ್ನು ಗ್ರಹಿಸುವ ಅಕಡೆಮಿಕ್ ಪ್ರಯತ್ನವನ್ನೂ ಮಾಡಲಿಲ್ಲ.

ಅವರ ಬಹುಪಾಲು ಸಂಶೋಧನೆಗಳು 'ಅಕಡೆಮಿಕ್ ನೆಲೆ'ಯಿಂದ 'ಸಂಸ್ಕೃತಿ ಅಧ್ಯಯನ'ದ ಕಡೆಗೆ ಚಲಿಸುತ್ತಿದ್ದ ವಿದ್ವಾಂಸರ ಸಾಧಕ–ಬಾಧಕಗಳನ್ನು ತೋರಿಸುತ್ತವೆ. 'ಸತ್ಯವನ್ನು ಕಂಡುಹಿಡಿಯುವ ಹಂಬಲ'ದಲ್ಲಿ ಆ 'ಸತ್ಯ'ಕ್ಕೆ ಇರಬಹುದಾದ ಸಾಪೇಕ್ಷ ನೆಲೆಗಳನ್ನು, 'ಸತ್ಯ'ವೂ ಯಾರೋ ಕಟ್ಟಿಕೊಟ್ಟ ರಚನೆಯಾಗಿರುವ, 'ಸತ್ಯವು' ವರ್ತಮಾನದಲ್ಲಿ 'ದುರ್ಬಳಕೆ'ಯಾಗುವ ಸಾಧ್ಯತೆಗಳನ್ನು ಅವರು ಮರೆತರು, ಅವರ ಪೀಳಿಗೆಯ ಹಲವರು ಮರೆತರು. ಆದರೆ, ಶಾಸನಶಾಸ್ತ್ರ, ಸಂಸ್ಕೃತಿ ಅಧ್ಯಯನ, ಭಾಷಾಶಾಸ್ತ್ರ, ಸಾಹಿತ್ಯಕ ಸಂಶೋಧನೆ ಮುಂತಾದ ಕ್ಷೇತ್ರಗಳಲ್ಲಿ ಹರಡಿಕೊಂಡಿರುವ ಅವರ ಪುಸ್ತಕಗಳು ಸ್ಪಷ್ಟತೆ, ಪ್ರಾಮಾಣಿಕತೆ, ಕ್ಷೇತ್ರಕಾರ್ಯ ಹಾಗೂ ವಿಶಾಲವಾದ ಓದಿನಂತಹ ಸಂಗತಿಗಳಿಂದ ಇಂದಿಗೂ ಮಾದರಿಯಾಗಿವೆ. ವಿದ್ಯಾರ್ಥಿಯಾದಾಗ ಆ ಪುಸ್ತಕಗಳಿಂದ, ಅನಂತರ ಅವರ ಪ್ರೀತಿಯಿಂದ ಲಾಭ ಪಡೆದವನು ನಾನು. ಶಂ.ಬಾ., ಸೇಡಿಯಾಪು, ಷ. ಶೆಟ್ಟರ್, ಡಿ.ಎನ್. ಶಂಕರಭಟ್ ಮುಂತಾದ ಹಿರಿಯರೊಂದಿಗೆ ವಿದ್ವತ್‌ಸಂವಾದಗಳನ್ನು ನಡೆಸದೆ ಇದ್ದುದನ್ನೂ ವಿಷಾದದಿಂದಲೇ ಕಂಡಿದ್ದೇನೆ.

ತಪ್ಪು ವಿಚಾರಗಳನ್ನು ಹೊಂದಿರುವ ಪ್ರಾಮಾಣಿಕ ಮತ್ತು ಸರಿಯಾದ ವಿಚಾರಗಳನ್ನು ಹೊಂದಿರುವ ಭ್ರಷ್ಟರ ನಡುವೆ ಯಾರನ್ನು ಆಯ್ಕೆ ಮಾಡಿಕೊಳ್ಳಬೇಕೆನ್ನುವುದುಸರಳವಾದ ಉತ್ತರವಿಲ್ಲದ ಪ್ರಶ್ನೆ. ವೈಯಕ್ತಿಕವಾಗಿ ಮತ್ತು ವೈಚಾರಿಕವಾಗಿ ಪ್ರಕ್ಷುಬ್ಧವಾಗಿಯೇ ಬದುಕಿದ ಚಿದಾನಂದಮೂರ್ತಿಯವರನ್ನು ಮರೆಯುವುದು ಸಾಧ್ಯವಿಲ್ಲ. 'ಅಪಾಯಕಾರಿಯಾದ ಕೋಮುವಾದ' ಮತ್ತು 'ಭ್ರಷ್ಟ ರಾಜಕೀಯ ಪಕ್ಷಗಳ ಆಸರೆ' ಬಯಸುವ, ಆರ್ಥಿಕಶೋಷಣೆಯನ್ನು ಬದಿಗೆ ಸರಿಸುವ 'ಹುಸಿ' ಪ್ರಗತಿಪರತೆಗಳಲ್ಲಿಎ ರಡನ್ನೂ ನಿರಾಕರಿಸುವ ಅಪೇಕ್ಷೆಯಿರುವ ನಮ್ಮಂಥ ಹಲವರಿಗೆ ಅವರ 'ಸರಿಗಳು' ಮತ್ತು 'ತಪ್ಪುಗಳು' ಎರಡೂ ಪಾಠ ಕಲಿಸುತ್ತವೆ.

**–ಎಚ್.ಎಸ್. ರಾಘವೇಂದ್ರ ರಾವ್**

# ಪೇಜಾವರ ಶ್ರೀಗಳು



ತನ್ನ ಕಟುವಿಮರ್ಶಕರನ್ನೂ ಪ್ರೀತಿಯಿಂದ ಒಳಗೊಳ್ಳುವ ಪೇಜಾವರರ ಹಠಾತ್ ನಿರ್ಗಮನ ಅವರ ಅಸಂಖ್ಯಾತ ಭಕ್ತರಂತೆಯೇ ಅವರ ವಿಮರ್ಶಕರಿಗೂ ಅಪಾರವಾದ ವ್ಯಥೆಯನ್ನು ಉಂಟು ಮಾಡಿದೆ. ಪೇಜಾವರರ ಸರಳ ವ್ಯಕ್ತಿತ್ವದಲ್ಲಿ ನಾನು ಗುರುತಿಸಿದ ಬಹು ಮುಖ್ಯವಾದ ವರ್ಚಸ್ಸು ಅವರು ತಮ್ಮ ೧೪–೧೫ರ ವಯಸ್ಸಿನಲ್ಲೇ ಸಣ್ಣ ವಯಸ್ಸಿನಲ್ಲಿಯೇ ಭ್ರಷ್ಟತೆಯ ವಿರುದ್ದ ತೋರಿಸಿದ ಅಸಾಧಾರಣವಾದ ವಿರೋಧ. ತನ್ನನ್ನು, ಮಠಾಧೀಶನನ್ನಾಗಿ ಮಾಡಲು ಕಾರಣರಾದ ತನ್ನ ಸ್ವಂತ ಚಿಕ್ಕಪ್ಪನನ್ನೇ ಅವರು ಭ್ರಷ್ಟರೆಂದು ತಿಳಿದ ತಕ್ಷಣ ನೀವು ಮಠವನ್ನು ಬಿಟ್ಟು ಹೋಗಿರೆಂದು ಆದೇಶಿಸಿದರು. ಆ ಸಣ್ಣ ವಯಸ್ಸಿನಲ್ಲಿಯೇ ಅವರು ಬದುಕಿನ ವಿಕೃತಗಳಿಗೆ ಆಳವಾದ ಪ್ರತಿರೋಧವನ್ನು ತೋರಿಸಿದ್ದರು.

ಒಂದು ನಿರ್ದಿಷ್ಟ ಬಗೆಯ ವೈದಿಕ ಪರಂಪರೆಯಿಂದ ಬಂದ ವಿಶ್ವೇಶ ತೀರ್ಥರು ತಮ್ಮ ಪರಂಪರೆಯ ಜಾಯಮಾನಕ್ಕೆ ಹೊರತಾದ ಸಾಮಾಜಿಕ ದೃಷ್ಟಿಕೋನವನ್ನು ರೂಪಿಸಿಕೊಂಡವರು  ಮತ್ತು ಗಾಂಧೀಜಿಯವರ ಚಿಂತನೆಯಿಂದ ಪ್ರಭಾವಿತರಾಗಿದ್ದರು. ಬಹುಶ:, ಪೇಜಾವರರನ್ನು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ಏಕೈಕ ವೈದಿಕ ಯತಿ ಎಂದರೆ ಅದು ತಪ್ಪಾಗಲಾರದು. ಗಾಂಧೀಜಿಯವರ ಹತ್ಯೆಯಾದಾಗ ಸಂಭ್ರಮಿಸುತ್ತಿದ್ದ ಬ್ರಾಹ್ಮಣರ ನಡುವೆ ಮೌನವಾಗಿ ತಮ್ಮ ದು:ಖವನ್ನು ತಮ್ಮೊಳಗೆ ಅವರು ಇಟ್ಟುಕೊಂಡ ಕಥೆ ದಾಖಲಾಗಿರುವ ವಿಷಯ. ಗಾಂಧೀಜಿಯವರ ಪ್ರಭಾವದಿಂದಲೇ ಪೇಜಾವರರು ದಲಿತರ ಕೇರಿಗಳಿಗೆ ಭೇಟಿಕೊಟ್ಟಿದ್ದು ಹಾಗೂ ಅವರ ಪರಿಸ್ಥಿತಿಯನ್ನು  ಸುಧಾರಿಸುವ ಪ್ರಯತ್ನಗಳನ್ನು ನಡೆಸಿದ್ದು. ಬದಿಗೆ ಸರಿಸಲ್ಪಟ್ಟವರನ್ನು ಒಳಗೊಳ್ಳುವ ಪೇಜಾವರರ ಈ ಪ್ರಯತ್ನಗಳು ಅನೇಕ ಎಡಪಂಥೀಯ ವಿಮರ್ಶಕರಿಗೆ ಒಪ್ಪಿಗೆಯಾಗಿರಲಿಲ್ಲ ಎನ್ನುವುದು ನಿಜ. ಅದು ಒಂದು ಸೌಮ್ಯವಾದ ಮತ್ತು ಒಟ್ಟು ಪರಿಣಾಮದಲ್ಲಿ ನಿಷ್ಪ್ರಯೋಜಕವಾದ ಪ್ರಯತ್ನವೆಂದು ಅನೇಕರು ಭಾವಿಸುತ್ತಾರೆ. ಅದೇನೇ ಇರಲಿ, ಉಡುಪಿಯ ಮಡಿವಂತ ವೈದಿಕ ಸಮಾಜದ ಸ್ವಾಮೀಜಿಯೊಬ್ಬರು ತನ್ನ ಮಠ ಮತ್ತು ಪರಂಪರೆಗಳು ಅಂಚಿನಲ್ಲಿರುವವರನ್ನು ಒಳಗೊಳ್ಳಬೇಕು ಎಂದು ಭಾವಿಸುವುದು ಒಂದು ಅಪರೂಪದ ವಿದ್ಯಮಾನವೆಂದೇ ಹೇಳಬೇಕು.

ಕರಾವಳಿ ಕರ್ನಾಟಕದ ಕೋಮು ಪ್ರಕ್ಷುಬ್ಧತೆ ಪೇಜಾವರರನ್ನು ಆಳವಾಗಿ ಘಾಸಿಗೊಳಿಸಿತ್ತು..ಈ ದೇಶದ  ಮತೀಯ ರಾಜಕಾರಣದಿಂದಾಗಿ ಅನ್ಯರೆಂದು ನಿಂದಿಸಲ್ಪಟ್ಟ ಮುಸ್ಲಿಂ ಸಮುದಾಯವನ್ನು ಆದರದಿಂದ ಒಳಗೊಳ್ಳುವ ಪ್ರಯತ್ನವೊಂದನ್ನು ಪೇಜಾವರರು ತಮ್ಮ ಕೊನೆಯ ಪರ್ಯಾಯದ ಅವಧಿಯಲ್ಲಿ ನಡೆಸಿದರು. ಉಡುಪಿಯ ಕೃಷ್ಣಮಠದ ಆವರಣದ ಒಳಗೆ ಮುಸ್ಲಿಂ ಬಾಂಧವರಿಗೆ ಪ್ರಾರ್ಥನೆ ನಡೆಸಲು ಅನುವು ಮಾಡಿಕೊಟ್ಟು ಇಫ್ತಾರ್ ಕೂಟವನ್ನು ಸಂಘಟಿಸಿದ ಅವರ ನಡೆ ಇದಕ್ಕೆ ಸಾಕ್ಷಿ. ಪೇಜಾವರರ ಈ ನಡೆಯನ್ನು  ಸಂಘ ಪರಿವಾರದ ಕಾರ್ಯ ತಂತ್ರವೆಂದು ಅನೇಕರು ಟೀಕಿಸಿದ್ದಾರೆ.  ಆದರೆ, ಅವರನ್ನು ಆಪ್ತವಾಗಿ ಬಲ್ಲ ನನ್ನಂತಹ ಅನೇಕರಿಗೆ ಇದು ಅವರ ಉದಾರವಾದಿ ಪ್ರಜಾತಾಂತ್ರಿಕ ಮನೋಭಾವದ ಹೆಜ್ಜೆಯಾಗಿ ಕಾಣಿಸುತ್ತದೆ.

ಪೇಜಾವರರು ನಿರಂತರವಾಗಿ ತಮ್ಮ ರಾಜಕೀಯ ಸಾಮಾಜಿಕ ದೃಷ್ಟಿಕೋನದಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳಿಗೆ ಮಾರುಹೋದವರು.  ತುರ್ತು ಪರಿಸ್ಥಿತಿಯ ಕುರಿತಾದ ಅವರ ವಿರೋಧ, ಹಿಂಸೆಯ ವಿರುದ್ದದ ಅವರ ನಿರಂತರ  ಪ್ರತಿಭಟನೆ ಹಾಗೂ ಮಾತುಕತೆಗಳ ಮೂಲಕ ಧಾರ್ಮಿಕ ಹಾಗೂ ಸಾಮುದಾಯಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು ಎನ್ನುವ  ಅವರ ಆಗ್ರಹ ಇವೆಲ್ಲವೂ ಪೇಜಾವರರ ಪ್ರಜಾತಾಂತ್ರಿಕ ಕಾಳಜಿಗಳಿಗೆ ಸಾಕ್ಷಿ. ಹಾಗಿದ್ದೂ, ಅವರು ಸಂಘ ಪರಿವಾರದ ಪ್ರತಿನಿಧಿ. ಹಿಂದುತ್ವದ ಪ್ರತಿಪಾದಕ ಹಾಗೂ ವಿಶ್ವ ಹಿಂದು ಪರಿಷತ್ತಿನ ಸಂಘಟಕ. ಅವರ ವ್ಯಕ್ತಿತ್ವ ಹಾಗೂ ವಿಚಾರಗಳಲ್ಲಿ ಹಾಸುಹೊಕ್ಕಂತಿರುವ ಈ ಆಯಾಮವನ್ನು ಒಂದು ವಿಪರ್ಯಾಸವೆಂದು ಪರಿಗಣಿಸಬೇಕೇ ಅಥವಾ ಅದನ್ನು ಅವರ ಸಂದರ್ಭದ ಸಂದಿಗ್ಧವೆಂದು ಬಗೆಯಬೇಕೇ? ನನಗೆ ತಿಳಿಯದು.

**–ರಾಜಾರಾಮ್ ತೋಳ್ಪಾಡಿ**

ಯುವಲಹರಿ

# ನಮ್ಮೂರ ವೈದ್ಯೆ ಸುಬ್ಬಜ್ಜಿ

–ನಾಗಭೂಷಣ ಪಟೇಲ್



ಚಿತ್ರ: ಗುಜ್ಜಾರಪ್ಪ

**ಆ**ಷಾಢ ಮಾಸದ ಒಂದು ಇಳಿಸಂಜೆ ಪಡುವಣದಲ್ಲಿ ಸೂರ್ಯನು ತನ್ನ ನೇತ್ರರನ್ನ ತಿಳಿ ಮೋಡಗಳ ಮೇಲೆಲ್ಲಾ ಚೆಲ್ಲಿ ಮುಳುಗುತ್ತಿದ್ದ ಸಮಯ. ಆಗ ಅಲ್ಲಿ ಒಂದು ಹೆಂಗಸು ತನ್ನ ಮಗನ ಕಣ್ಣನ್ನು ತನ್ನ ಕೈಗಳಿಂದ ಮುಚ್ಚಿಕೊಂಡು ಒಂದು ಚಿಕ್ಕ ಓಣಿಯಲ್ಲಿ ನಡೆದು ಬರುತ್ತಿದ್ದಳು. ಮಗುವೂ ಜೋರಾಗಿ ಅಳುತ್ತಾ ಇತ್ತು. ಓಣಿಯ ಕೊನೆಯಲ್ಲಿ ಒಂದು ಮಣ್ಣು ಗೋಡೆಗೆ ಚೆಂದವಾಗಿ, ಒಪ್ಪವಾಗಿ ಒಣಗಿದ ಹುಲ್ಲಿನಿಂದ ಹೊದಿಸಿದ್ದ ಗುಡಿಸಲು ಇತ್ತು. ಮಗುವನ್ನ ನಡೆಸುತ್ತಾ ತಾನು ಆ ಗುಡಿಸಲ ಬಳಿಗೆ ನಡೆಯುತ್ತಾ ಇದ್ದಳು. ಗುಡಿಸಲು ಸಮೀಪಿಸಲು ಆ ತಾಯಿಯು 'ಸುಬ್ಬವ್ವ ಸುಬ್ಬವ್ವ' ಎಂದು ಜೋರಾಗಿ ಕೂಗಿದಳು. ಆಗಷ್ಟೇ ಸುಬ್ಬವ್ವ ಮೇಕೆಗಳನ್ನ ಮೇಯಿಸಿಕೊಂಡು ಬಂದು ಅವನ್ನು ಅವಳ ಗುಡಿಸಲ ಪಕ್ಕದಲ್ಲಿಯೇ ಜಾಲಿ ಕಳ್ಳೆಯಿಂದ ಆವೃತವಾದ ದಡ್ಡಿಯೊಳಗೆ ಸೇರಿಸಿ ತಾನು ಗುಡಿಸಲಿನೊಳಗೆ ಹೋಗಿದ್ದಳು.

ಈ ಸುಬ್ಬವ್ವ ನಮ್ಮೂರಿನ " ಸುಬ್ಬಜ್ಜಿ" ಎಂದೇ ಪರಿಚಿತಳಾದ ಮಹಿಳೆ. ಊರಿನಲ್ಲಿ ಒಂದೇ ಒಂದು ಮನೆಯಿದ್ದ ಅಕ್ಕಸಾಲಿ ಜಾತಿಗೆ ಸೇರಿದವಳಾಗಿದ್ದಳು. ಸುಮಾರು ಎಪ್ಪತ್ತರ ಆಸುಪಾಸಿನ ಪ್ರಾಯ. ಕಪ್ಪು ಬಣ್ಣದ ಅವಳೊಗೆ ತುಸು ಉಬ್ಬು ಅನಿಸುವ ಹೊಳೆಯುವ ಕೇಸರಿ–ಬಿಳಿ ಹಲ್ಲುಗಳಿದ್ದವು.. ದಿನ ಮುಂಜಾನೆ ಸೂರ್ಯ ಉದಯಿಸುವ ಮುನ್ನವೇ ಸ್ನಾನ ಮಾಡಿ ತನ್ನ ಇಡೀ ದೇಹವನ್ನ ಒಂದು ಸೀರೆಯಿಂದ ಮುಚ್ಚಿಕೊಂಡು ಸಗಣಿಯಿಂದ ಸಾರಿಸಿದ್ದ ಅಂಗಳಕ್ಕೆ ಅವಳಿಗೆ ಗೊತ್ತಿದ್ದ ರಂಗೋಲಿಯನ್ನ ಹಾಕಿ, ಅಲ್ಲಲ್ಲಿ ಹುಳು ಹಿಡಿದು ಮರದ ದಿಮ್ಮಿಯಂತಿದ್ದ ಹೊಸಲಿಗೆ ನೀರು ಚಿಮುಕಿಸಿ ಎರಡು ಬದಿಗಳಿಗಲ್ಲಿ ತಾನು ತಂದಿರುತ್ತಿದ್ದ ಬಿಳಿ ಎಕ್ಕೆ ಹೂವು ಇಟ್ಟು, ಅರಿಶಿನ–ಕುಂಕುಮದಿಂದ ತ್ರಿಮೂರ್ತಿಗಳಲಲ್ಲಿ ಕೊನೆಯವನಾದ ಮುಕ್ಕಣ್ಣನಿಗೆ ಇದ್ದಂತೆ ಮೂರು ಕಣ್ಣುಗಳಿರುವಂತೆ ಸಿಂಗರಿಸುತ್ತಿದ್ದಳು. ತನಗೆ ತಿಳಿದಿದ್ದ ಅಷ್ಟು ಇಷ್ಟು ಮಂತ್ರಗಳನ್ನ ಪಠಿಸುತ್ತಾ ಮೂಡಣ ದಿಕ್ಕಿಗೆ ಮುಖ ಮಾಡಿ ನಿಂತು ಕಣ್ಣು ಮುಚ್ಚಿ ಧ್ಯಾನಿಸುತ್ತಾ ಸೂರ್ಯ ಉದಯಿಸುವುದನ್ನೇ ಕಾಯುತ್ತಿದ್ದಳು. ಆಗಷ್ಟೇ ಎದ್ದು ಊರ ಹೊರಗೆ ಹೋಗುವ ಜನರು ಆ ಅಜ್ಜಿಯನ್ನು ದಿಟ್ಟಿಸಿ ನೋಡುತ್ತಿದ್ದರು. ಸೂರ್ಯನ ಎಳೆಯ ಕಿರಣಗಳು ಅವಳ ಮುಖದ ಮೇಲೆ ಬಿದ್ದು, ಅಜ್ಜಿಯ ಮುಖದಿಂದ ತೇಜಸ್ಸು ಹೊಮ್ಮಿ ಅದು ಸೂರ್ಯನ ಬೆಳಕಿಗೆ ಪ್ರತಿಯಾಗಿ ಹೊಳೆಯುವಂತೆ ಕಾಣುತ್ತಿತ್ತು! ಸೂರ್ಯನ ನಮಸ್ಕಾರ ಮುಗಿದ ನಂತರವೇ ಅವಳ ದಿನ ನಿತ್ಯದ ಚಟುವಟಿಕೆಗಳು ಶುರುವಾಗುತ್ತಿದ್ದವು.

ಅಂದು ಆ ಸಂಜೆ ಗುಡಿಸಲ ಮುಂದಿನ ಅಂಗಳದಲ್ಲಿ ನಿಂತು ಅಜ್ಜಿಯನ್ನ ಮಗುವಿನೊಂದಿಗೆ ಬಂದ ತಾಯಿ ಕೂಗಿ ಕರೆದ್ದು, ತನ್ನ ಮಗನ ಕಣ್ಣಿನಲ್ಲಿ ಏನೋ ಧೂಳು ಬಿದ್ದಿದೆ ಎಂದು ಹೇಳಲು. ಆ ದನಿಯನ್ನ ಕೇಳಿದ ಸ್ವಲ್ಪ ಸಮಯದಲ್ಲಿಯೇ ತಿಳಿ ಬಿಳಿ ಬಣ್ಣದ ಸೀರೆಯಿಂದ ತನ್ನ ಮಯ್ಯನ್ನ ಸುತ್ತಿಕೊಂಡು ಸುಬ್ಬಜ್ಜಿಯೂ ಹೊರ ಬಂದು ಆ ಹುಡುಗನನ್ನ ಮತ್ತು ಅವನ ತಾಯಿಯನ್ನೂ ಮಗ್ದವೆನಿಸುವ ನೋಟದಿಂದ ನೋಡಿ ಏನೂ ಮಾತನಾಡದೆ ಒಳನಡೆದಳು . ಮತ್ತೆ ಎರಡು ನಿಮಿಷ ಕಳೆದ ಮೇಲೆ ತನ್ನ ಕೈಯಲ್ಲಿ ನೀರು ತುಂಬಿದ ತಾಮ್ರದ ಬಿಂದಿಗೆ, ಜತೆಗೆ ಬಟ್ಟೆಯ ಗಂಟನ್ನು ಹಿಡಿದು ಹೊರಬಂದಳು. ತನ್ನ ಕೈ ಸನ್ನೆಯಿಂದ ಮಗುವನ್ನ ಹತ್ತಿರ ಕರೆದು ಧೂಳು ಬಿದ್ದಿದ್ದ ಕಣ್ಣಿನ ರೆಪ್ಪೆಗಳನ್ನ ತನ್ನ ಕೈಗಳಿಂದ ಅಗಲಿಸಿ ಬಾಯಿಯ ಗಾಳಿಯಿಂದ ಊದಿ ಕಣ್ಣಿನೊಳಗೆ ದಿಟ್ಟಿಸಿ ನೋಡುತ್ತಿದ್ದಳು. ನಂತರ ಮಗುವನ್ನ ಈಗ ಇನ್ನೂ ನೋವಾಗುತ್ತಿದೆಯಾ ಅಂತ ಸೌಮ್ಯವಾಗಿ ಕೇಳುತ್ತಿದ್ದಳು. ಮಗು ಹೌದು ಎನ್ನಲು, ಬಟ್ಟೆಯಿಂದ ಸುತ್ತಿದ್ದ ಶುಭ್ರವಾದ ಹತ್ತಿಯ ಭಾಗದ ಒಂದಿಷ್ಟು ಎಳೆಯನ್ನ ಹೊರ ತೆಗೆದು ತನ್ನ ಕೈಗಳಿಂದ ಮೃದುವಾಗಿ ಅಗಲಿಸಿ ತೆಳು ಪೊರೆಯಂತೆ ಮಾಡಿ ಅದನ್ನ ತಾನು ತಂದಿದ್ದ ನೀರಿನೊಳಗೆ ಅದ್ದಿ, ನಿಧಾನಕ್ಕೆ ಮಗುವಿನ ಕಣ್ಣನ್ನು ಅಗಲಿಸಿ ಆ ನೆಂದ ಹತ್ತಿಯನ್ನ ಕಣ್ಣಿನೊಳಗೆ ಸೂಕ್ಷ್ಮವಾಗಿ ಇಟ್ಟು ರೆಪ್ಪೆ ಮುಚ್ಚುತ್ತಿದ್ದಳು. ನಂತರ ಮೆದುವಾಗಿ ತನ್ನ ಕೈ ಬೆರಳುಗಳಿಂದ ಅವನ ಕಣ್ಣಿನ ಮೇಲೆ ಆಡಿಸುತ್ತಿದ್ದಳು. ಹತ್ತಿಯ ಪೊರೆಯನ್ನ ಇಟ್ಟ ತಕ್ಷಣವೇ ಮಗು ಜೋರಾಗಿ ಕಿರುಚಿದರೂ ಒಂದೆರೆಡು ಗಳಿಗೆಯಲ್ಲಿ ಮಗು ನಿಧಾನಕ್ಕೆ ಸುಮ್ಮನಾಗುತ್ತಿತ್ತು. ಮಗುವಿಗೆ ಏನೋ ಕಣ್ಣೊಳಗೆ ತಣ್ಣಗೆ ಅನಿಸುತ್ತಿದ್ದಿರಬೇಕು. ನಂತರ ಆ ಹತ್ತಿಯನ್ನು ಹೊರ ತೆಗೆದು ಬಿದ್ದಿದ್ದ ಧೂಳಿನ ಕಣವನ್ನ ಹುಡುಕಿ ತೋರಿಸಿ ಅವರನ್ನ ಸಾಗ ಹಾಕುತ್ತಿದ್ದಳು.

ಹೀಗೆ ದಿನ ನಿತ್ಯವೂ ಒಂದಲ್ಲಾ ಒಂದು ಈ ತೆರನಾದ ಪ್ರಕರಣಗಳು ಅಜ್ಜಿಯಲ್ಲಿಗೆ ಬರುತ್ತಿದ್ದವು. ಊರಲ್ಲಿ ಅಜ್ಜಿ ಮುಟ್ಟದಿದ್ದ ಕಣ್ಣುಗಳೇ ವಿರಳ! ಅಲ್ಲಿ ವಾಸಿಸುತ್ತಿದ್ದ ಎಲ್ಲಾ ಜಾತಿಯವರೂ ಜಾತಿ ಭೇದ ಮರೆತು ಕಣ್ಣಿಗೆ ಬಿದ್ದ ಧೂಳನ್ನ ತೆಗೆಸಿಕೊಂಡು ಹೋಗುತ್ತಿದ್ದರು. ಜತೆಗೆ ಜನ್ಮತಃ ಬಂದಿದ್ದ ವಿದ್ಯೆ ಅಕ್ಕಸಾಲಿ ವೃತ್ತಿಯಿಂದಾಗಿ, ಊರಿನಲ್ಲಿ ಇದ್ದ ಪ್ರತಿಯೊಬ್ಬ ಹೆಂಗಸೂ ಅವಳ ಚೂಪು ಮೊಳೆಗೆ ತನ್ನ ಮೂಗು–ಕಿವಿಗಳನ್ನ ಕೊಡದೆ ಇರಲಿಲ್ಲ! ಊರಿನಲ್ಲಿ ಯಾರಿಗಾದರೂ ಕೆಮ್ಮು ನೆಗಡಿಗಳಿಂದ ಕಿರು–ನಾಲಿಗೆಯಾದರೂ ಸುಬ್ಬಜ್ಜಿಯ ಬಳಿ ಬಂದು ಉಪಶಮನ ಮಾಡಿಕೊಳ್ಳುತ್ತಿದ್ದರು. ಊರಿನಲ್ಲಿ ಯಾವುದೇ ಜಾತಿಯ ಹೆಣ್ಣಾಗಲಿ ಅವಳ ಹೆರಿಗೆಯ ಸಮಯದಲ್ಲಿ ಸುಬ್ಬಜ್ಜಿಯೇ ಸೂಲಗಿತ್ತಿಯಾಗಿ ಹಾಜರಾಗಿ ತಾಯಿ–ಮಗುವಿನ ಆರೈಕೆ ಮಾಡುತ್ತಿದ್ದಳು. ಎಷ್ಟೋ ಬಾರಿ ಹುಡುಗರಾದ ನಾವು ಏನಾದರೂ ಅವಳಿಗೆ ಚೇಷ್ಟೆ ಮಾಡಿದರೆ, ಅವಳು 'ನೀನು ಹುಟ್ಟಿದಾಗ ಮೊದಲು ಕಾಲು ಎತ್ತಿ ನೋಡಿದ್ದೇ ನಾನು, ಹೋಗೋ!!' ಅಂತ ಹೇಳಿ ನಮ್ಮನ್ನ ನಾಚಿಕೆಗೆ ದೂಡುತ್ತಿದ್ದಳು! ಹೀಗೆ ಜಾತಿಭೇದವನ್ನ ಮರೆತು ಸುಬ್ಬಜ್ಜಿಯ ಬಳಿ ಎಲ್ಲರೂ ಒಂದಿಲ್ಲಾ ಒಂದು ಕಾರಣಕ್ಕೆ ಅವಳ ಗುಡಿಸಲ ಬಳಿ ಹೋಗುತ್ತಿದ್ದರು. ಅವಳ ಗುಡಿಸಲೇ ಊರಿನ "ದವಾಖಾನೆ" ಯಂತೆ ಇತ್ತು.

ಹುಡುಗರಾದ ನಾವು ಸುಬ್ಬಜ್ಜಿಯ ಪ್ರೇಮ ಕಥೆಯನ್ನ ಕೆದಕುತ್ತಿದ್ದುಂಟು. ಯಾರೋ ಹಿರಿಯರೊಬ್ಬರು ಅವಳಿಗೂ ಮತ್ತು ಪಕ್ಕದ ಹಳ್ಳಿಯ ಜೋಗಯ್ಯನಿಗೂ ಸಂಬಂಧವಿತ್ತು ಎಂದು ಹೇಳುತ್ತಿದ್ದುದೂ ಇದೆ. ಸುಬ್ಬಜ್ಜಿ ಮತ್ತು ಜೋಗಯ್ಯ ಇಬ್ಬರೂ ಮೇಕೆಗಳನ್ನ ಮೇಯುಸುವಾಗ ಜತೆಯಾದರು. ಅದು ಹಾಗೆಯೇ ಪ್ರೇಮಕ್ಕೆ ತಿರುಗಿತ್ತು ಅಂತ ಹೇಳುತ್ತಿದ್ದರು. ಪ್ರಾಯಶಃ ಅದು ಅವಳ ಪ್ರಾಯದಲ್ಲಿ ನಡೆದ ಘಟನೆ ಇದ್ದಿರಬಹುದು. ಇದರ ಮಧ್ಯೆ ಒಂದಿಷ್ಟು ವರ್ಷಗಳು ಅಜ್ಜಿಯೂ ಕಾಣೆಯಾದಾಗ ಇದು ಜೋಗಯ್ಯನ ಕರಾಮತ್ತೆ ಇರಬಹುದೆಂದು ಭಾವಿಸಿದ್ದುಂಟು!. ಆದರೆ ದೂರದ ಊರಿನಲ್ಲಿ ಇದ್ದ ತನ್ನ ನೆಂಟರನ್ನು ಕಂಡು ಬರಲು ಹೋದವಳು, ಮತ್ತೆ ವಾಪಸು ಬರಲಾಗಲಿಲ್ಲ ಅನ್ನುವುದನ್ನ ಕೇಳಿ ದುಃಖವಾಯಿತು. ಅವಳು ಆ ಪರ ಊರಿನಲ್ಲೂ ತನ್ನ ದಾವಾಖಾನೆ ತೆರೆದಿದ್ದರೆ ಆಶ್ಚರ್ಯವಿಲ್ಲ!

ಅಜ್ಜಿಯೂ ತಾನಲ್ಲಿರುವವರೆಗೂ ಇಡೀ ಊರಿನ ಧೂಳು ತುಂಬಿದ ಕಣ್ಣುಗಳನ್ನ ಶುಚಿ ಮಾಡಿ ಅವುಗಳನ್ನ ಶುಭ್ರವಾಗಿ ಇಡುವುದಕ್ಕೇ ತನ್ನ ಜೀವನವನ್ನ ಮುಡುಪಾಗಿಟ್ಟಿದ್ದಳು. ಇಂದು ಅವಳು ಏನಾದರೂ ನಮ್ಮೂರಿನಲ್ಲಿಯೇ ಬದುಕಿದ್ದಿದ್ದರೆ ಅವಳಿಗೆ ಏನಾದರೂ ಪೌರತ್ವ ತಿದ್ದುಪಡಿ ಅಥವಾ ನೋಂದಣಿ ಕಾಯಿದೆಗಳ ಬಗ್ಗೆ ಕೇಳಿದ್ದರೆ ಅವಳು ಏನೆಂದೂ ಉತ್ತರಿಸುತ್ತಿದ್ದಳೋ, ಅನ್ನುವುದನ್ನ ಊಹಿಸುತ್ತಿದ್ದೇನೆ. ಇಂದು ಜನರ ಕಣ್ಣಿಗೂ–ಬುದ್ದಿಗೂ ಧೂಳು ಆವರಿಸಿರುವ ಘಳಿಗೆಯಲ್ಲಿ ನನ್ನ ಸುಬ್ಬಜ್ಜಿ ಯು ನೆನಪಾಗುತ್ತಿದ್ದಾಳೆ.



**(ಮೂಲತಃ ನಾಯಕನಹಟ್ಟಿಯವರಾದ ಲೇಖಕ ನಾಗಭೂಷಣ ಪಟೇಲ್ ಈಗ ಅಮೆರಿಕಾದ ಬೋಸ್ಟನ್‌ನಲ್ಲಿನ ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸಂಶೋಧಕರಾಗಿದ್ದಾರೆ.)**

**(ತೀರ್ಥಹಳ್ಳಿಯ ಹಿರಿಯ ಸಮಾಜವಾದಿ ಮತ್ತು ಶಾಂತವೇರಿ ಗೋಪಾಲಗೌಡರ ನಿಕಟವರ್ತಿ ಜನಕೇಗೌಡರ ನಿಧನಕ್ಕಾಗಿ ;ಹೊಸ ಮನುಷ್ಯ' ತಮ್ಮ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.–ಸಂ.**

ಪ್ರಚಲಿತ-೧

# ಅಭಿವೃದ್ಧಿ ಮಾದರಿಗಳು ಮತ್ತು ಹವಾಮಾನ ಬದಲಾವಣೆ

-ಕೇಶವ ಎಚ್. ಕೊರ್ಸೆ

'ಸಸ್ಯ ಹಾಗೂ ಪ್ರಾಣಿಜನ್ಯ ವಸ್ತುಗಳು ಭೂತಳ ಸೇರಿ, ಆಮ್ಲಜನಕರಹಿತ ಸ್ಥಿತಿಯಲ್ಲಿ ಕೋಟ್ಯಾಂತರ ವರ್ಷಗಳ ಅವಧಿಯಲ್ಲಿ ಉತ್ಪಾದನೆಯಾಗುವ ಪೆಟ್ರೋಲಿಯಂ ಉತ್ಪನ್ನಗಳನ್ನು ಕೆಲವೇ ವರ್ಷಗಳಲ್ಲಿ ಉರಿಸಿಬಿಡುತ್ತಿದ್ದೇವೆ. ಇಂಧನವನ್ನೆಲ್ಲ ಹೀಗೆ ಒಮ್ಮೆಲೆ ಅಗಾಧ ಪ್ರಮಾಣದಲ್ಲಿ ಸುಡುತ್ತಿರುವುದರಿಂದಾಗಿ ಹೊರಸೂಸುವ ಅನಿಲಗಳನ್ನು ವಾತವರಣಕ್ಕೆ ಒಗ್ಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಂದರೆ ನೈಸರ್ಗಿಕ ಚಕ್ರೀಯ ವ್ಯವಸ್ಥೆಗೆ ಅಗಾಧ ಪ್ರಮಾಣದ ಇಂಗಾಲ, ಸಾರಜನಕ, ಗಂಧಕ ಇತ್ಯಾದಿ ಸಂಯುಕ್ತ ಅನಿಲಗಳನ್ನು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹೀಗೆ ಅವು ಚಕ್ರದಿಂದ ಬೇರ್ಪಟ್ಟು, ತ್ಯಾಜ್ಯವಾಗಿ ಸಂಗ್ರಹಗೊಳ್ಳುತ್ತಿವೆ. ಹೀಗಾಗಿ, ಇಂದಿನ ಹವಾಮಾನ ಬದಲಾವಣೆಯನ್ನು, ನೈಸರ್ಗಿಕ ಸಂಪತ್ತನ್ನು ಏಕಮುಖವಾಗಿ ಬಳಸುವ ಇಂದಿನ ಅಭಿವೃದ್ಧಿ ವಿಧಾನಗಳ ಪರಿಣಾಮ ಎನ್ನಬಹುದು. ನಿಸರ್ಗ ಚಕ್ರದ ಲಯವನ್ನು ಮೀರಿ ಉಂಟಾಗುತ್ತಿರುವ ತ್ಯಾಜ್ಯದ ಪರಿಣಾಮವಿದು.'




**ನಾ**ಡಿನಲ್ಲಿ ಇತ್ತೀಚೆಗೆ ನಡೆಯುತ್ತಿರುವ ಎರಡು ವಿದ್ಯಾಮಾನಗಳನ್ನು, ಉದಾಹರಣೆಗಾಗಿ ಗಮನಿಸೋಣ. ಕಾರವಾರದ ಕರಾವಳಿಯಲ್ಲಿ ಮೀನುಗಾರರು ತಲೆಮಾರುಗಳಿಂದ ಮೀನುಗಾರಿಕೆ ಮಾಡಿಕೊಂಡು ಬರುತ್ತಿದ್ದ ತೀರಪ್ರದೇಶವನ್ನು, ವಾಣಿಜ್ಯ ಬಂದರಿನ ವಿಸ್ತರಣೆಗಾಗಿ ವಶಪಡಿಸಕೊಳ್ಳಲಾಗುತ್ತಿದೆ. "ಸಾಗರಮಾಲಾ" ಎಂಬ ಈ ಬೃಹತ್ ಸರ್ಕಾರಿ ಯೋಜನೆ, ಅಲ್ಲಿ ಅಳಿದುಳಿರುವ ನೈಸರ್ಗಿಕ ತೀರವನ್ನೂ ಕಬಳಿಸಹೊರಟಿದೆ. ಪ್ರತಿಭಟಿರುತ್ತಿರುವ ಬಡ ಮೀನುಗಾರರಿಗೆ, ಭವಿಷ್ಯದ ಆರ್ಥಿಕ ಚಟುವಟಿಕೆಗಳ ದೃಷ್ಟಿಯಿಂದ ಇಂಥ ವಾಣಿಜ್ಯಕ ಬಂದರಿನ ವಿಸ್ತರಣೆ ಅಗತ್ಯ ಎಂಬ ಉತ್ತರ ಆಳುವವರದ್ದು.

ಇನ್ನೊಂದು, ಕರಾವಳಿಯಿಂದ ಮಲೆನಾಡಿನ ಮೂಲಕ ಒಳನಾಡಿಗೆ ಸಂಪರ್ಕಿಸುವ ರಾಜ್ಯದ ಬಹುತೇಕ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಜನರು ಕೇಳದೆಯೇ ಪರಿವರ್ತಿಸಲಾಗುತ್ತಿದೆ. ಈಗಿರುವ ರಸ್ತೆಗಳನ್ನು ಸುಸ್ಥಿತಿಯಲ್ಲಿಡಬೇಕಾದದ್ದೇನೋ ಖಂಡಿತಾ ಅವಶ್ಯ. ಆದರೆ ಮಲೆನಾಡಿನ ಕಾಡಿನ ನಡುವೆಯೂ ಮರ ಕಡಿದು, ಗುಡ್ಡ ಬಿರಿದು ನೂರೈವತ್ತು ಅಡಿ ಅಗಲದ ರಸ್ತೆ ಮಾಡಬೇಕೇ? ಮಾಡುವವದಾದರೆ ಇವು ಯಾಕಾಗಿ? ಯಾರಿಗಾಗಿ? ಸ್ಥಳೀಯ ಜನರು ಅಪೇಕ್ಷೆ ಪಡದೆಯೇ, ಇವನ್ನು ಸರ್ಕಾರ ಹೇರುತ್ತಿರುವದು ಏಕೆ? ಇದಕ್ಕೂ ಸರ್ಕಾರ ನೀಡುವ ಸಿದ್ಧ ಉತ್ತರ: ಭವಿಷ್ಯದ ದೃಷಿಯಿಂದ ಇಂಥ ಬೃಹತ್ ಮಾರ್ಗಗಳು ಬೇಕಾಗುತ್ತವೆ ಎಂದು!

ಅಂದರೆ, ಇವೆರಡೂ ಸಂದರ್ಭಗಳಲ್ಲಿ ಭಾರಿ ಮೊತ್ತದ ಜನರ ತೆರಿಗೆ ಹಣದಿಂದ ಸರ್ಕಾರ ಕೈಗೆತ್ತಿಕೊಳ್ಳುತ್ತಿರುವ 'ಬೃಹತ್ ಕಾಮಗಾರಿ ಆಧಾರಿತ' ಯೋಜನೆಗಳು, ಜನರು ಕೇಳಿ ಬಂದದ್ದಲ್ಲ, ಮೇಲಿಂದ ಹೇರಲ್ಪಟ್ಟವು. ಸರ್ಕಾರಗಳಿಗೆ ಮತ್ತು ಇಂದಿನ ಒಟ್ಟೂ ರಾಜಕೀಯ ವ್ಯವಸ್ಥೆಗೆ ಜನರ ಅಭಿವೃದ್ಧಿಯ ಕುರಿತು ನೈಜ ಕಾಳಜಿ ಇರುವದಾದರೆ, ಮಾಡಬೇಕಾದ ಎಷ್ಟೊಂದು ಕಾರ್ಯಗಳು ಇವೆಯಲ್ಲವೇ? ರಾಜ್ಯದ ಬಹುತೇಕ ಪಟ್ಟಣ-ನಗರಗಳಿಗೆ ಒಳಚರಂಡಿ ಹಾಗೂ ಕೊಳಚೆ ನೀರು ಶುದ್ಧೀಕರಿಸುವ ವ್ಯವಸ್ಥೆ ಮಾಡಬಹುದು. ಗ್ರಾಮೀಣ ಪ್ರದೇಶದ ಕೆರೆಗಳನ್ನು ಹೂಳೆತ್ತಿ ಸುಸ್ಥಿತಿಗೆ ತರಬಹುದು. ಊರಿಗೊಂದು ಸಾಮಾಜಿಕ ಅರಣ್ಯವನ್ನು ಬೆಳೆಸಿ ಸಮೂದಾಯದ ಕೈಗಿತ್ತು, ಊರಿನ ಮೇವು, ಕಟ್ಟಿಗೆ, ಗೊಬ್ಬರದ ಅಗತ್ಯವನ್ನು ಪೂರೈಸಬಹುದು. ಮನೆಮನೆಗೆ ಸೌರವಿದ್ಯುತ್ ಘಟಕ ಒದಗಿಸಲು ಜನರಿಗೆ ನೆರವಾಗಬಹುದು. ಹೋಬಳಿಯಲ್ಲೊಂದಾದರೂ ಸುಸಜ್ಜಿತ ಸರ್ಕಾರಿ ಆಸ್ಪತ್ರೆ ನಿರ್ವಹಿಸಬಹುದು. ಆದರೆ, ಇಂಥ "ಸಮೂದಾಯ ಆಧಾರಿತ ಅಭಿವೃದ್ಧಿ ಆಯ್ಕೆಗಳು" ಸರ್ಕಾರಕ್ಕೆ ಏಕೆ ತೋಚುತ್ತಿಲ್ಲ?

ಉತ್ತರ ಸರಳ. ಮೊದಲು ಹೇಳಿದ 'ಬೃಹತ್ ಕಾಮಗಾರಿ ಆಧಾರಿತ' ಉದಾಹರಣೆಗಳಲ್ಲಿ, ಭಾರಿ ಮೊತ್ತದ ಹಣವಿದೆ. ಆಳುವ ವ್ಯವಸ್ಥೆ, ಖಾಸಗಿ ಉದ್ಯಮಗಳು ಹಾಗೂ ಗುತ್ತಿಗೆದಾರರ ಒಕ್ಕೂಟವು ಇಂಥ ಕಾಮಗಾರಿಗಳನ್ನು ಮಾಡಿ ಮುಗಿಸಬಹುದು. ಇವರಲ್ಲಿ ಪ್ರತಿಯೋರ್ವರೂ ಸಾಕಷ್ಟು ಲಾಭವನ್ನೂ ಗಳಿಸಬಹುದು. ಜನರೊಂದಿಗೆ ಕೆಲಸಮಾಡುವ ಪ್ರಮೇಯವೇ ಇಲ್ಲ. ಆದರೆ, ಆಮೇಲೆ ಹೇಳಿದ 'ಸಮೂದಾಯ ಆಧಾರಿತ ಅಭಿವೃದ್ಧಿ' ಆಯ್ಕೆಗಳಲ್ಲಿ ಜನರೊಂದಿಗೆ ಕೆಲಸ ಮಾಡಬೇಕು. ಆಗ, ಖರ್ಚು ಮಾಡುವ ಹಣ ಹಾಗೂ ಯೋಜನೆಯ ಫಲಶೃತಿಗೆ ಸಮೂದಾಯಕ್ಕೆ ಉತ್ತರವನ್ನೂ ನೀಡಬೇಕು. ಇಂದಿನ ಆಡಳಿತ ವ್ಯವಸ್ಥೆಗೆ ಈ ಬಗೆಯ ಅಭಿವೃದ್ಧಿ ವಿಧಾನಗಳೇ ಬೇಕಿಲ್ಲ ಎಂಬುದು ಸ್ಪಷ್ಟ. ವರ್ಷದಿಂದ ವರ್ಷಕ್ಕೆ, ಬೃಹತ್ ಉದ್ಯಮಿಗಳು ಹಾಗೂ ಭಾರಿ ಗುತ್ತಿಗೆದಾರನ್ನು ಅವಲಂಬಿಸಿದ 'ಬೃಹತ್ ಕಾಮಗಾರಿ ಯೋಜನೆಗಳೇ' ಹೆಚ್ಚೆಚ್ಚು ಸರ್ಕಾರದ ಆದ್ಯತೆಯಾಗತೊಡಗಿದೆ. ಹೀಗಾಗಿಯೇ, ಜನಪರ ನ್ಯಾಯವಿಲ್ಲದ, ಪರಿಸರಕ್ಕೆ ಪೂರಕವಲ್ಲದ, ಭ್ರಷ್ಟಾಚಾರದಿಂದ ತುಂಬಿರುವ ಯೋಜನೆಗಳೇ 'ಇಂದಿನ ಅಭಿವೃದ್ಧಿ ವಿಧಾನ'ಗಳಾಗಿಬಿಟ್ಟಿವೆ! ಹಾಗೆಂದು, ಈ 'ಬೃಹತ್ ಕಾಮಗಾರಿ' ಆಧಾರಿತ ಅಭಿವೃದ್ಧಿ ಯೋಜನೆಗಳು ಕೇವಲ ಆಳುವವರ ಕೊಡುಗೆ ಎನ್ನುವಷ್ಟು ಸರಳವಾಗಿಲ್ಲ ವಿಷಯ. ಆಧುನಿಕ ತಂತಜ್ಞಾನಾಧಾರಿತ ಕೈಗಾರಿಕಾ ಜಗತ್ತು ತಂದಿಡುತ್ತಿರುವ 'ಸುಖ'ದ ಕಲ್ಪನೆಗೆ ಶರಣಾಗುತ್ತಿರುವ ನಾವೆಲ್ಲ 'ಆಧುನಿಕ ಬಳಕೆದಾರ'ರೂ ಆಗುತ್ತಿರುವುದೂ ಇದಕ್ಕೆ ಕಾರಣ.

ಇವತ್ತಿನ ಇಂಥ ಅವೈಜ್ಞಾನಿಕ ಹಾಗೂ ಉದ್ಯಮಕೇಂದ್ರಿತ ಅಭಿವೃದ್ಧಿ ವಿಧಾನಗಳಿಂದಾಗಿ, ನಮ್ಮ ಪರಿಸರದ ಮೇಲೆ ಆಗುತ್ತಿರುವ ಪರಿಣಾಮವಂತೂ ತೀರಾ ಗಂಭೀರವಾದದ್ದು. ಜೀವಿಸಲು ಅತಿ ಅವಶ್ಯವಾದ ವಾತಾವರಣವಿರುವ ಈ ಭೂಮಿಯ ಸಂರಚನೆಯ ಹಿಂದೆ ಅನೇಕ ತತ್ವಗಳು ಕೆಲಸಮಾಡುತ್ತಿವೆ. ಸ್ಥೂಲವಾಗಿ ಅದನ್ನು ಪಂಚಭೂತ ತತ್ವಗಳ ಮೂಲಕವೇ ಅರಿಯಬಹುದು. ಬಾವಿ-ಕೆರೆ, ಹೊಳೆ-ನದಿಗಳಲ್ಲಿ ಸಮೃದ್ಧವಾಗಿ ಸದಾ ನೀರಿರಬೇಕೆಂದರೆ, ಜಲಚಕ್ರ ಸರಿಯಾಗಿ ನಿರ್ವಹಣೆಯಾಗಬೇಕು. ಪ್ರತಿವರ್ಷವೂ ಮಳೆಯಾಗಿ, ಬಿದ್ದ ಮಳೆನೀರು ಕೆರೆ-ಕಟ್ಟೆ ತುಂಬಿಸುವಂತಾಗಲು, ನಾಡಿನ ಕಾಡು ಹಾಗೂ ಮಣ್ಣಿನ ರಕ್ಷಣೆಯಾಗಬೇಕು. ನೈಸರ್ಗಿಕವಾದ ಇಂಥ ಚಕ್ರೀಯ ವ್ಯವಸ್ಥೆಯಿಂದಾಗಿಯೇ, ಜೀವಿಗಳಿಗೆ ಆಶ್ರಯಕೊಡುವ ಪರಿಸರವೊಂದು ಈ ಭೂಮಿಯಲ್ಲಿ ವಿಕಾಸವಾದದ್ದು. ಸಹಸ್ರಮಾನಗಳಿಂದ ಜನರ ಆಹಾರ ಪೂರೈಸುತ್ತಿರುವ ಕೃಷಿ ಬೆಳೆಯಾಗಲೀ, ಕಾಡಿನ ಉತ್ಪನ್ನಗಳಾಗಲೀ ಹೈನೋದ್ಯಮವೇ ಆಗಲಿ- ಮಣ್ಣು ಸದಾ ತನ್ನ ಫಲವತ್ತತೆಯನ್ನು ಕಾಪಾಡಿಕೊಂಡಿದ್ದರಿಂದ ಮಾತ್ರ ಸಾಧ್ಯವಾಗಿದೆ. ಮಣ್ಣಿನಲ್ಲಿರುವ ಅದೆಷ್ಟೋ ಪೋಷಕಾಂಶಗಳು ಸದಾ ಚಕ್ರೀಯ ವ್ಯವಸ್ಥೆಯಲ್ಲಿ ರೂಪಾಂತರಗೊಳ್ಳುತ್ತಿರುವದೇ ಇದಕ್ಕೆ ಕಾರಣ. ಅದೇ ರೀತಿ, ಶುದ್ಧ ಗಾಳಿಯೂ ಕೂಡ. ಇಂಗಾಲ, ಆಮ್ಲಜನಕ, ಸಾರಜನಕದಂಥ ವಿವಿಧ ಅನಿಲಗಳು ಮತ್ತು ಅವುಗಳ ಸಂಯುಕ್ತಗಳು ನಿರಂತರವಾಗಿ ಒಂದು ಹದದಲ್ಲಿ ಚಕ್ರೀಯ ವ್ಯವಸ್ಥೆಯಲ್ಲಿ ರೂಪಾಂತರಗೊಳುತ್ತಿವದಕ್ಕಾಗಿ ಮಾತ್ರ ನಾವೆಲ್ಲ ಉಸಿರಾಡುವ ಈ ಜೀವಾನಿಲ ಇಲ್ಲಿದೆ. ನಾವು ಪಾರಂಪರಿಕವಾಗಿ ಬಳಸುತ್ತಿದ್ದ ಕಟ್ಟಿಗೆ ಹಾಗೂ ಸಸ್ಯಜನ್ಯ ತೈಲಗಳೂ ಚಕ್ರೀಯ ವ್ಯವಸ್ಥೆಯ ಗಿಡಮರಗಳಿಂದಲೇ ಬರುತ್ತಿತ್ತು. ಹೀಗಾಗಿ, ನಮ್ಮ ಪಾರಂಪರಿಕ ಬದುಕಿನ ಕ್ರಮ ನಿಸರ್ಗದತ್ತವಾದ ಈ ಚಕ್ರೀಯ ವ್ಯವಸ್ಥೆಯ ಲಯಕ್ಕೇ ಹೊಂದಿಕೊಂಡು ವಿಕಾಸವಾದದ್ದನ್ನು ನಾವು ಗಮನಿಸಬೇಕು.

ಆದರೀಗ ಏನಾಗುತ್ತಿದೆ? ಕೈಗಾರಿಕಾ ಕ್ರಾಂತಿಯ ನಂತರ ಮಾನವ 'ಆಧುನಿಕ'ನಾಗತೊಡಗಿದ ಹಾಗೆ, ಆತನ ಜೀವನ ವಿಧಾನ ಬದಲಾಗತೊಡಗಿತು. ಜನಸಂಖ್ಯೆಯೂ ಹೆಚ್ಚಾಗತೊಡಗಿತು. ನಾವು ನೈಸರ್ಗಿಕ ಸಂಪನ್ಮೂಲ ಬಳಸುವ ವಿಧಾನ ಮತ್ತು ವೇಗವೂ ಬದಲಾಗತೊಡಗಿತು. ಇದೇ ಈಗ ನಾವು ಕರೆಯುವ 'ಆಧುನಿಕ ಅಭಿವೃದ್ಧಿ ವಿಧಾನ'ದ ಸ್ಥೂಲ ಸ್ವರೂಪ. ಹಾಗಾದರೆ, ಅದರ ಮುಖ್ಯ ಲಕ್ಷಣವೇನು? ಉತ್ತರ ಸ್ಪಷ್ಟ. ಎಲ್ಲ ಬಗೆಯ ನೈಸರ್ಗಿಕ ಚಕ್ರಗಳ ವ್ಯವಸ್ಥೆ ಹಾಗೂ

(೧೫ನೇ ಪುಟಕ್ಕೆ

ಪ್ರಚಲಿತ–೨

# ನಮ್ಮ ನ್ಯಾಯಾಂಗದ ಇಂದಿನ ಬಿಕ್ಕಟ್ಟುಗಳು

–ನ್ಯಾ. (ನಿ.) ಮದನ್ ಬಿ. ಲೋಕೂರ್

ಕನ್ನಡಕ್ಕೆ: ಎಂ. ರಾಜು



**ದೇಶದ ಬಹುತೇಕ ಸಮಸ್ಯೆಗಳ ಮೂಲ ನಮ್ಮ ನ್ಯಾಯದಾನ ಪದ್ಧತಿಯಲ್ಲಿರುವ ಲೋಪಗಳು ಮತ್ತು ಅವುಗಳಿಂದಾಗಿ (ತಪ್ಪಿತಸ್ಥರಿಗೆ ಶಿಕ್ಷೆಯಾಗುವುದೂ ಸೇರಿದಂತೆ) ನ್ಯಾಯದಾನದಲ್ಲಿ ಆಗುತ್ತಿರುವ ಅತಿ ವಿಳಂಬ ಎಂದು ಹೇಳಲಾಗುತ್ತದೆ. ಈ ಬಗ್ಗೆ ಹಲವು ವರ್ಷಗಳಿಂದ ಉನ್ನತ ನ್ಯಾಯಿಕ ವಲಯಗಳೂ ಸೇರಿದಂತೆ, ದೇಶಾದ್ಯಂತ ಚರ್ಚೆಗಳಾಗುತ್ತಿದ್ದರೂ ಪರಿಹಾರ ದಿಗಂತದಂಚಿನಲ್ಲೂ ಕಾಣುತ್ತಿಲ್ಲ. ಇದಕ್ಕೆ ಕಾರಣಗಳೇನು? ನ್ಯಾಯಾಂಗದ ಒಳಗೇ ಬಹು ವರ್ಷಗಳ ಕಾಲ ಕೆಲಸ ಮಾಡಿ ಉನ್ನತ ಸ್ಥಾನವನ್ನಲಂಕರಿಸಿದ್ದ ನ್ಯಾಯಧೀಶರೊಬ್ಬರು ಈ ಬರಹದಲ್ಲಿ ಅಂತಹ ಕೆಲವು ಕಾರಣಗಳ ಕಡೆ ಬೊಟ್ಟು ಮಾಡಿ ಅವುಗಳ ಮೇಲೆ ಒಂದಿಷ್ಟು ಬೆಳಕು ಚೆಲ್ಲಿದ್ದಾರೆ.–ಸಂ**

**ನ**ಮ್ಮ ದೇಶದ ಜನ ನಮ್ಮ ನ್ಯಾಯನಿರ್ಣಯ ವ್ಯವಸ್ಥೆಯಲ್ಲಿ ಮತ್ತು ನ್ಯಾಯಾಧೀಶರಲ್ಲಿ ಇನ್ನೂ ನಂಬಿಕೆ ಉಳಿಸಿಕೊಂಡಿದ್ದಾರೆ – ಹಾಗಲ್ಲದಿದ್ದಲ್ಲಿ ಇಷ್ಟರಲ್ಲಿ ಅರಾಜಕತೆಯೇ ಉಂಟಾಗುತ್ತಿತ್ತು. ಆದರೆ ದುರದೃಷ್ಟವಶಾತ್ ಕಳೆದ ಎರಡು ವರ್ಷಗಳಿಂದ ನಡೆಯುತ್ತಿರುವ ಘಟನೆಗಳು ಈ ನಂಬಿಕೆಯನ್ನು ಅಲುಗಾಡಿಸುತ್ತಿವೆ. ಕ್ಷಿಪ್ರವಾದ ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಮೂಲಕ ಈ ಹುದುಲಿನಿಂದ ಬಚಾವಾಗದಿದ್ದಲ್ಲಿ ನಾವೆಲ್ಲರೂ ಪ್ರಪಾತಕ್ಕೆ ಬೀಳುವುದು ಖಂಡಿತ.

ನಮ್ಮ ಬಹುದೊಡ್ಡ ಸಮಸ್ಯೆ ಇರುವುದು ಇತ್ಯರ್ಥವಾಗದೆ ಉಳಿರುವ–ಸುಮಾರು ಮೂರು ಕೋಟಿ ಪ್ರಕರಣಗಳು–ಎಂಬ ವಿಚಾರದಲ್ಲಿ ಯಾವ ತಕರಾರೂ ಇಲ್ಲ. ಈ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸುವ ಮೊದಲು ಪ್ರಕರಣಗಳ ಬಾಕಿ ಎಂದರೆ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ನಿನ್ನೆ ಪ್ರಾರಂಭವಾದ ಒಂದು ಪ್ರಕರಣ (ವಾಹನ ಸಂಚಾರ ನಿಯಮ ಉಲ್ಲಂಘನೆಗೆ ಸಂಬಂದಿಸಿದ್ದು) ಮತ್ತೊಂದು ಪ್ರಕರಣ ಇಪ್ಪತ್ತು ವರ್ಷ ಹಳೆಯದು (ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಗೆ ಸಂಬಂಧಿಸಿದ್ದು) ಈ ಎರಡನ್ನೂ ಇತ್ಯರ್ಥವಾಗದೆ ಉಳಿದಿರುವ ಪ್ರಕರಣ ಎನ್ನ ಬಹುದೇ? ಪ್ರತಿಯೊಂದು ಕಾನೂನೂ ಶಾಸನದಲ್ಲಿ ಬಳಸಲಾದ ಪದಗಳನ್ನು ವ್ಯಾಖ್ಯಾನಿಸುತ್ತದೆ ಮತ್ತು ನ್ಯಾಯಾಲಯವು ಈ ಪದಗಳ ವಿವರಣೆಯನ್ನು ಆಧರಿಸಿ ನ್ಯಾಯ ನಿರ್ಣಯ ಮಾಡುತ್ತದೆ. ಆದರೆ ಬಾಕಿಯಿರುವ ಪ್ರಕರಣ ಎಂದರೆ ಏನು ಎಂಬುದನ್ನು ನಾವಿನ್ನೂ ವ್ಯಾಖ್ಯಾನಿಸಿಲ್ಲ. ಹಾಗಾಗಿ ನ್ಯಾಯಾಲಯದಲ್ಲಿರುವ ನಿನ್ನಿನ ಸಂಚಾರನಿಯಮ ಉಲ್ಲಂಘನೆಯ ಪ್ರಕರಣವೂ ಸೇರಿದಂತೆ ಪ್ರತಿಯೊಂದು ಪ್ರಕರಣವನ್ನೂ ಬಾಕಿಯಿರುವ ಪ್ರಕರಣ ಎನ್ನುತ್ತೇವೆ. ಎಲ್ಲ ಅಗತ್ಯ ಪಾರಿಭಾಷಿಕಗಳನ್ನು ವ್ಯಾಖ್ಯಾನಿಸುವ ತೊಂದರೆ ತೆಗೆದುಕೊಂಡರೆ ಬಾಕಿಯಿರುವ ಪ್ರಕರಣಗಳ ಸಮಸ್ಯೆಯ ಗಹನತೆಯನ್ನು ನಾವು ಉತ್ತಮವಾಗಿ ಗ್ರಹಿಸಬಹುದು.

## ಬಾಕಿ ಮೊಕದ್ದಮೆಗಳ ಭಾರಿ ಹೊರೆ

ನ್ಯಾಯಮಂಡಳಿಗಳಲ್ಲಿ(tribunal) ಮತ್ತು ಆಯೋಗಗಳಲ್ಲಿ (commissions) ಬಾಕಿಯಿರುವ ಪ್ರಕರಣಗಳ ಸಂಖ್ಯೆ ದಿಗ್ಭ್ರಮೆ ಹುಟ್ಟಿಸುವಂತಹುದು. ಮತ್ತು ಅವು ಸಾಮಾನ್ಯ ಮನುಷ್ಯರ ದೈನಂದಿನ ಬದುಕನ್ನು ನೇರವಾಗಿ ಪ್ರಭಾವಿಸುವಂತಹವು. ನಮ್ಮ ವ್ಯಾಖ್ಯಾನಗಳು ಸ್ಪಷ್ಟವಾದರೂ ಕೂಡ ನಮ್ಮ ನ್ಯಾಯಾಲಯಗಳಲ್ಲಿ, ನ್ಯಾಯಮಂಡಳಿಗಳಲ್ಲಿ, ಆಯೋಗಗಳಲ್ಲಿ ಪ್ರಕರಣಗಳನ್ನು ದಾಖಲಿಸುತ್ತಾ ಹೋದರೆ ನಮ್ಮ ನ್ಯಾಯದಾನ ವ್ಯವಸ್ಥೆಯ ಬೆನ್ನು ಮುರಿಯುತ್ತಿರುವ ಪ್ರಕರಣಗಳ ಹೊರೆ ನಿರ್ವಹಿಸಲಾಗದ ಮಟ್ಟವನ್ನು ತಲುಪುತ್ತೇವೆ. ಈ ಭಾರೀ ಪ್ರಕರಣಗಳ ವಿಳಂಬದ ಹೊರೆ ಪ್ರಕರಣಗಳ ಮುಂದೂಡಿಕೆಗೆ, ದುರದೃಷ್ಟಗಳ ಕ್ರೂರ ಆಘಾತಕ್ಕೆ ಸಿಲುಕುವ ಕಕ್ಷಿಗಾರರ ಹತಾಶೆಗೆ ಕಾರಣವಾಗುವುದು. ಇದನ್ನು ಪರಿಹರಿಸುವ ಪ್ರಯತ್ನ ಅನಿವಾರ್ಯ, ಅದು ಆಗದೇ ಹೋದಲ್ಲಿ ಜನರ ಹತಾಶೆಯು ಕೋಪವಾಗಿ ಪರಿವರ್ತನೆಯಾಗಿ ನಂತರ ಈ ಕೋಪ ಸರ್ವನಾಶಕ್ಕೆ ಕಾರಣವಾಗಬಹುದು.

ಅಪರಾಧ ನ್ಯಾಯನಿರ್ಣಯದಲ್ಲಿ ವಿಳಂಬದ ಒತ್ತಡವು ಈಗಾಗಲೇ ಉತ್ತರ ಪ್ರದೇಶ, ತೆಲಂಗಾಣಗಳಲ್ಲಿ ನ್ಯಾಯಾತಿರಿಕ್ತ(extra judicial) ಹತ್ಯೆಗಳ ರೂಪದಲ್ಲಿ, ಇತರೆ ಹಲವಾರು ರಾಜ್ಯಗಳಲ್ಲಿ ಗುಂಪುಗಳು ನಡೆಸುವ ಹತ್ಯೆಗಳ ರೂಪದಲ್ಲಿ, ಹತ್ಯಾಚಾರದ ಆರೋಪಿಗಳನ್ನು ಕೊಲ್ಲುವ ಪ್ರಕರಣಗಳ ರೂಪದಲ್ಲಿ, ಪ್ರಕಟವಾಗತೊಡಗಿದೆ. ಈ ಲಕ್ಷಣಗಳು ನಮ್ಮ ಅಪರಾಧ ನ್ಯಾಯ ನಿರ್ಣಯ ವ್ಯವಸ್ಥೆಯು ಕುಸಿದು ಬಿದ್ದಿರುವ ಅಥವಾ ಕುಸಿಯುತ್ತಿರುವುದರ ಸ್ಪಷ್ಟ ಸೂಚನೆ ಎಂದು ನಾನು ನಂಬುತ್ತೇನೆ. ಆರೋಪಿಗಳನ್ನು ಮುಗಿಸುವುದು ಮತ್ತು ಅಪರಾಧಗಳನ್ನು ತಡೆಯದಿರುವುದು ಇತ್ತೀಚೆಗೆ ಜನಪ್ರಿಯ ಸಂಗತಿಯಾಗತೊಡಗಿದೆ. ಒಂದು ಶಾಸನ ಬದ್ಧ ಸಮಾಜವು ಇದನ್ನು ಒಪ್ಪಿಕೊಳ್ಳಬಾರದು.

## ನ್ಯಾಯಾಧೀಶರಿಂದಲೇ ನ್ಯಾಯಾಧೀಶರ ನೇಮಕ: ಎಷ್ಟು ನಿಜ?

ನ್ಯಾಯ ವಿತರಣ ವ್ಯವಸ್ಥೆಯಲ್ಲಿ ಹಲವು ದಶಕಗಳಿಂದ ಇರುವ ಬಹು ದೊಡ್ಡ ವಿವಾದ ನ್ಯಾಯಾಧೀಶರ ನೇಮಕಕ್ಕೆ ಸಂಬಂಧಿಸಿದ್ದು. ಸ್ವತಂತ್ರ ಭಾರತವು ಸ್ವತಂತ್ರ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದ ಸ್ವತಂತ್ರ ನ್ಯಾಯಾಧೀಶರುಗಳೊಂದಿಗೆ ಅಸ್ತಿತ್ವಕ್ಕೆ ಬಂದಿತು. ಆಗ ಹಲವಾರು ನಿರ್ಣಯಗಳು ವ್ಯವಸ್ಥೆಯ ಇಚ್ಛೆಗೆ ವಿರುದ್ಧವಾಗಿರುತ್ತಿದ್ದವು. ಈ ನ್ಯಾಯಾಧೀಶರುಗಳನ್ನು ಅಂಕೆಯಲ್ಲಿರಿಸುವ ಯೋಚನೆಗಳೂ ಮೂಡಿದವು. ಆಗ ಇದ್ದ ನ್ಯಾಯಾಧೀಶರು ಬಂಡೆಯಂತೆ ದೃಢವಾಗಿ ನಿಂತದ್ದು ಆಡಳಿತ ವ್ಯವಸ್ಥೆಯು ಒಂದು 'ಬದ್ಧ ನ್ಯಾಯಾಂಗ'ದ ಕಲ್ಪನೆಯ ಸಿದ್ಧಾಂತವನ್ನು ಪ್ರತಿಪಾದಿಸುವವುದಕ್ಕೆ ಕಾರಣವಾಯಿತು. ('ಬದ್ಧ ನ್ಯಾಯಾಂಗ'ವೆಂದರೆ ಆಡಳಿತ ವ್ಯವಸ್ಥೆಯಿಂದ ಸ್ವತಂತ್ರವಾಗಿರದೆ, ಆಡಳಿತದ ನೀತಿ ನಿಯಮಗಳನ್ನು ಎತ್ತಿ ಹಿಡಿಯುವ, ಆಡಳಿತದ ಒಂದು ಭಾಗವೇ ಆಗಿರುವ ನ್ಯಾಯಾಂಗ) ಸ್ವಲ್ಪ ಮಟ್ಟಿಗೆ ನ್ಯಾಯಾಂಗದ ಸ್ವಾತಂತ್ರ್ಯವನ್ನು ಅತಿಕ್ರಮಿಸುವಲ್ಲಿ ವ್ಯವಸ್ಥೆಯು ಯಶಸ್ವಿಯಾಯಿತು. ಆದರೆ ನ್ಯಾಯಾಂಗವು ತಿರುಗಿ ನಿಂತು ನ್ಯಾಯಾಧೀಶರ ನೇಮಕಾತಿಯ ಅಧಿಕಾರವನ್ನು ತನ್ನದಾಗಿಸಿಕೊಂಡಿತು. ಇದೊಂದು ಆತ್ಮ ರಕ್ಷಣೆಯ(self preservation) ಕ್ರಮವಾಗಿದ್ದು ಆ ಕಾಲಕ್ಕೆ ಅಗತ್ಯವೂ ಆಗಿತ್ತು. ಆದರೆ "ಪೀಟರ್ ಸ್ಪೈಡರ್ ಹಿರಿಯರು ನೀಡಿದ, 'ಭಾರೀ ಸ್ವಾತಂತ್ರ್ಯದೊಂದಿಗೆ ಭಾರೀ ಜವಾಬ್ದಾರಿಯೂ ಬರುತ್ತದೆ, ಎಂಬ ಕಿವಿಮಾತನ್ನು ಮರೆತುಬಿಟ್ಟಿತು. ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರುಗಳ ಕೊಲಿಜಿಯಂ ಅನೀತಿಯುತವಾಗಿ ಆ ಅಧಿಕಾರವನ್ನು ಅಪರೂಪಕ್ಕಾದರೂ ಬಳಸಿದ್ದು ತಿರುಗೇಟು ನೀಡುವ ಅವಕಾಶವನ್ನು ವ್ಯವಸ್ಥೆಗೆ ನೀಡಿತು. (ಕೊಲಿಜಿಯಂ ಎಂಬುದು ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರುಗಳ ನೇಮಕಾತಿ ಮತ್ತು ವರ್ಗಾವಣೆಯ ವ್ಯವಸ್ಥೆ). ಯುದ್ಧಘೋಷಣೆಯಾಗಿದೆ. ಸದ್ಯಕ್ಕೆ ನ್ಯಾಯಾಂಗವು ಸೋಲುವ ಪಕ್ಷವಾಗಿದೆ. ನ್ಯಾಯಾಧೀಶರನ್ನು ನೇಮಿಸುವ ವಿಚಾರದಲ್ಲಿ ಉಂಟಾಗಿರುವ ವಿವಾದವು 'ನ್ಯಾಯಾಧೀಶರೇ ನ್ಯಾಯಾಧೀಶರನ್ನು ನೇಮಿಸುವ' ಪದ್ಧತಿಯ ಟೀಕೆಗೆ ಕಾರಣವಾಗಿದೆ.

## ಸಗೋತ್ರ ವಿವಾಹ ಪಾತಕ ಮತ್ತು ಬದ್ಧ ನ್ಯಾಯಾಂಗ

ಹಲವರು ಈ ಪದ್ಧತಿಯನ್ನು ಟೀಕಿಸಿದ್ದಾರೆ ಇದನ್ನು ಸಗೋತ್ರ ವಿವಾಹ ಪಾಶತಕವೆಂದು ಕರೆದಿದ್ದಾರೆ. ಈ ಟೀಕೆಯು ಸಂಪೂರ್ಣವಾಗಿ ಅರ್ಥಹೀನ. ನ್ಯಾಯಾಧೀಶರು ನ್ಯಾಯಾಧೀಶರ ನೇಮಕಾತಿಯಲ್ಲಿ ಕೇವಲ ಶಿಫಾರಸು ಮಾಡುತ್ತಾರೆ – ನೇಮಕಾತಿ ಪ್ರಕ್ರಿಯೆಯು ರಾಷ್ಟ್ರಪತಿಯವರು ನೇಮಕಾತಿಯ ಪತ್ರಕ್ಕೆ ಸಹಿ ಮಾಡುವ ಮೂಲಕ, ರಾಜಕೀಯ ಕಾರ್ಯಕಾರಿಣಿಯ ಮೂಲಕವೇ ನೆರವೇರುತ್ತದೆ. ಇತ್ತೀಚಿನ ಘಟನೆಗಳು ನೇಮಕಾತಿಗೆ ಸಂಬಂಧಿಸಿದ 'ವಿಶೇಷಾಧಿಕಾರ'ಗಳು ರಾಜಕೀಯ ಕಾರ್ಯನಿರ್ವಾಹಕರ ಕೈಯಲ್ಲೇ ಇವೆ ಮತ್ತು ಕೆಲವು ಸಲ ಈ ಅಧಿಕಾರಗಳು ಕಾನೂನಿನ ವ್ಯಾಪ್ತಿಯಲ್ಲಿ ಇರುವುದೇ ಇಲ್ಲ ಎಂಬುದನ್ನು ಸ್ಪಷ್ಟವಾಗಿ

ನಿರೂಪಿಸಿವೆ. ನ್ಯಾಯಾಂಗದ ಸ್ವಾಯತ್ತತೆಯನ್ನು ಅಪಾಯಕ್ಕೊಡ್ಡುವ, ನಯವಾದ, ಕೈ ತಿರುಚದಂತೆ ಕಾಣುವ ಆದರೆ ಖಂಡಿತವಾಗಿ ಕೈತಿರುಚುವ ಕಾರ್ಯವು ಇತ್ತೀಚೆಗೆ ನಡೆದಿದೆ. ಟೀಕಾಕಾರರೂ ಕೂಡ ಈಗಿರುವುದಕ್ಕಿಂತಲೂ ಉತ್ತಮವಾದ ನೇಮಕಾತಿ ಪ್ರಕ್ರಿಯೆಯನ್ನು ಸೂಚಿಸಲು ಸಾಧ್ಯವಾಗಿಲ್ಲ: ಅವರು ಸದ್ಯ ಉಪಲಬ್ಧವಿರುವ ಪ್ರಕ್ರಿಯೆಯಲ್ಲಿ ಕಡಿಮೆಯಾಗುತ್ತಿರುವ ನಂಬಿಕೆಯನ್ನು ಎತ್ತಿ ತೋರಿಸುತ್ತಾರೆ. ಆದರೆ ಅವರಿಗೆ ನ್ಯಾಯಾಧೀಶರನ್ನು ನೇಮಿಸುವ ವಿಚಾರದಲ್ಲಿ ಕಾರ್ಯಾಂಗದ ನಿಷ್ಪಕ್ಷಪಾತತೆಯ ವಿಚಾರದಲ್ಲೀ ಇನ್ನೂ ಹೆಚ್ಚಿನ ಅಪನಂಬಿಕೆ ಇರುವಂತೆ ಕಾಣುತ್ತದೆ. ಅಂದರೆ, – ಬದ್ಧ ನ್ಯಾಯಾಧೀಶ (committed judges) ಸಿದ್ಧಾಂತವು ನ್ಯಾಯಿಕ ಸಮುದಾಯವನ್ನು (legal fraternity) ಕಾಡುವುದು ಮುಂದುವರಿದೇ ಇದೆ. ನೇಮಕಾತಿಯ ಅಧಿಕಾರವು ಕಡಿಮೆ ಜವಾಬ್ದಾರಿಯಿಂದ, ಅಥವಾ ಸಂಪೂರ್ಣ ಜವಾಬ್ದಾರಿರಹಿತವಾಗಿ ಚಲಾಯಿಸಲ್ಪಡಬಹುದು, ಎಂಬ ಹೇಳಿಕೊಳ್ಳಲಾಗದ ಭಯವು ಇದ್ದೇ ಇದೆ.

ನ್ಯಾಯಾಧೀಶರು ನಿಜಕ್ಕೂ ನ್ಯಾಯಾಧೀಶರನ್ನು ನೇಮಕ ಮಾಡುತ್ತಾರೆಯೇ? ಕೇವಲ ಸರ್ಕಾರ ಮಾತ್ರವೇ ನ್ಯಾಯಾಧೀಶರನ್ನು ನೇಮಕ ಮಾಡಬಹುದು ಎಂಬ ವಿಚಾರವನ್ನು ಒತ್ತಿ ಹೇಳುವುದಕ್ಕಾಗಿಯೇ ಪ್ರದರ್ಶಿಸುವುದಕ್ಕಾಗಿಯೇ ಸರ್ಕಾರವು ನ್ಯಾಯಾಧೀಶರ ನೇಮಕಾತಿಯನ್ನು ತಡೆಹಿಡಿದಿರುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಸಂಸತ್ತಿನಲ್ಲಿ ಎತ್ತಲಾದ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸುತ್ತಾ ೨೦೧೯ ರ ನವಂಬರ್ ೨೭ ರಂದು ಉಚ್ಚ ನ್ಯಾಯಾಲಯಗಳು ಮಾಡಿದ ೨೧೩ ಶಿಫಾರಸುಗಳು ಸರ್ವೋಚ್ಚ ನ್ಯಾಯಾಲಯದ ಕೊಲಿಜಿಯಂ ಮತ್ತು ಸರ್ಕಾರದ ಕಡೆ 'ಪರಿಶೀಲನೆಯ ವಿವಿಧ ಹಂತಗಳಲ್ಲಿ ಇವೆ' ಎಂಬ ಉತ್ತರ ನೀಡಲಾಯಿತು. ಎಷ್ಟು ಶಿಫಾರಸುಗಳು ಸರ್ಕಾರದ ಬಳಿ ಬಾಕಿ ಇವೆ ಎಂಬುದು ತಿಳಿದಿಲ್ಲ. ಆದರೆ ಅದು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಸಾಧ್ಯತೆಗಳೇ ಹೆಚ್ಚು. ಈ ಸಂಸ್ಕರಣೆಯನ್ನು ಪೂರ್ಣಗೊಳಿಸಲು ಎಷ್ಟು ಸಮಯ ಬೇಕಾಗಬಹುದು ಎಂಬುದು ಯಾರಾದರೂ ಊಹಿಸ ಬಹುದಾದ ಸಂಗತಿ – ಅದು ಹಲವಾರು ತಿಂಗಳ ಕಾಲ ತೆಗೆದುಕೊಳ್ಳಬಹುದು. ಈ ಪ್ರಕ್ರಿಯೆಯನ್ನು ಸರ್ಕಾರವು ತ್ವರಿತವಾಗಿ ಪೂರ್ಣಗೊಳಿಸಿ ಪತ್ರಕ್ಕೆ ರಾಷ್ಟ್ರಪತಿಯವರು ಸಹಿ ಮಾಡುವಂತೆ ಒತ್ತಾಯಿಸುವ ಅಧಿಕಾರ ಸರ್ವೋಚ್ಚ ನ್ಯಾಯಾಲಯಕ್ಕಿಲ್ಲ. ನ್ಯಾಯಾಧೀಶರು ನ್ಯಾಯಾಧೀಶರನ್ನು ನೇಮಕ ಮಾಡುತ್ತಾರೆಂಬುದು ಒಂದು ಕಟ್ಟು ಕಥೆ ಮಾತ್ರ.

## ಅಪಾತ್ರರಿಗೆ ಅಧಿಕಾರ ದೊರೆತಾಗ...

ಸರ್ವೋಚ್ಚ ನ್ಯಾಯಾಲಯವು ಹೇಳಿಕೊಳ್ಳುತ್ತಿರುವಂತೆ, ಸರ್ಕಾರವು ಶಿಫಾರಸುಗಳನ್ನು ತಡೆಹಿಡಿಯುವುದನ್ನು ಮುಂದುವರಿಸಿದೆ. ಇದು ಅಪಾತ್ರರಿಗೆ ಅಧಿಕಾರ ದೊರೆತರೆ ಏನಾಗಬಹುದು ಎಂಬುದಕ್ಕೆ ಒಂದು ನಿದರ್ಶನ. ಇಂತಹ ವಿಳಂಬಗಳುಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಶಿಫಾರಸು ಮಾಡಲ್ಪಟ್ಟ ಅಭ್ಯರ್ಥಿಯ ಜ್ಯೇಷ್ಠತೆಯ ಮೇಲೆ ಇದು ಪರಿಣಾಮ ಉಂಟುಮಾಡುತ್ತದೆ. ಇದನ್ನು ನಾವು ಸರ್ವೋಚ್ಚ ನ್ಯಾಯಾಲಯದಲ್ಲೂ ಕಂಡಿದ್ದೇವೆ. ನ್ಯಾಯಾಧೀಶರನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ನೇಮಕ ಮಾಡುವ ಸಂದರ್ಭದಲ್ಲೂ, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ನೇಮಕ ಮಾಡುವ ಸಂದರ್ಭದಲ್ಲೂ ಸರ್ಕಾರವು ನೇಮಕಾತಿಯನ್ನು ತಡೆಹಿಡಿದಿರುವುದನ್ನು ನೋಡಿದ್ದೇವೆ. ನ್ಯಾಯಾಧೀಶರ ವರ್ಗಾವಣೆ ಸರ್ಕಾರದ ಬತ್ತಳಿಕೆಯಲ್ಲಿರುವ ಮತ್ತೊಂದು ಅಸ್ತ್ರ. ಒಂದು ಮುನ್ಸಿಫ್ ಕೋರ್ಟ್‌ನಲ್ಲೂ ನಿಲ್ಲಲಾರದ ಕಾರಣಗಳನ್ನು ನ್ಯಾಯಾಧೀಶರುಗಳ ವರ್ಗಾವಣೆಯ ಸಂದರ್ಭಗಳಲ್ಲಿ ಸರ್ಕಾರವು ನೀಡುತ್ತದೆ. ಆದರೆ ಸರ್ವೋಚ್ಚ ನ್ಯಾಯಾಲಯುವು ಈ ವಿಚಾರದಲ್ಲಿ ಸ್ಥಿರವಾಗಿ ನಿಲ್ಲದಾಗಿದೆ. ಅದೃಷ್ಟವಶಾತ್ ಬದ್ಧ ನ್ಯಾಯಾಂಗಕ್ಕಿಂತ ಸ್ವತಂತ್ರ ನ್ಯಾಯಾಂಗದ ಉತ್ಕೃಷ್ಟತೆಯಲ್ಲಿ(virtue) ನಂಬಿಕೆ ಇರುವ ಧ್ವನಿಗಳು ಇನ್ನೂ ಉಳಿದಿವೆ, ಆದರೆ ಈ ಧ್ವನಿಗಳು ಇನ್ನೂ ಸ್ಪಷ್ಟವಾಗಿ ಜೋರಾಗಿ ಕೇಳಿಬರಬೇಕಿದೆ.

ಒಂದು ಚಲನಶೀಲ ಸಮಾಜವು ವಿವಾದಗಳನ್ನು ಎದುರಿಸಲೇ ಬೇಕು. ನ್ಯಾಯಾಂಗವಾದರೂ ಇದಕ್ಕೆ ಹೊರತಲ್ಲ, ಅದು ದ್ವೀಪವಾಗಲೂ ಬಾರದು. ನ್ಯಾಯಾಲಯಗಳು ಸಮಾಜದ ಬಹುಸಂಖ್ಯೆಯ ಜನರ ಸಂವೇದನೆಗಳನ್ನು ಪ್ರಭಾವಿಸುವ ಸಾಂವಿಧಾನಿಕ ವಿಚಾರಗಳ ಬಗ್ಗೆ ತೀರ್ಪು ನೀಡುವಂತಹ ಸಂದರ್ಭಗಳಲ್ಲಿ ಅವು ವಿವಾದಗಳಲ್ಲಿ ಸಿಲುಕಿಕೊಳ್ಳುತ್ತವೆ. ಸಂಪೂರ್ಣವಾಗಿ ರಾಜಕೀಯ ಸ್ವರೂಪದ ವಿಚಾರಗಳಿಂದ ದೂರ ಉಳಿಯುವುದಕ್ಕಾಗಿ ಮತ್ತು ಸಾಂವಿಧಾನಿಕ ವಿಶ್ಲೇಷಣೆಯ ಪ್ರಶ್ನೆಗಳನ್ನು ಎತ್ತದೇ ಇರುವುದಕ್ಕಾಗಿ ನ್ಯಾಯಾಲಯಗಳು 'ರಾಜಕೀಯ ಪೊದರು'('political thicket' ಸಿದ್ಧಾಂತವನ್ನು ಸೃಷ್ಟಿಸಿಕೊಂಡಿವೆ ಮತ್ತು ಅದು ಸರಿಯೂ ಹೌದು– ನ್ಯಾಯಾಧೀಶರು ರಾಜಕಾರಣಿಗಳಲ್ಲ. ಆದರೂ ಅವರು ಸಾಂವಿಧಾನಿಕ ನೈತಿಕತೆಯ ವಿಚಾರಗಳ ಜೊತೆ ಸಂಬಂಧ ಇರುವವರು. ಒಂದು ರಾಜ್ಯದ ರಾಜ್ಯಪಾಲರ ಅಧಿಕಾರವೂ ಒಳಗೊಂಡಂತೆ, ಶಾಸನ ಸಭೆಗಳ ಬಗ್ಗೆ, ಸದನದಲ್ಲಿನ ಬಲಾಬಲ ಪರೀಕ್ಷೆಯ ಮೂಲಕವೇ ಸರ್ಕಾರವೊಂದನ್ನು ಸ್ಥಾಪಿಸುವ ವಿಚಾರಗಳ ಬಗ್ಗೆ, ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡುವುದಕ್ಕೆ ಇದರಿಂದ ಸಾಧ್ಯವಾಗಿದೆ. ಈ ತೀರ್ಮಾನಗಳು ಯಾವುದೇ ರೀತಿಯಲ್ಲೂ ಚುನಾಯಿತ ಪ್ರತಿನಿದಿ ಸಮೂಹಕ್ಕೆ ಕಳಂಕ ತರದೆ ಮತ್ತು ಅಧಿಕಾರದ ಪ್ರತ್ಯೇಕತೆಯ ನೀತಿಗೆ ಧಕ್ಕೆ ತರದೆ ನ್ಯಾಯಾಂಗದ ಪ್ರತಿಷ್ಠೆಯನ್ನು ಖಂಡಿತವಾಗಿ ಹೆಚ್ಚಿಸಿವೆ.

## ರಾಜಕೀಯ ಕಾರ್ಯಾಂಗ ಸೋತೆಡೆ ನ್ಯಾಯಾಂಗ ಸುಮ್ಮನಿರಲಾಗದು

ಸಲಿಂಗ ಕಾಮವನ್ನು ಅಪರಾಧದ ವ್ಯಾಪ್ತಿಯಿಂದ ಹೊರಗಿಡಲು (de-criminalize) ತನ್ನ ಅಧಿಕಾರವನ್ನು ಬಳಸಲು ಶಾಸಕಾಂಗವು ನಿರಾಕರಿಸಿದ ಸಂದರ್ಭದ ರೀತಿಯ ಕೆಲವು ನಿದರ್ಶನಗಳು ಇಲ್ಲದೇ ಇಲ್ಲ. ಮಹಿಳೆಯರಿಗೆ ಧಾರ್ಮಿಕ ಸ್ಥಳಗಳಿಗೆ ಪ್ರವೇಶ ನೀಡುವ ವಿಚಾರದಲ್ಲಿ ಆದಂತೆ ರಾಜಕೀಯ ಕಾರ್ಯ ನಿರ್ವಹಣೆಯಲ್ಲಿ ಮುತ್ಸದ್ದಿತನ ಕಾಣೆಯಾದ ನಿದರ್ಶನಗಳೂ ಕೂಡ ಇವೆ. ಸಾಮಾಜಿಕ ನ್ಯಾಯದ ಶಾಸನಗಳನ್ನು ಮತ್ತು ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ಕಾರ್ಯಗತಗೊಳಿಸಲು ಕಾರ್ಯಾಂಗವು ಸೋತ ಸಂದರ್ಭಗಳಲ್ಲಿ ಅದನ್ನು ಸರ್ವೋಚ್ಚ ನ್ಯಾಯಾಲಯದ ಸಾಮಾಜಿಕ ಕಲ್ಯಾಣ ಪೀಠವು ಎತ್ತಿ ತೋರಿಸಿದ ಸಂದರ್ಭಗಳೂ ಇವೆ. ಇಂತಹ ಹಲವು ಪ್ರಕರಣಗಳಲ್ಲಿ ನೀಡಲಾದ ತೀರ್ಪುಗಳು ಅನಗತ್ಯ ರಾಜಕೀಯ ಟೀಕೆಗೆ ಗುರಿಯಾಗಿವೆ. ಮತ್ತು ದಿಕ್ಕು ತಪ್ಪಿಸುವ ತಂತ್ರದ ಮೂಲಕ ರಾಜಕೀಯ ಕಾರ್ಯಾಂಗವು ತನ್ನ ಆಡಳಿತಾತ್ಮಕ ಕರ್ತವ್ಯಗಳನ್ನು ಬದಿಗೊತ್ತುವುದೂ ಉಂಟು. ಅತಿ ಕ್ರಿಯಾಶೀಲತೆಯ ಮೂಲಕ ಕಾರ್ಯಾಂಗದ ಅಧಿಕಾರವನ್ನು ಅತಿಕ್ರಮಿಸಿ, ಅಧಿಕಾರದ ಪ್ರತ್ಯೇಕತೆಯ ವಿಚಾರವನ್ನು ನಿರ್ಲಕ್ಷಿಸಿ, ನ್ಯಾಯಾಂಗವು ತನ್ನ ಲಕ್ಷ್ಮಣರೇಖೆಯನ್ನು ಮೀರುತ್ತಿದೆ ಎಂದು ಕಾರ್ಯಾಂಗವು ಆಗಾಗ ಆರೋಪ ಮಾಡುತ್ತಿರುವುದು ಈ ಹಿನ್ನೆಲೆಯಲ್ಲೇ..

ನಿಜ, ಕೆಲವು ಸಂದರ್ಭಗಳಲ್ಲಿ ನ್ಯಾಯಾಂಗವು ಪ್ರಜೆಗಳ ಕೋರಿಕೆಯ ಕಾರಣಕ್ಕೆ ತನ್ನ ಗಡಿಯನ್ನು ಮೀರಿರಬಹುದು. ಆದರೆ ರಾಜಕೀಯ ಕಾರ್ಯಾಂಗದ ಟೀಕೆಗಳ ನಡುವೆ ಉತ್ತರ ದೊರೆಯದೇ ಹೋಗಿರುವ ಪ್ರಶ್ನೆಯೆಂದರೆ: ರಾಜಕೀಯ ಕಾರ್ಯಾಂಗವು ತನ್ನ ಸಾಂವಿಧಾನಿಕ ಮತ್ತು ಶಾಸನಾತ್ಮಕ ಕರ್ತವ್ಯಗಳನ್ನು ನಿರ್ವಹಿಸದೇ ಹೋದಾಗ ಒಬ್ಬ ಪ್ರಜೆ (ಮತ್ತು ನ್ಯಾಯಾಂಗ) ಏನು ಮಾಡಬೇಕು? ಸಲಿಂಗ ಕಾಮಿಗಳ ಹಕ್ಕುಗಳನ್ನು ಮರೆತು ಬಿಡಬೇಕೆ? ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಬೆಂಬಲದ ಕತೆಯೇನು? ಮಕ್ಕಳನ್ನು ಲೈಂಗಿಕ ಚಿತ್ರಗಳಲ್ಲಿ(pornography) ಬಳಸುವ ವಿಚಾರವೇನು? ಮಕ್ಕಳು ಮತ್ತು ಮಹಿಳೆಯರ ಕಳ್ಳ ಸಾಗಾಣಿಕೆಯ ವಿಚಾರವೇನು? ಮಹಿಳೆಯರ ರಕ್ಷಣೆಯ ಸಮಾಚಾರವೇನು? ಪರಿಸರ ಸಮಸ್ಯೆಯ ವಿಚಾರವೇನು? ಈ ಪಟ್ಟಿಯನ್ನು ಹೀಗೇ ಬೆಳೆಸಬಹುದು. ನ್ಯಾಯಾಂಗವು ದಂತದ ಗೋಪುರದಲ್ಲಿ ಮೂಕ ಪ್ರೇಕ್ಷಕನಾಗಿ ಉಳಿಯಬೇಕೆಂದು ನಿರೀಕ್ಷಿಸುವುದು ಸಾಮಾಜಿಕ ನಿರ್ವಹಣೆಯಲ್ಲಿ (social engineering) ನ್ಯಾಯಾಂಗದ ಪಾತ್ರವನ್ನು ನಿರ್ಲಕ್ಷಿಸಿದಂತೆ.

## ನ್ಯಾಯಾಧೀಶರ 'ಬಂಡಾಯ'ದ ಅರ್ಥ

ಅಮೆರಿಕದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಆಲಿವರ್ ವೆಂಡೆಲ್ ಹೋಮ್ಸ್ ಜೂನಿಯರ್ ಅವರು ತಮ್ಮ ೯೦ ನೆಯ ಜನ್ಮ ದಿನದಂದು ಒಬ್ಬ ಪತ್ರ ಕರ್ತನನ್ನು ಕುರಿತು "ಯುವಕನೇ, ನನ್ನ ಯಶಸ್ಸಿನ ಗುಟ್ಟು ಎಂದರೆ ನಾನು ದೇವರಲ್ಲ ಎಂಬ ಸತ್ಯವನ್ನು ಚಿಕ್ಕ ವಯಸ್ಸಿನಲ್ಲೇ ಕಂಡುಕೊಂಡಿದ್ದು" ಎಂದು ಹೇಳುತ್ತಾರೆ. ನಮ್ಮ ಮುಖ್ಯ ನ್ಯಾಯಾಧೀಶರಲ್ಲಿ ಕೆಲವರು ಇದನ್ನು ಕಂಡುಕೊಂಡಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ನ್ಯಾಯಾಧೀಶರು ನಿರ್ವಹಿಸುವುದು ಒಂದು ಪವಿತ್ರ ಕಾರ್ಯವನ್ನು ಎಂದು ಹೇಳಲಾಗುತ್ತದೆ – ತಮ್ಮೆದುರು ಇರುವ ಕಕ್ಷಿದಾರರ ಹಣೆಬರಹವನ್ನು ನಿರ್ಧರಿಸುವಾಗ ಇದು ನಿಜವಿರಬಹುದು. ಆದರೆ ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವಾಗ ಯಾವ ನ್ಯಾಯಾಧೀಶನೂ ದೇವರಲ್ಲ; ಮುಖ್ಯ ನ್ಯಾಯಾಧೀಶರು ಇದಕ್ಕೆ ಹೊರತಲ್ಲ. ಕೆಲವು ಸಲ ಪ್ರಾಮುಖ್ಯತೆಯಿಂದ ಬರುವ ಅಮಲು(ಇಜಚಿಜುಟಿಫ) ಅದರ ಜೊತೆಗಿನ ಅಧಿಕಾರ ಸರದಿಯ ಯಜಮಾನ (master of roster) ಎಂಬ ಬಿರುದು ಮಾನವಮಾತ್ರರನ್ನು ಭ್ರಮಾಧೀನರನ್ನಾಗಿ ಮಾಡುವುದು.

ವಕೀಲರು ಮತ್ತು ನ್ಯಾಯಾಧೀಶರು, ಸಾಕ್ಷಿಗಳ ಹೇಳಿಕೆ ದೊರೆಯದಿರುವಾಗ ಸಾಂದರ್ಭಿಕ ಸಾಕ್ಷ್ಯವನ್ನು ಅವಲಂಬಿಸಬೇಕಾಗುತ್ತದೆ. ಇಂತಹ ಸಂದರ್ಭಗಳನ್ನು ಇಡಿಯಾಗಿ ಪರಿಗಣಿಸಿದಾಗ ಕೆಲವೊಮ್ಮೆ ಅವು ಒಂದೇ ಒಂದು ತಪ್ಪಿಸಿಕೊಳ್ಳಲಾರದ ತೀರ್ಮಾನವನ್ನು ಸೂಚಿಸುತ್ತವೆ. ಕೆಲವು ಘಟನೆಗಳು 'ಬಂಡಾಯ'ವೆದ್ದವರೆಂದು ಹೇಳಲಾಗುವ ನ್ಯಾಯಾಧೀಶರು ಸರ್ವೋಚ್ಚ

(೯ನೇ ಪುಟಕ್ಕೆ

# ಪೌರತ್ವ ತಿದ್ದುಪಡಿ ಕಾಯಿದೆಯೂ, ನಮ್ಮ ಇಸ್ಲಾಮೀ ನೆರೆಹೊರೆಯೂ...

–ಡಿ.ಎಸ್. ನಾಗಭೂಷಣ




ಪೌರತ್ವ ತಿದ್ದುಪಡಿ ಕಾಯ್ದೆಯ ಪರವಾಗಿ ಸರ್ಕಾರ ಅದನ್ನು ಮಸೂದೆಯಾಗಿ ಮಂಡಿಸಿದ ಸಂದರ್ಭದಲ್ಲಿ ಸಂಸತ್ತಿನಲ್ಲಿ ನೀಡಿದ ಮತ್ತು ಆನಂತರ ಅದರ ವಿರುದ್ಧ ದೇಶಾದ್ಯಂತ ಎದ್ದ ಪ್ರತಿಭಟನೆಗಳ ಸಂದರ್ಭದಲ್ಲಿ ಅದರ ಸಮರ್ಥನೆಗಾಗಿ ನೀಡುತ್ತಿರುವ ಹಲವಾರು ಹೇಳಿಕೆಗಳು ಅರ್ಧ ಸತ್ಯಗಳು ಮಾತ್ರವಾಗಿವೆ. ಯಾವ ದೇಶಗಳ ಹಿಂದೂ, ಬೌದ್ಧ, ಜೈನ, ಸಿಖ್, ಕ್ರೈಸ್ತ ಮತ್ತು ಪಾರ್ಸಿ ವಲಸಿಗರಿಗೆ ನೇರವಾಗಿ ಪೌರತ್ವವನ್ನು ನೀಡಲು ಉದ್ದೇಶಿಸಲಾಗಿದೆಯೋ ಆ ಪಾಕಿಸ್ತಾನ, ಬಂಗ್ಲಾದೇಶ ಮತ್ತು ಆಫ್ಘನಿಸ್ತಾನಗಳು ಇಸ್ಲಾಮಿಕ್ ದೇಶಗಳಾಗಿರುವುದರಿಂದ ಇವರೆಲ್ಲ ಮತೀಯ ದೌರ್ಜನ್ಯಕ್ಕೆ ಒಳಗಾಗಿ ಓಡಿ ಬಂದವರಾಗಿದ್ದು ಅವರಿಗೆಲ್ಲ ನ್ಯಾಯ ಒದಗಿಸುವುದು ಈ ಕಾಯಿದೆಯ ಉದ್ದೇಶವಾಗಿದೆ ಎಂಬ ಸರ್ಕಾರದ ವಿವರಣೆ ಇಂತಹ ಒಂದು ಅರ್ಧ ಸತ್ಯ,

ಈ ವಿವರಣೆಗೆ ಪೂರಕ ಸಾಕ್ಷ್ಯವಾಗಿ ಸರ್ಕಾರ ನೀಡುವ ಮಾಹಿತಿ ಎಂದರೆ, ಆ ಮೂರು ದೇಶಗಳಲ್ಲಿ ಅಲ್ಪ ಸಂಖ್ಯಾತರ, ಮುಖ್ಯವಾಗಿ ಹಿಂದೂಗಳ ಜನಸಂಖ್ಯಾ ಪ್ರಮಾಣ ತೀವ್ರವಾಗಿ ಕುಸಿದಿದೆ ಎಂಬುದು. ಆದರೆ ಅಧಿಕೃತ ಮೂಲಗಳಿಂದ ಲಭ್ಯವಿರುವ ಅಂಕಿ ಸಂಖ್ಯೆಗಳನ್ನು ಗಮನಿಸಿದಾಗ ಇದು ಕೇವಲ ಮತೀಯ ಭಾವನೆಗಳನ್ನು ಕೆರಳಿಸುವ ಉದ್ದೇಶದ ಉತ್ಪ್ರೇಕ್ಷೆಯ ಮಾತು ಎನಿಸದಿರದು. ರಾಷ್ಟ್ರ ವಿಭಜನೆಯ ಸಂದರ್ಭದಲ್ಲಿ ಮತೀಯ ದೌರ್ಜನ್ಯಗಳ ಭಯದ ನೆರಳಿನಲ್ಲಿ ೬೦ ಲಕ್ಷ ಜನ ಪಾಕಿಸ್ತಾನದಿಂದ ಭಾರತಕ್ಕೂ, ೮೦ ಲಕ್ಷ ಜನ ಭಾರತದಿಂದ ಪಾಕಿಸ್ತಾನಕ್ಕೂ ನಾಲ್ಕು ವರ್ಷಗಳ ಅವಧಿಯಲ್ಲಿ ವಲಸೆ ಹೋದರೆಂಬುದು ಒಂದು ಅಂದಾಜು. ಇಂತಹ ಪರಿಸ್ಥಿತಿಯಲ್ಲಿ ಯಾವ ದೇಶದಲ್ಲಿ ಅಲ್ಪಸಂಖ್ಯಾತರ ಪ್ರಮಾನ ಎಷ್ಟಿತ್ತು ೦ ಎಂದು ನಿಖರವಾಗಿ ಹೇಳುವುದು ಅಸಾಧ್ಯ. ಆದರೆ ಕಾಯಿದೆಯ ಸಮರ್ಥಕರು ಹೇಳುವಂತೆ ಪಾಕಿಸ್ತಾನದಲ್ಲಿ ಶೇ. ೨೦ಕ್ಕೂ ಹೆಚ್ಚಿದ್ದ ಹಿಂದೂಗಳ ಪ್ರಮಾಣವೀಗ ಶೇ. ೨ಕ್ಕೋ ೩ಕ್ಕೋ ಕುಸಿದಿದೆ ಎಂಬುದು ಮಾತ್ರ ದಾರಿ ತಪ್ಪಿಸುವ ಮಾತು. ಏಕೆಂದರೆ, ೧೯೫೧ರ ಪಾಕಿಸ್ತಾನದ ಅಧಿಕೃತ ಜನಗಣತಿ ಪ್ರಕಾರ ಈಗ ಬಂಗ್ಲಾದೇಶವಾಗಿರುವ ಪೂರ್ವ ಪಾಕಿಸ್ತಾನವೂ ಸೇರಿದಂತೆ ರಾಷ್ಟ್ರ ವಿಭಜನೆಯ ಸಂದರ್ಭದಲ್ಲಿ ಅಲ್ಲಿದ್ದ ಹಿಂದೂಗಳನ್ನೂ ಒಳಗೊಂಡ ಅಲ್ಪಸಂಖ್ಯಾತರ ಪ್ರಮಾಣ ಸುಮಾರು ಶೇ. ೧೪. ಇದರಲ್ಲಿ ಈಗ ಪಾಕಿಸ್ತಾನವೆಂದು ಕರೆಯಾಲಾಗುವ ಪಶ್ಚಿಮ ಪಾಕಿಸ್ತಾನದ ಪಾಲು ಶೇ.೩.೪೪. ಮತ್ತು ಈಗ ಬಂಗ್ಲಾದೇಶವಾಗಿರುವ ಪೂರ್ವ ಪಾಕಿಸ್ತಾನದ ಪಾಲು ಶೇ. ೨೩.೨. ಆದರೆ ಪಾಕಿಸ್ತಾನದಲ್ಲಿ ಅದು ೧೯೯೮ರ ಜನಗಣತಿಯ ಪ್ರಕಾರ ಶೇ ೧.೬ಕ್ಕೆ ಕುಸಿದಿದೆ ಎಂದು ಹೇಳಲಾಗುತ್ತಿದೆಯಾದರೂ, ಅ ದೇಶದ ಹಿಂದೂ ಕಲ್ಯಾಣ ಮಂಡಳಿ ಈ ಅಂಕಿ–ಅಂಶ ವಿಶ್ವಾಸಾರ್ಹವಲ್ಲವೆಂದು ಸಂಶಯಿಸುತ್ತಾ, ಅದು ಶೇ ೪ ಎಂದು ಹೇಳುತ್ತದೆ! ಇದೀಗ ಅಲ್ಲಿನ ೨೦೧೭ರ ಜನಗಣತಿ ಅಂಕಿ ಅಂಶಗಳು ಪ್ರಕಟವಾಗುತ್ತಿದ್ದು ಅದರ ಪ್ರಕಾರ ಹಿಂದೂಗಳ ಜನಸಂಖ್ಯೆ ಶೇ. ೯೪ರ ಪ್ರಮಣದಲ್ಲಿ ಏರಿರಬಹುದಾದ ಅಂದಾಜಿದೆ. ಅದೇನೇ ಇರಲಿ, ರಾಷ್ಟ್ರ ವಿಭಜನೆಯ ವಲಸೆ ಮತವಾರು ಜನಸಂಖ್ಯಾ ಪ್ರಮಾಣದಲ್ಲಿ ಉಂಟು ಮಾಡಿದ ಏರುಪೇರಿನ ಹಿನ್ನೆಲೆಯಲ್ಲಿ ನೋಡಿದಾಗ ಈಗಿನ ಪಾಕಿಸ್ತಾನದಲ್ಲಿ ಮತೀಯ ದೌರ್ಜನ್ಯವನ್ನು ಯಾವ ಕಾರಣದಿಂದಲೂ ನಿರಾಕರಿಸಲಾಗದಿದ್ದರೂ., ಆ ಕಾರಣದಿಂದಲೇ ಅಕ್ರಮವಾಗಿ ಭಾರತಕ್ಕೆಂದೇ ವಲಸೆ ಬಂದವರ ಸಂಖ್ಯೆ ಬಹು ದೊಡ್ಡದಿರಲಾರದು. ಮುಸ್ಲಿಮರೂ ಸೇರಿದಂತೆ ಹಲವು ಮತಗಳ ಜನ ಉತ್ತಮ ಜೀವನೋಪಾಯ, ಧರ್ಮನಿರಪೇಕ್ಷ ವಾತಾವರಣ, ಬಂಧು ಬಾಂಧವರ ಸಾಮೀಪ್ಯ, ಮದುವೆ ಇತ್ಯಾದಿ ಕಾರಣಗಳಿಂದಲೂ ಈ ದೇಶಕ್ಕೆ ವಲಸೆ ಬಂದಿರುವ ಸಾಧ್ಯತೆಗಳಿವೆ.

ಇನ್ನು ಬಂಗ್ಲಾದೇಶದಲ್ಲಿ ಅದು ಪಾಕಿಸ್ತಾನದಿಂದ ಬೇರ್ಪಟ್ಟು ಸ್ವತಂತ್ರ ದೇಶವಾದ ನಂತರದ ವರ್ಷಗಳಲ್ಲಿ ಹಿಂದೂಗಳ ಜನಸಂಖ್ಯಾ ಪ್ರಮಾಣ ಅಲ್ಲಿ ನಡೆದ ಹಲವು ಮಿಲಿಟರಿ ಕ್ರಾಂತಿಗಳ ಮತ್ತು ಮತೀಯ ಮೂಲಭೂತವಾದಿಗಳ ಕಾರ್ಯಾಚರಣೆಗಳ ಪರಿಣಾಮವಾಗಿ ಹಲವು ಏರುಪೇರುಗಳನ್ನು ಕಂಡು ಈಗ ಪ್ರಜಾಪ್ರಭುತ್ವವಾದಿ ಹಸೀನಾ ಅವರ ಆಳ್ವಿಕೆಯ ಸಮಯದಲ್ಲಿ ಶೇ ೮ರಿದ ೧೦ರ ಮಧ್ಯೆ ಇದೆಯೆಂದು ಹೇಳಲಾಗುತ್ತಿದೆ. ಆದರೆ ಈ ಏರುಪೇರು ಹಿಂದೂಗಳಿಗೆ ಮಾತ್ರ ಸಂಬಂಧಿಸಿಲ್ಲದೆ ಮುಸ್ಲಿಮರ ಜನಸಂಖ್ಯಾ ಪ್ರಮಾಣದಲ್ಲೂ ಕಂಡುಬಂದಿದ್ದು ಇದು ಆ ದೇಶದಿಂದ ಭಾರತದ ಗಡಿ ರಾಜ್ಯಗಳಿಗೆ ನಡೆದಿರುವ ವಲಸೆಯ ವಿದ್ಯಮಾನದಲ್ಲಿ ಪ್ರತಿಫಲಿಸಿದೆ. ಈ ವಲಸೆಯಲ್ಲಿ, ಅಸ್ಸಾಂನ ಪೌರತ್ವ ನೋಂದಣಿ ಯೋಜನೆ ಸೂಚಿಸುತ್ತಿರುವಂತೆ ಹಿಂದೂಗಳ ಜೊತೆ ಅಪಾರ ಪ್ರಮಾಣದಲ್ಲಿ ಮುಸ್ಲಿಮರೂ ಇರುವುದರಿಂದ ಇದಕ್ಕೆ ಬಂಗ್ಲಾದಲ್ಲಿನ ಮತೀಯ ದೌರ್ಜನ್ಯವೊಂದೇ ಕಾರಣವೆಂದು ಸಾರಾಸಗಟಾಗಿ ಹೇಳಲಾಗದು. ಇಲ್ಲಿಯೇ ವಲಸೆಯ ಇತರ ಕಾರಣಗಳೂ ನಮ್ಮ ಗಮನಕ್ಕೆ ಬರುವಂತಾಗುವುದು. ಬಂಗ್ಲಾ ದೇಶ ಜಗತ್ತಿನಲ್ಲೇ ಅತ್ಯಂತ ದಟ್ಟ ಜನಸಾಂದ್ರತೆ ಹೊಂದಿರುವ ದೇಶಗಳಲ್ಲಿ ಒಂದಾಗಿದ್ದು ಅಲ್ಲಿ ಜೀವನೋಪಾಯ ಕಷ್ಟವಾಗಿದೆ. ಈಗ ಮುಖ್ಯ ಪ್ರಶ್ನೆ: ಜೀವನೋಪಾಯ ಹುಡುಕಿಕೊಂಡು ಬಂದವರನ್ನು ಮತೀಯ ಆಧಾರದ ಮೇಲೆ ತಾರತಮ್ಯಕ್ಕೊಳಪಡಿಸುವುದು ಯಾವ ಧರ್ಮ? ಇವರಿಗೆಲ್ಲ ಆಶ್ರಯ ಕೊಡುವುದು ಕಷ್ಟವೆನಿಸಿದರೆ ಅದನ್ನು ಹಾಗೆ ಹೇಳುವುದು ಒಳ್ಳೆಯದು. ಇಸ್ಲಾಮಿಕ್ ರಾಷ್ಟ್ರದ ಮಾತೆತ್ತಿ ಜನರನ್ನು ಕೆರಳಿಸುವ ರಾಜಕಾರಣವೇಕೆ? ಬಂಗ್ಲಾದೇಶ ಮೂಲ ಪಾಕಿಸ್ತಾನದಿಂದ ಬೇರ್ಪಡೆಯಾದದ್ದೇ ಅದು ಇಸ್ಲಾಮಿಕ್ ರಾಷ್ಟ್ರವಾಗಿ ಉರ್ದುವನ್ನು ಇಡೀ ರಾಷ್ಟ್ರದ ಅದಿಕೃತ ಭಾಷೆಯನ್ನಾಗಿ ಘೋಷಿಸಲಾಗಿದೆ ಎಂಬ ಕಾರಣಗಳಿಂದ ಆರಂಭವಾದ ಘರ್ಷಣೆಯಿಂದಾಗಿ. ಬಂಗ್ಲಾದೇಶ ಉದಯವಾದಾಗ ಅದು ತನ್ನನ್ನು ಧರ್ಮ ನಿರಪೇಕ್ಷ ರಾಷ್ಟ್ರವೆಂದು ಘೋಷಿಸಿಕೊಂಡಿತ್ತು ಎಂಬುದನ್ನು ನಾವು ಮರೆಯಬಾರದು.

ನಿಜ ಒಂದು ರಾಷ್ಟ್ರ ಮತೀಯವೆಂದು ಘೋಷಿಸಿಕೊಳ್ಳುವುದು ಈ ಆಧುನಿಕ ಕಾಲದಲ್ಲಿ ಒಂದು ಅನಾಗರಿಕ ನಡೆಯೇ. ಆದರೆ ಅದನ್ನೇ ನೆಪವಾಗಿಟ್ಟುಕೊಂಡು ಆ ದೇಶಗಳ ಅವಾಸ್ತವವಾದ, ರಾಕ್ಷಸೀಯ ಚಿತ್ರ ಕೊಡುವುದು ಹಲವು ಮತೀಯ ರಾಷ್ಟ್ರಗಳಿರುವ ಇಂದಿನ ಜಾಗತಿಕ ಸಂದರ್ಭದಲ್ಲಿ ವಿವೇಕದ ನಡೆಯಾಗದು. ಸ್ವತಂತ್ರ ರಾಷ್ಟವಾದ ಆರು ವರ್ಷಗಳ ನಂತರವಷ್ಟೇ ತನ್ನನ್ನು ಇಸ್ಲಾಮಿಕ್ ರಾಷ್ಟ್ರವೆಂದು ಘೋಷಿಸಿಕೊಂಡ ಪಾಕಿಸ್ತಾನ ಅಂತಿಮವಾಗಿ ೧೯೭೩ರಲ್ಲಿ ಇಸ್ಲಾಮಿಕ್ ಸಂವಿಧಾನವನ್ನು ಅಳವಡಿಸಿಕೊಂಡಿತಾದರೂ ಅದು ಕ್ರಮೇಣ ತನ್ನ ನಾಗರಿಕ ಕಾನೂನುಗಳ ವಿಷಯದಲ್ಲಿ ಉದಾರವಾಗುತ್ತಾ ತನ್ನ ಸಂಸತ್ತು ಮತ್ತು ಪ್ರಾಂತೀಯ ಶಾಸನಸಭೆಗಳಲ್ಲಿ ಅಲ್ಪಸಂಖ್ಯಾತರಿಗೆ ಉಚಿತ ಪ್ರಮಾಣದ ಪ್ರಾತಿನಿಧ್ಯ ಕಲ್ಪಿಸಿದೆಯಲ್ಲದೆ ಈಗ ಸಾರ್ವತ್ರಿಕ ಕ್ಷೇತ್ರಗಳಲ್ಲಿಯೂ ಅವರು ಸ್ಪರ್ಧಿಸುವ ಹಕ್ಕನ್ನೂ ಪಡೆದಿದ್ದು, ಕೆಲವರು ಆಯ್ಕೆಯೂ ಆಗಿದ್ದಾರೆಂಬುದು ನಮ್ಮಲ್ಲಿ ಎಷ್ಟು ಜನಕ್ಕೆ ಗೊತ್ತು? ಜೊತೆಗೆ ಇನ್ನೊಂದು ಮಾತು: ಅಲ್ಲಿ ರಾಷ್ಟ ವಿಭಜನೆಯ ಸಂದರ್ಭದ ಗಡಿಯ ಎರಡೂ ಬದಿಗಳಲ್ಲಿದ್ದ ಪ್ರಚೋದನಾತ್ಮಕ ಸನ್ನಿವೇಶದ ಕಾವು ಆರಿದ ನಂತರ ಅಲ್ಲಿ ಮತೀಯ ಸೌಹಾರ್ದತೆಯ ಸಂಕೇತವಾಗಿ ಮುಸ್ಲಿಮೇತರ ಆರಾಧನಾ ಸ್ಥಳಗಳ ಮತ್ತು ಜಾತ್ರೆಗಳ ಪುನರುಜ್ಜೀವನಕ್ಕಾಗಿ ಸರ್ಕಾರವೇ ನೆರವಾಗುತ್ತಿದೆ. ಗುರು ನಾನಕ್ ಪಥ ನಿರ್ಮಾಣ ಈ ಸೌಹಾರ್ದಕ್ಕೊಂದು ಇತ್ತೀಚಿನ ಉದಾಹರಣೆ.

ಇನ್ನು ಬಂಗ್ಲಾದೇಶ ಕೆಲ ಚಾರಿತ್ರಿಕ ಕಾರಣಗಳಿಂದಷ್ಟೇ ಒಂದು ನಾಮಕಾವಸ್ತೆ ಮತೀಯ ರಾಷ್ಟವಾಗಿದ್ದು ಅಲ್ಲಿ ಕಾನೂನಿನ ಮುಂದೆ ಎಲ್ಲರೂ ಸಮಾನರಾಗಿದ್ದಾರೆ. ಹಾಗಾಗಿಯೇ ಅಲ್ಲಿನ ಸಂಸತ್ತಿನಲ್ಲಿ, ಸಚಿವ ಸಂಪುಟದಲ್ಲಿ, ಉನ್ನತ ನ್ಯಾಯಾಂಗದಲ್ಲಿ (ಆ ದೇಶದ ಸರ್ವೋಚ್ಚ ನ್ಯಾಯಾಲಯದ ಹಿಂದಿನ ಮುಖ್ಯ ನ್ಯಾಯಾಧೀಶ ಓರ್ವ ಹಿಂದೂ ಆಗಿದ್ದರು.) ಕ್ರಿಕೆಟ್, ಫುಟ್‌ಬಾಲ್ ಮತ್ತಿತರ ಕ್ರೀಡಾ ತಂಡಗಳಲ್ಲಿ, ಸಿನಿಮಾ, ನಾಟಕ ಸೇರಿದಂತೆ ಕಲಾ ಕ್ಷೇತ್ರಗಳಲ್ಲಿ ಹಿಂದೂಗಳೂ ಅನ್ಯಮತೀಯರೊಂದಿಗೆ ಸಮಸಮವಾಗಿ ಸ್ಪರ್ಧಿಸುತ್ತಾ ಆ ಕ್ಷೇತ್ರಗಳಲ್ಲಿ ಹೆಸರು ಮಾಡಿದ್ದಾರೆ. ಅದಿರಲಿ, ಈಗ ಈ ದೇಶದ ಪ್ರಗತಿ ದರ ನಮ್ಮದಕ್ಕಿಂತ ತುಂಬ ಹೆಚ್ಚಾಗುತ್ತಿರುವುದರಿಂದ ನಮ್ಮಿಂದ ಆ ದೇಶಕ್ಕೆ ದೊಡ್ಡ ಪ್ರಮಾಣದಲ್ಲಿ.ಹಿಂದೂ ಮುಸ್ಲಿಮರಿಬ್ಬರ ವಲಸೆಯೂ ಆರಂಭವಾಗಿದೆ ಎಂದು ಹೇಳಲಾಗುತ್ತಿದೆ.

ಆಫ್ಘನಿಸ್ತಾನಕ್ಕೂ ರಾಷ್ಟ್ರ ವಿಭಜನೆಗೂ ಸಂಬಂಧವಿಲ್ಲದೇ ಇರುವುದರಿಂದ ಮತ್ತು ಅಲ್ಲಿ ಮುಸ್ಲಿಮರೇ ಹೊಡೆದಾಡಿಕೊಂಡು ಸಾಯುತ್ತಿರುವುದರಿಂದ ಈ ಚರ್ಚೆಯನ್ನು ಅಲ್ಲಿಗೆ ಒಯ್ಯುವುದು ಅಸಂಬದ್ಧವೇ ಸರಿ. ಅದೇನೇ ಇದ್ದರೂ, ೨೦೧೫ರಲ್ಲಿ ದೀರ್ಘ ಅವಧಿಯ ವೀಸಾಗಾಗಿ ಇದೇ ಸರ್ಕಾರ ವಲಸಿಗರಿಂದ ಅರ್ಜಿ ಆಹ್ವಾನಿಸಿದಾಗ ತಮ್ಮ ವಲಸೆಗೆ ಮತೀಯ ದೌರ್ಜನ್ಯದ ಕಾರಣ ನೀಡಿ ಬಂದ ಅರ್ಜಿಗಳು ಕೇವಲ ೩೧೩೧೩ ಮಾತ್ರ, ಎಂದು ಗುಪ್ತಚರ ವಿಭಾಗದ ಒಂದು ವರದಿ ಹೇಳುತ್ತಿರುವಾಗ ಈ ಒಟ್ಟು ಮತೀಯ ದೌರ್ಜನ್ಯದ ಮಾತೇ ಕ್ಷುಲ್ಲಕ ಎನ್ನಿಸುತ್ತದೆ. ಪೌರತ್ವ ನೀಡಲು ಮತೀಐ ದೌರ್ಜನ್ಯವೇ ಆಧಾರವಾಗಿರುವುದಾದದರೆ, ವಲಸೆಯ ಸಕ್ರಮೀಕರಣಕ್ಕೆ ೨೦೧೪ರ ಅಂತ್ಯದವರೆಗೂ ಗಡುವು ಏಕೆ?

ಈ ಎಲ್ಲ ಮಾಹಿತಿಯ ಅರ್ಥ ಈ ದೇಶಗಳಲ್ಲಿ ಮತೀಯ ದೌರ್ಜನ್ಯಗಳು ನಡೆದೇ ಇಲ್ಲ ಎಂದಲ್ಲ. ನಡೆದಿವೆ; ನಡೆಯುತ್ತಲೂ ಇವೆ. ಮತೀಯ ಭಾವನೆಗಳನ್ನು ಕೆರಳಿಸಿದರೆ ಅವು ಎಲ್ಲಿ ಬೇಕಾದರೂ ನಡೆಯಬಹುದು. ರಾಷ್ಟ್ರ ವಿಭಜನೆಯ ಸಂದರ್ಭದಲ್ಲಿ ಮತ್ತು ಕಳೆದ ಐದಾರು ವರ್ಷಗಳಲ್ಲಿ ನಮ್ಮ ದೇಶದಲ್ಲೂ ಇಂಥವು ಎಷ್ಟು ನಡೆದಿಲ್ಲ? ಮತೀಯ ರಾಷ್ಟ್ರಗಳು ಎಂಬುದು ಅಪೇಕ್ಷಣೀಯವಲ್ಲದಿದ್ದರೂ ಅವು ಇಂದಿನ ವಾಸ್ತವ. ನಾವೇನು ಅಂಥ ರಾಷ್ಟ್ರಗಳ ಜೊತೆ ಸಂಬಂಧ ಕಡಿದುಕೊಂಡಿದ್ದೇವೆಯೆ? ನಮ್ಮ ನೆರೆಯ ಮೂರೂ ರಾಷ್ಟ್ರಗಳಲ್ಲಿ ರಾಜಕೀಯವಾಗಿ ಹಲವು ಬದಲಾವಣೆಗಳು ನಡೆಯುತ್ತಿದ್ದು ಅವು ನಿಧಾನವಾಗಿಯಾದರೂ ಉದಾರವಾದಿ ಮೌಲ್ಯಗಳತ್ತ ಸಾಗುತ್ತಿರುವಂತಿವೆ. ಹಾಗಾಗಿ ಅವನ್ನು ಉದಾರ ಮೌಲ್ಯಗಳೆಡೆಗೆ ಕರೆದೊಯ್ಯುವುದು ನಿಜವಾದ ಧರ್ಮೀಯನ ಪ್ರಯತ್ನವಾಗಬೇಕೇ ಹೊರತು, ಅವನ್ನು ಕೆಣಕುತ್ತಾ ಅವುಗಳಂತೆಯೇ ನಾವು ಆಗುವಂತಾಗಬಾರದು. ಅದೇ ನಮ್ಮ ಉದ್ದೇಶವಾಗಿರದ ಹೊರತು.

**(ಇಲ್ಲಿನ ಜನಗಣತಿ ಅಂಕಿ ಅಂಶಗಳನ್ನು ಅಂತರ್ಜಾಲದಿಂದ ಪಡೆಯಲಾಗಿದೆ–ಲೇ.)**

---

**೭ನೇ ಪುಟದಿಂದ)**

ನ್ಯಾಯಾಲಯದಲ್ಲಿ ಆಡಳಿತಾತ್ಮಕವಾಗಿ ಭಾರೀ ತಪ್ಪಾಗಿದೆ ಎಂದು ನಂಬುವಂತೆ ಮಾಡಿತು. ( ಈ 'ಬಂಡಾಯ' ನ್ಯಾಯಮೂರ್ತಿಗಳಲ್ಲಿ ನಾನೂ ಒಬ್ಬನಾಗಿದ್ದೆ) ನ್ಯಾಯಾಂಗದ ಘನತೆ, ಉತ್ಕೃಷ್ಟ ಮತ್ತು ಸ್ವಾಯತ್ತೆತೆಗಳು ಸಾರ್ವಜನಿಕ ನಂಬಿಕೆ ಮತ್ತು ವಿಶ್ವಾಸಗಳನ್ನು ಅವಲಂಬಿಸಿರುತ್ತವೆ, ಹಾಗೆಯೇ ಅದು ಒಡೆಯ(master) ತನ್ನ ಸಹೋದ್ಯೋಗಿಗಳ ನಡುವೆ ಹೊಂದಿರುವ ನಂಬಿಕೆ ಮತು ವಿಶ್ವಾಸಗಳನ್ನೂ ಕೂಡ ಅವಲಂಬಿಸಿರುತ್ತದೆ. ೨೦೧೮ರ ಜನವರಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಆಡಳಿತದಲ್ಲಿ ತುಸು ವಿವೇಕವನ್ನು ತರಲು ಮುಂದೆ ನಯವಾಗಿ ಪತ್ರಿಕಾ ಗೋಷ್ಠಿ ಎಂದು ಹೆಸರಾದ ಪ್ರಯತ್ನವನ್ನು ಮಾಡಿದಾಗ ನ್ಯಾಯಾಂಗದ ಆಡಳಿತದ ವಿಚಾರದಲ್ಲಿ ಸಹೋದ್ಯೋಗೀಯ ನಂಬಿಕೆ ವಿಶ್ವಾಸಗಳು ಭಾರೀ ಘಾಸಿಗೊಂಡವು. ಈ ಪ್ರಸಂಗವು ಹಲವರನ್ನು ಗೊಂದಲಕ್ಕೀಡುಮಾಡಿ ಕೆಲವು ವಲಯಗಳಲ್ಲಿ ವ್ಯಾಪಕವಾದ ಆತಂಕಕ್ಕೆ ಮತ್ತು ಟೀಕೆಗೆ ಕಾರಣವಾಯಿತು ಆದರೆ ಅದು ಖಂಡಿತವಾಗಿ ಕೆಲವು ಸಕಾರಾತ್ಮಕ ಪರಿಣಾಮಗಳನ್ನು, ವಿಶೇಷವಾಗಿ ಸರ್ವೋಚ್ಚ ನ್ಯಾಯಾಲಯದ ಕೊಲಿಜಿಯಂನ ನಿರ್ವಹಣೆಯ ವಿಚಾರದಲ್ಲಿ ಉಂಟುಮಾಡಿತು. ಕಳೆದು ಹೋಗಿದ್ದ ಶಕ್ತಿ ಮತ್ತು ಚೇತನವನ್ನು **ಜೊತೆಗೇ** ಐಹಿಕ ಒಳ್ಳೆಯತನವನ್ನು ಮರಳಿ ತಂದಿತು. ಏನೇ ಆದರೂ ಬೇಗನೆ ಅವೆಲ್ಲವೂ ಕಣ್ಮರೆಯಾದವು.

## ದಾಖಲೆ ಇಲ್ಲದೆ ನ್ಯಾಯಮೂರ್ತಿಗಳ ಬೈಠಕ್

ಈ ವರ್ಷ ಒಂದು ಭಯಂಕರ ವರ್ಷ. ಕಳೆದ ವರ್ಷ ಕೊಲಿಜಿಯಂನಲ್ಲಿ ಮಾಡಿದ ಒಂದು ನಿರ್ಣಯವನ್ನು ಈ ವರ್ಷ ಸದ್ದಿಲ್ಲದೆ ಪಕ್ಕಕ್ಕೆ ಸರಿಸಲಾಗಿದೆ (superseded); ಭಾರತದ ಮುಖ್ಯ ನ್ಯಾಯಮೂರ್ತಿಯ ವಿರುದ್ಧ ಸರ್ವೋಚ್ಚ ನ್ಯಾಯಾಲಯದ ಒಬ್ಬ ಸಿಬ್ಬಂದಿ ಲೈಂಗಿಕ ಕಿರುಕುಳದ ಆರೋಪ ಮಾಡಿದರು. ಆ ಮುಖ್ಯ ನ್ಯಾಯಾಮೂರ್ತಿಗಳು ನ್ಯಾಯಾಲಯ ಕೆಲಸ ಮಾಡದ ಒಂದು ದಿನ ಅನಿರೀಕ್ಷಿತ ಬೈಠಕ್ (sitting) ನಡೆಸಿ, ಆ ಸಿಬ್ಬಂದಿಯನ್ನು ದೂಷಿಸಿ ತಮ್ಮ ನಿರಪರಾಧಿತ್ವವನ್ನು ಸಾರಿಹೇಳಿದರು ಆದರೂ ಸರ್ವೋಚ್ಚ ನ್ಯಾಯಾಲಯದ ದಾಖಲೆಗಳು ಅವರು ಅಂದು ನ್ಯಾಯಾಲಯದಲ್ಲಿ ಹಾಜರಿದ್ದುದರ ಬಗ್ಗೆ ಯಾವುದೇ ದಾಖಲೆಯನ್ನೂ ಹೊಂದಿಲ್ಲ. ಆ ದಿನ ಸರ್ವೋಚ್ಚ ನ್ಯಾಯಾಲಯದ ವಿಶ್ವಾಸಾರ್ತೆಯು ಆಳಕ್ಕೆ ಕುಸಿದು ಹೋಯಿತು ಮತ್ತು ಅಲ್ಲಿಯವರೆಗೆ ನ್ಯಾಯಶಾಸ್ತ್ರಕ್ಕೆ ಪರಿಚಯವೇ ಇಲ್ಲದಿದ್ದ ಮುಚ್ಚಿದ ಲಕೋಟೆ ಪದ್ಧತಿಯ ಪ್ರಾರಂಭದೊಂದಿಗೆ ಅದು ಮತ್ತಷ್ಟು ಕುಸಿತವನ್ನು ಕಂಡಿತು. ಈಗ ಸರ್ಕಾರದ ಕಾನೂನು ಅಧಿಕಾರಿಗಳು ಎವಿಡೆನ್ಸ್ ಆ್ಯಕ್ಟ್‌ನ ಅಡಿಯಲ್ಲಿ ಸವಲತ್ತನ್ನು ಕೇಳದೆ ಮುಚ್ಚಿದ ಲಕೋಟೆಯನ್ನು ನ್ಯಾಯಾಲಯಕ್ಕೆ ನೀಡುವುದು ಮುಂದುವರಿದಿದೆ.( ಈ ಅಭ್ಯಾಸಕ್ಕೆ ವಕೀಲರ ವಿರೋಧತುದ್ದರೂ ಈಗಲೂ ಇದು ಮುಂದುವರಿದೇ ಇದೆ) ರೈಟ್‌ಗಳ ರಕ್ಷಾಕವಚವು ಈಗ ಹೊಳೆಯುತ್ತಿಲ್ಲ. ವ್ಯಕ್ತಿ ಸ್ವಾತಂತ್ರ್ಯವು ನಿರ್ಲಕ್ಷ್ಯಕ್ಕೊಳಗಾಗುತ್ತಿದೆ, ಸಾಂಪ್ರದಾಯಿಕವಾದ ಮತ್ತು ಬಹಳ ಮುಖ್ಯವೂ ಆದ ರಿಟ್ ಆಫ್ ಹೇಬಿಯಸ್ ಕಾರ್ಪಸ್, ನೀರೀಕ್ಷಣಾ ಜಾಮೀನು, ವಾಸ್ತವದಲ್ಲಿ ಜಾಮೀನು ಕೂಡ ಮರೆಯಾಗಿ ಬಂಧನ ಕೇಂದ್ರಗಳಲ್ಲಿರಿಸುವುದು, ಜಾಮೀನು ನಿರಾಕರಣೆ ಮತ್ತು ಮುನ್ನೆಚ್ಚರಿಕೆ ಬಂಧನಗಳಿಗೆ(preventive detention) ದಾರಿಮಾಡಿಕೊಡುತ್ತಿದೆ. ಇದು ಜವಾಬ್ದಾರಿಯ ಪರಿತ್ಯಾಗದಂತೆ ಕಾಣುತ್ತಿದೆ, ಅಥವಾ ಇತ್ತೀಚೆಗೆ ಪ್ರತಾಪ್ ಬಾನು ಮೆಹ್ತಾ ಅವರು ಬರೆದಂತೆ : "ಇತ್ತೀಚಿನ ದಿನಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ರಾಜಕೀಯ ಸ್ವಾತಂತ್ರ್ಯದ ಪರವಾಗಿ ನಿಂತು, ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವ, ಸುಳ್ಳಾಡುವ, ಮತ್ತು ಉತ್ಸಾಹದ ಕೊರತೆಯಂತಹ ನಡವಳಿಕೆಗಳ ಮೂಲಕ ನಮ್ಮನ್ನು ನಿರಾಶೆಗೊಳಿಸಿದೆ." ಇಂದು ತುರ್ತುಪರಿಸ್ಥಿತಿ ಕಾಲದ ಕುಖ್ಯಾತ (ಜೀವಿಸುವ ಹಕ್ಕು ಮೂಲಭೂತ ಹಕ್ಕಲ್ಲ ಎಂದು ಸಾರಿದ) ಎಡಿಎಂ ಜಬಲ್ಪುರ್ ಮೊಕದ್ದಮೆಯು ಪಿಸುದನಿಯಲ್ಲಿ ಪ್ರಸ್ತಾಪಿಸಲ್ಪಡುತ್ತಿರುವುದು ಆಶ್ಚರ್ಯದ ವಿಷಯವೇ– ಪಿಸುದನಿ ದೇಶದ್ರೋಹ ಅಥವಾ ಇನ್ನೂ ಹೆಚ್ಚು ಭೀಕರವಾದ ಮುನ್ನೆಚ್ಚರಿಕೆ ಬಂಧನಕ್ಕೆ ಗುರಿಯಾಗುವ ಭಯಕ್ಕೆ. ಇದರ ಉಪಯೋಗ ಪಡೆದು ತಿರುಪುಗಳನ್ನು ಬಿಗಿ ಮಾಡಿ ಸಿಂಹಾಸನದ ಕೆಳಗಿನ ಸಿಂಹಗಳನ್ನು ಬೋನೊಳಗೆ ತಳ್ಳಲಾಗುತ್ತಿದೆ. ಪತ್ರಿಕಾ ಗೋಷ್ಠಿಗಳ ಲಾಭಗಳು ಹಲವು ರೀತಿಯಲ್ಲಿ ಕಳೆದು ಹೋಗುತ್ತಿವೆ.

## ಎಲ್ಲವೂ ಕಳೆದು ಹೋಗಿಲ್ಲ: ಕಳೆದುಹೋಗುವ ಮುನ್ನ ಎದ್ದೇಳಬೇಕು!

ಆದರೆ ಎಲ್ಲವೂ ಕಳೆದು ಹೋಗಿಲ್ಲ – ಅಪರಾಧ ನ್ಯಾಯ ವಿತರಣಾ ವ್ಯವಸ್ಥೆಯು ಕುಸಿದಿದೆ ಅಥವಾ ತುಯ್ದಾಡುತ್ತಿದೆ, ಆದರೆ ನಾಗರೀಕ (Civil) ನ್ಯಾಯ ವ್ಯವಸ್ಥೆಯು ಜೀವಂತವಾಗಿದ್ದು ತಲೆಮಾರಿನಿಂದ ತಲೆಮಾರಿಗೆ.ಹೇಗೋ ತೆವಳುತ್ತಾ ಸಾಗಿದೆ. ಮಹಿಳೆಯರು ಮತ್ತು ಮಕ್ಕಳ ಮಾನವ ಹಕ್ಕುಗಳು ಕೇವಲ ಚರ್ಚೆಯ ಅಂಶಗಳಾಗಿ ಹಾಗೇ ಉಳಿದಿವೆ ಮತ್ತೇನೂ ಇಲ್ಲ. ಯಾರಿಗೆ ಬೇಕಾಗಿದೆ? ಈಗಲೂ ಒಂದು ದೃಢವಾದ ಇಚ್ಛಾಶಕ್ತಿಯು ನಮ್ಮ ನ್ಯಾಯಾಂಗವನ್ನು ಹುದುಲಿನಿಂದ ಹೊರ ತರಬಲ್ಲುದು. ಎಲ್ಲ ಮುಗಿದ ಮೇಲೇ ನಿದ್ರೆಯಿಂದ ಏಳುವ ರಿಪ್ ವ್ಯಾನ್ ವೆಂಕಲ್‌ತನವು ನ್ಯಾಯಾಂಗದ ಕಾರ್ಯವೈಖರಿ ಮತ್ತು ಸ್ವಾಯತ್ತತೆ ಮತ್ತು ಸಾರ್ವಜನಿಕ ನಂಬಿಕೆಯ ವಿಚಾರದಲ್ಲಿ ಒಂದು ದೊಡ್ಡ ಪ್ರಶ್ನಾರ್ಥಕ ಚಿಹ್ನೆಯನ್ನು ಉಳಿಸಿದೆ, ಆದರೂ ಪರಿಸ್ಥಿತಿ ಸುಧಾರಿಸಲಾರದ ಮಟ್ಟದಲ್ಲಿಲ್ಲ. ಒಬ್ಬ ಮನುಷ್ಯ ಕೆಲವು ಕ್ಷಣಗಳಲ್ಲಿ ಒಂದು ಸಂಸ್ಥೆಯನ್ನು ನಾಶ ಮಾಡಿಬಿಡಬಹುದು–ಸ್ಯಾಂಸನ್ ಮತ್ತು ಡೇಗನ್ ದೇವಾಲಯದ ಕಥೆಯನ್ನು (ಡೇಗನ್ ಫಿಲಸ್ಟೈನರ ದೇವರು. ಫಿಲಸ್ಟೈನರು ಬಂಧನದಲ್ಲಿರಿಸಿದ್ದ ಬಲಾಢ್ಯ ಸ್ಯಾಮ್ಸನ್ ಡೇಗನ್ ದೇವಾಲಯದ ಆಯಕಟ್ಟಿನ ಎರಡು ಕಂಬಗಳನ್ನು ಬೀಳಿಸಿದಾಗ ಇಡೀ ದೇವಾಲಯ ಕುಸಿದು ಸಹಸ್ರಾರು ಫಿಲಸ್ಟೈನರು ಹತರಾದರು ಎಂಬ ಕತೆ.) ನೆನಪಿಸಿಕೊಳ್ಳಿ. ಆದರೆ ಒಂದು ಸಂಸ್ಥೆಯನ್ನು ಕಟ್ಟಲು ಹಲವಾರು ಜನರಿಗೆ ಹಲವು ವರ್ಷಗಳೇ ಬೇಕಾಗುವುದು. ಸರ್ವೋಚ್ಚ ನ್ಯಾಯಾಲಯವನ್ನು ನಿರ್ಮಿಸಲು ಅವರು ಒಟ್ಟಾಗಿ ದುಡಿಯುವರೆ, ನ್ಯಾಯಾಂಗವು – ಕೊನೆಯ ಆಶ್ರಯತಾಣ – ಸಾರ್ವಜನಿಕರ ನಡುವೆ ಹೊಂದಿದ್ದ ನಂಬಿಕೆ ಮತ್ತು ವಿಶ್ವಾಸವನ್ನು ಮರಳಿಪಡೆಯುವುದೇ ಅಥವಾ...



**(ನ್ಯಾ. ಮದನ್ ಬಿ. ಲೋಕೂರ್ ಅವರು ನಮ್ಮ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರೂ, ಅದರ ಹಸಿರು ಪೀಠದ ಅಧ್ಯಕ್ಷರೂ ಆಗಿದ್ದವರು. ಈಗ ಫಿಜಿಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದಾರೆ.**

**(ಕೃಪೆ: *ಔಟ್‌ಲುಕ್*, ಜನವರಿ ೧೩, ೨೦೨೦)**


**ಗಾಂಧಿ ಕಥನ ಈಗ ಸುಲಭ ಬೆಲೆಯ ಆವೃತ್ತಿಯಲ್ಲಿ!**




ಡಿ.ಎಸ್, ನಾಗಭೂಷಣ ಅವರ ೭೦೦ಕ್ಕೂ ಹೆಚ್ಚು ಪುಟಗಳ ಈ ಪುಸ್ತಕ ಈಗ ನಾಡಿನಾದ್ಯಂತ ಓದುಗರ ಗಮನ ಸೆಳೆದಿದ್ದು, ಅದು ಇನ್ನೂ ಹೆಚ್ಚು ಓದುಗರಿಗೆ ತಲುಪಲೆಂದು ಪುಸ್ತಕದ ಪ್ರಕಾಶರಾದ ಎಂ. ಮೂನಿಸ್ವಾಮಿ ಅಂಡ್ ಸನ್ಸ್‌ನ ಎಂ.ಸಿ. ನರೇಂದ್ರ ಅವರು ರೂ. ೩೫೦/- ರ ಮುಖಬೆಲೆಯೊಂದಿಗೆ ಪರಿಷ್ಕೃತ ಮುದ್ರಣವನ್ನು ಹೊರತಂದಿದ್ದಾರೆ. ಬಿಡಿ ಪ್ರತಿಗಳು 'ಹೊಸ ಮನುಷ್ಯ' ಓದುಗರಿಗೆ ರಿಯಾಯ್ತಿ ದರದಲ್ಲಿ ಲಭ್ಯವಿದ್ದು ವಿವರಗಳಿಗಾಗಿ ಸಂಪರ್ಕಿಸಿ:**9481351079** :

ಕಥೆ

# ಮಲ್ಲಿಕಾ

–ಜಿ.ಪಿ. ಬಸವರಾಜು


ಚಿತ್ರ: ಗುಜ್ಜಾರಪ್ಪ

**ಗು**ರುಪಾದಪ್ಪ ಹಾಸಿಗೆಯ ಮೇಲೆ ಮಲಗಿಕೊಂಡೇ ನೋಡಿದರು. ಮೊಮ್ಮಗ ಮಹದೇವ ಒಂದು ಬುಟ್ಟಿಯನ್ನು ಹೊತ್ತು ತಂದದ್ದು ಅವರಿಗೆ ಸ್ಪಷ್ಟವಾಗಿ ಕಾಣಿಸಿತು. 'ಏನೋ ಅದು ಮಾದೇವ' ಎಂದರು. ಮಾದೇವ ಬುಟ್ಟಿಯನ್ನು ಅಜ್ಜನ ಬಳಿಗೆ ತಂದು ಇಳಿಸಿದ. 'ಅಪ್ಪ ಕೊಟ್ಟು. ಮಾವಿನಣ್ಣು' ಎಂದು ಉಸಿರೆಳೆದುಕೊಂಡ. ಒಳಗಿದ್ದ ಸೊಸೆ ಪುಟ್ಟವ್ವ ಹೊರಗೆ ಬಂದಳು. ಮಾವನ ಹಾಸಿಗೆಯ ಬಳಿ ಬಂದವಳೇ ಮಗ ಇಳಿಸಿದ ಬುಟ್ಟಿಯನ್ನು ಬಿಚ್ಚಿದಳು. ಅದರೊಳಗೆ ಬಂಗಾರ ಬಣ್ಣದ ಮಾವಿನ ಹಣ್ಣುಗಳು ಕಣ್ಣು ಕುಕ್ಕುತ್ತಿದ್ದವು. ತಾಯಿ ಮಗನ ಕಣ್ಣುಗಳು ಅರಳಿದವು. ಗುರುಪಾದಪ್ಪ ಮಲಗಿದ್ದವರು ಕಣ್ಣನ್ನು ಅತ್ತ ಹೊರಳಿಸಲು ನೋಡಿದರು. ಅವರ ಮಂಚದಿಂದ ಬುಟ್ಟಿ ಕೆಳಗಿತ್ತು. ಹೀಗಾಗಿ ಬುಟ್ಟಿಯಲ್ಲಿದ್ದ ಹಣ್ಣುಗಳು ಅವರ ಕಣ್ಣಿಗೆ ಬೀಳಲಿಲ್ಲ. ಇದನ್ನು ಅರಿತಂತೆ ಪುಟ್ಟವ್ವ ಬುಟ್ಟಿಗೆ ಕೈಹಾಕಿ ಎರಡು ಹಣ್ಣುಗಳನ್ನು ಎತ್ತಿಕೊಂಡು ಮಾವನ ಮುಖದ ಮುಂದೆ ಹಿಡಿದಳು. ಗುರುಪಾದಪ್ಪನವರ ಕಣ್ಣುಗಳು ನಕ್ಕವು. ಆನಂದದ ತೆರೆಗಳು ಅವರ ಮೈಯುದ್ದ ಹರಿದಾಡಿದವು. 'ಯಾವ ಮರುದ್ದೊ ಇದು' ಎಂದು ಕೇಳಿದರು. ಹುಡುಗ 'ನಂಗೊತ್ತಿಲ್ಲಜ್ಜೊ' ಎಂದ.

'ಮಾವ, ತಿಂತೀರಾ ಕೂದುಕೊಡ್ಲಾ' ಎಂದು ರಾಗ ಎಳೆದಳು ಪುಟ್ಟವ್ವ. ಗುರುಪಾದಪ್ಪ 'ಇಲ್ಲಿ ಕೊಡವ್ವ' ಎಂದು ಕೈಚಾಚಿದರು. ಪುಟ್ಟವ್ವ ಅವರ ಕೈಗಳಲ್ಲಿ ಒಂದು ಹಣ್ಣನ್ನು ಇಟ್ಟಳು. ಅವರು ಅದನ್ನೇ ಪ್ರೀತಿಯಿಂದ ನೋಡಿದರು. ಅದು ಮಲ್ಲಿಕಾ; ಅವರ ಪ್ರೀತಿಯ ಹಣ್ಣು. ತಮ್ಮ ತೋಪಿನದೇ. ಮೂಲೆಮರದ್ದು ಇರಬೇಕು. ಮಗ ಶಿವಪ್ಪನಿಗೆ ಗೊತ್ತು. ಹೀಗಾಗಿಯೇ ಅವನು ಬುಟ್ಟಿ ತುಂಬಾ ತಂದಿದ್ದಾನೆ ಎಂದು ಬೀಗಿದರು. ಮಗನ ಬಗ್ಗೆ ಅಭಿಮಾನ ಉಕ್ಕಿತು. 'ಮಾವ, ಕೂದುಕೊಡ್ಲಾ?' ಎಂದು ಪುಟ್ಟಮ್ಮ ಇನ್ನೊಮ್ಮೆ ಗಟ್ಟಿಯಾಗಿ ಕೇಳಿದಳು. ಗುರುಪಾದಪ್ಪನವರ ಕಿವಿಯೇನೂ ಕಿವುಡ ಆಗಿರಲಿಲ್ಲ. ಆದರೆ ಸೊಸೆ ಅಭ್ಯಾಸಬಲದಿಂದ ಹಾಗೆ ಕೇಳಿದಳು. 'ಇನ್ನೂ ಒಟತ್ತು ಓಗ್ಲಿ ತಡೆಯವ್ವ' ಎಂದರು ಗುರುಪಾದಪ್ಪ. ಅವರ ಕೈಯಲ್ಲಿದ್ದ ಮಲ್ಲಿಕಾ ಹಾಗೆಯೇ ಇತ್ತು.

ಪುಟ್ಟವ್ವ ಅಡಿಗೆ ಮನೆಗೆ ಹೋದಳು. ಮಗ ಬುಟ್ಟಿಯನ್ನು ಮಂಚದ ಕೆಳಗೇ ಬಿಟ್ಟು ಹೋದ. ಅವನಿಗೆ ಕೂಡಲೇ ಹಣ್ಣು ತಿನ್ನುವ ಆಸೆಯಿತ್ತು. ಆದರೆ ಅಜ್ಜ ಈಗಲೇ ಬೇಡ ಎಂದ ಮೇಲೆ ತಿನ್ನುವುದೆಂಗೆ ಎಂದು ಹೊರಟ. ಗುರುಪಾದಪ್ಪ ತಮ್ಮ ಎದೆಯ ಮೇಲೆ ಹಣ್ಣನ್ನು ಇಟ್ಟುಕೊಂಡು ನವಿರಾಗಿ ನೇವರಿಸಿದರು. ಅದರ ಬಣ್ಣ ಮತ್ತೊಮ್ಮೆ ಅವರ ಕಣ್ಣು ಕುಕ್ಕಿ, ಹಳೆಯ ನೆನಪುಗಳನ್ನು ಜಗ್ಗಿತು.

ಸುಗ್ಗಿಯ ಕೊನೆಗೆ ಬರುವ ಹಣ್ಣೇ ಮಲ್ಲಿಕಾ. ತಾವು ಮಂತ್ರಿಯಾಗಿದ್ದಾಗ ತಮ್ಮ ರಾಜ್ಯಕ್ಕೆ ಅದೇ ತಾನೇ ಈ ಹಣ್ಣು ಬಂದಿತ್ತು. 'ಇದು ಆಂಧ್ರದ ಹಣ್ಣು, ಬಹಳ ರುಚಿಯಾಗಿದೆ, ತಿಂದುನೋಡಿ' ಎಂದು ಕೆಲವರು ತಂದುಕೊಟ್ಟಿದ್ದರು. ಗುರುಪಾದಪ್ಪ ಹಾಗೆಲ್ಲ ಯಾರೋ ಕೊಟ್ಟ ಹಣ್ಣನ್ನು ತಿಂದು ನೋಡುವವರಲ್ಲ. ಆ ಹಣ್ಣು, ಬೆಲೆ ಎಲ್ಲ ವಿಚಾರಿಸಿ ಕಾಸನ್ನು ಮಡಗಿ ಒಂದು ಕೆ.ಜಿ. ಹಣ್ಣನ್ನು ಕೊಂಡಿದ್ದರು. ಹಣ್ಣನ್ನು ತಂದವರು ಕಾಸನ್ನು ತೆಗೆದುಕೊಳ್ಳಲು ಸಂಕೋಚಪಟ್ಟುಕೊಂಡಾಗ ಗುರುಪಾದಪ್ಪ ಗಡುಸಿನಲ್ಲಿಯೇ ಹೇಳಿದ್ದರು: 'ಕಾಸು ಬೇಡ ಅಂದ್ರೆ ನನಗೆ ಹಣ್ಣೂ ಬೇಡ.' ಮರುಮಾತಿಲ್ಲದೆ ಕಾಸನ್ನು ಪಡೆದುಹೋಗಿದ್ದ ಅವನು.

> ಗುರುಪಾದಪ್ಪನವರ ಮುಖದ ಮೇಲೆ ಒಂದು ಬಗೆಯ ಸಂತೃಪ್ತಿಯ ಭಾವ ಮೂಡಿ ಮರೆಯಾಯಿತು. ಅವರು ಮತ್ತೆ ತಮ್ಮ ಕೈಯಲ್ಲಿದ್ದ ಮಾವಿನ ಹಣ್ಣನ್ನು ಮೃದುವಾಗಿ ನೇವರಿಸಿ ಸುಹಿಸಿದರು. ಈ ಮಾವಿನ ಬೆಳೆಯೇ ಅಲ್ಲವೇ ತಮ್ಮ ಬದುಕಿಗೊಂದು ಹೊಸ ತಿರುವನ್ನು ನೀಡಿದ್ದು ಎಂದು ಅದನ್ನೆಲ್ಲ ಮತ್ತೆ ಮೆಲುಕು ಹಾಕತೊಡಗಿದರು... ಗುರುಪಾದಪ್ಪನವರು ಜಮೀನಿಗೆ ಬಂದದ್ದು ಜನರ ಕಾಟದಿಂದ ತಪ್ಪಿಸಿಕೊಳ್ಳಲು, ಅಜ್ಞಾತವಾಗಿರಲು ಎಂಬುದು ನಿಜವಾದರೂ, ನಾಲ್ಕಾರು ದಿನ ಕಳೆಯುತ್ತಿದ್ದಂತೆಯೇ ಅವರಲ್ಲಿ ಹೊಸ ಚೈತನ್ಯ ಮೂಡತೊಡಗಿತು. ಸಂಜೆ ಮತ್ತು ಬೆಳಗಿನ ಹೊತ್ತುಗಳಲ್ಲಿ ಅವರು ಜಮೀನಿನ ಉದ್ದಗಲಕ್ಕೂ ಒಂಟಿಯಾಗಿ ತಿರುಗಾಡುವಾಗ ಜಗತ್ತು ಹೊಸದಾಗಿಯೇ ಕಾಣಿಸತೊಡಗಿತು. ಸಂಜೆಯ ಹೊಂಬಣ್ಣದಲ್ಲಿ ಮಿಂದಂತೆ ಹಕ್ಕಿಗಳು ಬಾನಿನಲ್ಲಿ ಚಿತ್ತಾರ ಬರೆಯುತ್ತ ಹೋಗುವುದನ್ನು ನೋಡುತ್ತ ಅವರು ಮೈಮರೆಯುತ್ತಿದ್ದರು. ಸುತ್ತ ಗುಡ್ಡಸಾಲು, ಹೊಲಗದ್ದೆಗಳ ಹಸಿರು, ದನಕರುಗಳು, ನಿರಾತಂಕವಾಗಿ ಸಾಗುತ್ತಿರುವಂತೆ ಕಾಣುವ ಜಗತ್ತು. ತಾನೇಕೆ ಇಷ್ಟುದಿನ ಈ ಸೊಬಗಿನಿಂದ ವಂಚಿತನಾದೆ ಎಂದು ಚಿಂತಿಸುತ್ತ, ಬೀಸಿಬರುವ ತಂಗಾಳಿಗೆ ಮೈಕೊಟ್ಟು ಸುಹಿಸುತ್ತ ಎಷ್ಟೋ ಹೊತ್ತು ಸುತ್ತುತ್ತಿದ್ದರು

ಈ ಹಣ್ಣಿನ ರುಚಿ, ಬಣ್ಣ ಅದ್ಭುತ. ಗುರುಪಾದಪ್ಪನವರು ಪ್ರತಿ ಮಾವಿನ ಸುಗ್ಗಿಯಲ್ಲಿಯೂ ಮಲ್ಲಿಕಾಗೆ ಕಾಯುತ್ತಿದ್ದರು. ಒಂದೆರಡು ಬುಟ್ಟಿಯನ್ನು ಕೊಂಡುತಂದು ಮನೆಯಲ್ಲಿಡುತ್ತಿದ್ದರು. ಮಲ್ಲಿಕಾ ಮನೆಯಲ್ಲಿ ಸಂಭ್ರಮದ ಅಲೆಯನ್ನೇ ಎಬ್ಬಿಸುತ್ತಿತ್ತು. ಮಕ್ಕಳು, ಮೊಮ್ಮಕ್ಕಳು, ಬಂಧುಗಳು, ಆಪ್ತರು ಎಲ್ಲರಿಗೂ ಮಲ್ಲಿಕಾ ರುಚಿ ಗೊತ್ತು. ಹಣ್ಣನ್ನು ತೃಪ್ತಿಯಾಗುವವರೆಗೆ ತಿನ್ನುವ ನಿಯಮವನ್ನು ಗುರುಪಾದಪ್ಪ ಅನೇಕ ವರ್ಷಗಳಿಂದ ನಡೆಸಿಕೊಂಡು ಬಂದಿದ್ದರು. ಹಣ್ಣು ತಿಂದವರೆಲ್ಲ ಮನಸಾರೆ ಹೊಗಳಿ ಹೋಗುತ್ತಿದ್ದರು. ಹಳ್ಳಿಯವರಾದರೆ, 'ನೂರ್ಕಾಲ ಬಾಳಪ್ಪ' ಎಂದು ಹರಸುತ್ತಿದ್ದರು. ತಮ್ಮ ಹೊಲದಲ್ಲಿಯೇ ಮಾವಿನ ಗಿಡಗಳನ್ನು ನೆಟ್ಟು ಬೆಳೆದ ಮೇಲೆ ಮಾವಿನ ಹಣ್ಣನ್ನು ಕೊಂಡುತರುವ ಮಾತೇ ಇರಲಿಲ್ಲ. ಮಾವಿನಸುಗ್ಗಿ ಬಂತೆಂದರೆ ಮುಗಿಯಿತು. ತಿಂದುತಿಂದು ದಣಿಯಬೇಕು.

ಅದನ್ನೆಲ್ಲ ನೆನೆಯುವಾಗ, ಆ ನಗೆ ಅಲೆಗಳ ಹಿಂದೆಯೇ ಒಂದು ವಿಷಾದದ ನೆರಳೂ ಹಾದು ಹೋಯಿತು. ಗುರುಪಾದಪ್ಪ ಮೌನವಾದರು; ಅವರ ಒಳಗನ್ನೆಲ್ಲ ಕೆದಕುವ ಮೌನ ಅದು. ಯಾತನೆಯನ್ನು ಅನುಭವಿಸಿದವರಂತೆ ಗುರುಪಾದಪ್ಪ ಮೌನವನ್ನು ಮುರಿದು, 'ಏನಾಗಿ ಓಯ್ತಲ್ಲ' ಎಂದು ಸಣ್ಣಗೆ ಮರುಗಿದರು.

ಅವತ್ತು 'ಮಲ್ಲಿಕಾ ಮೇಳ'ವನ್ನು ಉದ್ಘಾಟಿಸುವುದಕ್ಕೆಂದೇ ಅವರು ಲಾಲ್‌ಬಾಗಿಗೆ ಹೋಗಿದ್ದರು. ರಾಶಿರಾಶಿ ಮಾವಿನ ಹಣ್ಣು. ಬಂಗಾರ ಸುರಿದಂಥ ಬಣ್ಣ. ಮುಗಿಬಿದ್ದ ಜನ. ತಾವು ಉದ್ಘಾಟಿಸಿದ ಮೇಲೆಯೇ ಮಾರಾಟ. ಅದಕ್ಕಾಗಿಯೇ ಜನ ಕಾಯುತ್ತಿದ್ದಾರೆ. ಗುರುಪಾದಪ್ಪ ಸಂಭ್ರಮದಲ್ಲಿ ಮೈಮರೆತು ರಾಶಿರಾಶಿ ಹಣ್ಣನ್ನು ಮತ್ತೆ ಮತ್ತೆ ನೋಡಿದರು. ಮೈದುಂಬಿದವರಂತೆ ರಾಶಿಯ ಮುಂದೆ ಓಡಾಡಿದರು. ಕೊನೆಗೆ ಟೇಪನ್ನು ಕತ್ತರಿಸಿ ಹಣ್ಣು ಕೊಳ್ಳುವವರಿಗೆ ಅನುವು ಮಾಡಿಕೊಟ್ಟರು. ಟೇಬಲ್ಲಿನ ಮೇಲೆ ಹೆಚ್ಚಿಟ್ಟಿದ್ದ ಹಣ್ಣಿನ ಒಂದು ಚೂರನ್ನು ಬಾಯಿಗೆ ಹಾಕಿಕೊಂಡು, ಉಳಿದದ್ದನ್ನು ಜನರಿಗೆ ಹಂಚಲು ಹೇಳಿದರು. ಮಲ್ಲಿಕಾ ಕಂಪು, ಅದರ ಸವಿ ಮೈಮನಗಳನ್ನು ಆವರಿಸಿ, ಮುಕ್ತವಾಗಿ ಹಣ್ಣನ್ನು ಶ್ಲಾಘಿಸಿ, ನಮ್ಮ ರಾಜ್ಯದಲ್ಲಿ ಈ ಬೆಳೆ ಆರಂಭವಾಗಿದೆ. ಇನ್ನೂ ಸಮೃದ್ಧವಾಗಬೇಕು. ಮಲ್ಲಿಕಾ ಇರಲಿ, ಇನ್ಯಾವುದೇ ತಳಿ ಇರಲಿ, ಮಾವು ಬೆಳೆಯುವವರನ್ನು ಸರ್ಕಾರ ಪ್ರೋತ್ಸಾಹಿಸುತ್ತದೆ. ಅದಕ್ಕಾಗಿ ವಿಶೇಷ ಯೋಜನೆಗಳನ್ನು ಸದ್ಯದಲ್ಲಿಯೇ ಪ್ರಕಟಿಸುವುದಾಗಿ ಹೇಳಿದರು. ಬೆಳೆಗಾರರು ಮತ್ತು ಕೊಳ್ಳುವವರು ಗುರುಪಾದಪ್ಪನವರ ನಿಲುವನ್ನು ಮೆಚ್ಚಿ ಮತ್ತೆಮತ್ತೆ ಚಪ್ಪಾಳೆ ಹೊಡೆದರು. ಗುರುಪಾದಪ್ಪ ತೃಪ್ತಿಯಿಂದ ತಮ್ಮ ಮಾತುಗಳನ್ನು ಮುಂದುವರಿಸಿದರು.

ಗುರುಪಾದಪ್ಪನವರು ಕಾರನ್ನು ಹತ್ತಿ ಹೊರಡಬೇಕು. ಮೇಳದ ವ್ಯವಸ್ಥಾಪಕರೊಬ್ಬರು ಎರಡು ಹಣ್ಣಿನ ಬುಟ್ಟಿಗಳನ್ನು ಹೊರಿಸಿಕೊಂಡು ಬಂದರು. ಡ್ರೈವರ್ ಕಾರಿನ ಡಿಕ್ಕಿಯನ್ನು ತೆಗೆಯಬೇಕೆಂದು ಇಳಿದ. ಗುರುಪಾದಪ್ಪ ತಡೆದರು. 'ಅದೆಲ್ಲ ಸರಿಯಲ್ಲ. ನೀನು ಹೊರಡೋ' ಎಂದರು. ವ್ಯವಸ್ಥಾಪಕ ಕೈಮುಗಿದು 'ಪ್ರೀತಿಯಿಂದ ಕೊಡುತ್ತಿರುವುದು, ಬೇಡ ಎನ್ನಬಾರದು' ಎಂದ. 'ನೀವು ಪ್ರೀತಿಯಿಂದ ಕೊಟ್ಟ ಒಂದು ಹೋಳನ್ನು ತಿಂದಿದ್ದೇನೆ. ಅಲ್ಲಿಗೆ ಮುಗಿಯಿತು. ಉಳಿದದ್ದು ದುಡ್ಡಿನ ವ್ಯವಹಾರ' ಎಂದರು. ಡ್ರೈವರ್ ಹೊರಟ. ಅದು ಅಲ್ಲಿಗೆ ಮುಗಿಯಿತೆಂದು ತಿಳಿದಿದ್ದರು ಗುರುಪಾದಪ್ಪ.

ತಾವು ನಡೆದು ಬಂದದ್ದೇ ಹಾಗೆ. ಅಪ್ಪ ಅದನ್ನು ಬಾಲ್ಯದಿಂದಲೇ ಕಲಿಸಿದ್ದರು.

'ಕಂಡವರ ಗಂಟಿಗೆ ಕೈಹಾಕಬಾರದು ಕಣೊ' ಎಂದು ಹೇಳುತ್ತಿದ್ದುದು ಗುರುಪಾದಪ್ಪನವರ ಎದೆಯಲ್ಲಿ ಉಳಿದುಬಿಟ್ಟಿತ್ತು. ಮುಂದೆಯೂ ಹಾಗೆಯೇ. ಸ್ವಾತಂತ್ರ್ಯ ಹೋರಾಟ. ಅದರಲ್ಲಿ ತಾವು ಭಾಗವಹಿಸಿದ್ದು, ಜೈಲು ಕಂಡದ್ದು, ಗಾಂಧೀಜಿಯವರ ಹಾದಿಯಲ್ಲಿ ನಡೆದದ್ದು, ಸತ್ಯ ಎನ್ನುವುದು ತಮ್ಮ ಬದುಕಿನ ಶಕ್ತಿಯಾದದ್ದು... ಗುರುಪಾದಪ್ಪನವರ ಒಳಗಣ್ಣಿನ ಮುಂದೆ ಒಮ್ಮೆ ಗಾಂಧಿ ಹಾದುಹೋದರು. ಭಕ್ತಿಯಿಂದ ತಲೆಬಾಗಿದರು ಗುರುಪಾದಪ್ಪ.

ಗುರುಪಾದಪ್ಪನವರಿಗೆ ಸಚಿವ ಪದವಿ ಸಿಕ್ಕಿದ್ದೂ ಅವರ ನಡೆಯಿಂದ; ಗಾಂಧಿತತ್ವಗಳ ಅನುಯಾಯಿಯೆಂದು ಜನ ಗೌರವಿಸಿದ್ದರಿಂದ. ಸ್ವತಃ ಮುಖ್ಯಮಂತ್ರಿಗಳಿಗೆ, ಸಚಿವಸಂಪುಟದ ಇತರರಿಗೆ ಎಲ್ಲರಿಗೂ ತಮ್ಮ ಬಗ್ಗೆ ಇದೇ ಭಾವನೆ ಇತ್ತಲ್ಲ. ತಾನೂ ಹಾಗೆಯೇ ನಡೆದುಕೊಂಡೆನಲ್ಲಾ. ಸತ್ಯಕ್ಕೂ ಎಲ್ಲೂ ಅಪಚಾರವಾಗದಂತೆ, ಕೈಬಾಯಿ ಶುದ್ಧವಾಗಿಟ್ಟುಕೊಂಡು. ಯಾರೂ ಬೆರಳೆತ್ತಿ ತೋರಿಸುವಂತಿರಲಿಲ್ಲ. ಸರಳತೆಯಲ್ಲಿಯೂ ಹಾಗೆಯೇ. ಖಾದಿ ಉಡುಗೆಯನ್ನು ಬಿಟ್ಟು ಬೇರೆಯದಕ್ಕೆ ಜೀವ ತುಡಿಯಲಿಲ್ಲ. ಸರ್ಕಾರದ ಕೆಲಸಕ್ಕೆ ಸರ್ಕಾರಿ ಕಾರು. ಉಳಿದಂತೆ ಅದನ್ನು ಬಳಸಿದ್ದೇ ಇಲ್ಲ. ತೀರಿಹೋದ ಹೆಂಡತಿಯಾದರೂ ಎಂದೂ ಹೆಚ್ಚಿನದಕ್ಕೆ ಆಸೆಪಡಲಿಲ್ಲ. ತನ್ನ ಜೊತೆಯಲ್ಲಿ ಓಡಾಡಬೇಕು, ಮೆರೆಯಬೇಕು, ಸೀರೆ, ಒಡವೆಗಳು ಬೇಕು ಎಂದು ಕೇಳಿದ್ದೇ ಇಲ್ಲ. ಇದ್ದುದರಲ್ಲೇ ಸಂಸಾರ. ಬರುವವರು ಹೋಗುವವರು. ಎಲ್ಲಿಯೂ ತನ್ನ ತತ್ವಗಳಿಗೆ ಧಕ್ಕೆಯಾಗಲಿಲ್ಲ. ಸಂಸಾರ ಬೆಳೆದ ಮೇಲೂ ಅದು ಹಾಗೆಯೇ ನಡೆದುಕೊಂಡು ಹೋಯಿತು. ಊರು, ಹೊಲ, ಮನೆ, ಉತ್ಪತ್ತಿ ಎಲ್ಲವೂ ಎಲ್ಲರಿಗೂ ಕಾಣುವಂಥದ್ದು. ತಾನೇನೂ ಮುಚ್ಚಿಡಲಿಲ್ಲ. ತೆರೆದ ಪುಸ್ತಕ.

ಲೆಕ್ಕವೂ ಹಾಗೆಯೇ. ಸ್ವತಃ ಗುರುಪಾದಪ್ಪನವರೇ ಎಲ್ಲವನ್ನೂ ಬರೆದಿಡುತ್ತಿದ್ದರು. ದಿನದ ಖರ್ಚುವೆಚ್ಚ, ಬಂದದ್ದು ಹೋದದ್ದು. ತಮ್ಮ ಆದಾಯ ಇಷ್ಟು; ಇದರೊಳಗೇ ಎಲ್ಲ ನಿಭಾಯಿಸಬೇಕೆಂದು ಹೇಳುತ್ತಿದ್ದರು. ಅದರಂತೆಯೇ ಸಂಸಾರ ನಡೆಯುತ್ತಿತ್ತು. ಆ ಗೆರೆಯನ್ನು ಮೀರಿರಲೇ ಇಲ್ಲ. ಅದನ್ನು ಮೀರುವವರೂ ಇರಲಿಲ್ಲ. ಸಂಸಾರ ಅಷ್ಟು ಅಚ್ಚುಕಟ್ಟು.

ಗುರುಪಾದಪ್ಪ ತಮ್ಮೆಲ್ಲ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಸಚಿವರಾದ ಮೇಲೂ ಅದು ತಪ್ಪಿರಲಿಲ್ಲ. ಸರ್ಕಾರ ಕೊಟ್ಟ ದೊಡ್ಡ ಮನೆಗೇನೋ ಹೋಗಿದ್ದರು. ಸರ್ಕಾರ ನೇಮಿಸಿದ್ದ ಆಳುಕಾಳುಗಳೂ ಬಂದಿದ್ದರು. ಆದರೆ ಯಾವುದೂ ಮೇರೆಯನ್ನು ದಾಟಿರಲಿಲ್ಲ. 'ಬಿಡಿ ಸಾರ್, ನಾವು ಮಾಡುತ್ತೇವೆ' ಎಂದು ಆಳುಗಳು ಬಂದರೆ ಗುರುಪಾದಪ್ಪ ಅದನ್ನೆಲ್ಲ ಕೇಳುತ್ತಿರಲಿಲ್ಲ. ಆಫೀಸಿನಲ್ಲಿ ಮಾತ್ರ ಕಾರ್ಯದರ್ಶಿ, ಆಪ್ತಕಾರ್ಯದರ್ಶಿ, ಸಿಬ್ಬಂದಿವರ್ಗ, ಸಚಿವ ಸ್ಥಾನದ ಕೆಲಸಕಾರ್ಯಗಳು. ಎಲ್ಲಿಯೂ ತಾವು ನಂಬಿದ ತತ್ವಕ್ಕೆ ಅಪಚಾರವಾಗಲಿಲ್ಲ.

'ಈಗ ತಂದುಕೊಡ್ಲಾ ಮಾವ' ಎಂದು ಸೊಸೆ ಬಂದಳು. ಮಾವ ಮಾವಿನ ಹಣ್ಣನ್ನು ಕೈಯಲ್ಲಿ ಹಿಡಿದು ಏನನ್ನೋ ಧ್ಯಾನಿಸುವಂತೆ ಇದ್ದುದನ್ನು ನೋಡಿದಳು. ನಿದ್ದೆಗಿದ್ದೆ ಹೋದರಾ ಎಂದು ಯೋಚಿಸಿದಳು. ಗುರುಪಾದಪ್ಪನವರಿಗೂ ಅವಳು ಬಂದದ್ದು, ನಿಂತದ್ದು ಗಮನಕ್ಕೆ ಬಂದಂತೆ ತೋರಲಿಲ್ಲ. 'ನಾನ್ಯಾಕೆ ಅವರ ನಿದ್ದೆಯನ್ನು ಕೆಡಿಸುವುದು' ಎಂದು ಬಂದಂತೆಯೇ ಹೊರಟು ಹೋದಳು. ಮಾವ ಆರೋಗ್ಯವಾಗಿದ್ದಿದ್ದರೆ ಮಾವಿನ ಸುಗ್ಗಿ ಎಂದರೆ ಅವರನ್ನು ಹಿಡಿಯುವವರು ಯಾರಿದ್ದರು? ದಿನದಿನವೂ ಹಬ್ಬ. ಬರುವವರು ಹೋಗುವವರು. ಮಾವಿನ ಮರದ ಹತ್ತಿರ ಹೋಗಿ ತೋರಿಸುವುದು. ಅದರ ಇಳುವರಿ, ರುಚಿ, ಬಣ್ಣ ಎಲ್ಲವನ್ನು ಹೇಳಿದ್ದೇ ಹೇಳಿದ್ದು. ಬಂದವರಿಗೆ ಹಣ್ಣನ್ನು ತಿನ್ನಿಸುವುದು, ಬುಟ್ಟಿ ಬುಟ್ಟಿ ತುಂಬಿ ಕಳಿಸುವುದು. ಅದೆಂತಹ ಸಡಗರ ಈ ಮಾವಂದು. ಕೈಯೂ ದಾರಾಳ. ಹಣ್ಣೂ ಮನೆತುಂಬ... ಮಾವ ಬಾಳ ದೊಡ್ಡೋರು' ಎಂದುಕೊಳ್ಳುತ್ತ ಪುಟ್ಟಮ್ಮ ಬಂದ ಹಂಗೇ ಹೊರಟು ಹೋದಳು.

ಎಲ್ಲಿ, ಹೇಗೆ, ಏನು ತಪ್ಪಾಯಿತು? ಗುರುಪಾದಪ್ಪನವರ ಚಿಂತನೆ ನಡೆದಿತ್ತು. ಯಾವುದೂ ಸ್ಪಷ್ಟವಾಗಲಿಲ್ಲ. ಮಾವಿನ ಮೇಳ ಉದ್ಘಾಟಿಸಿ ಒಂದು ವಾರಕ್ಕೆ ಆ ಪತ್ರಿಕೆ ದೊಡ್ಡದಾಗಿ ಬರೆದಿತ್ತು, ಮುಖಪುಟದಲ್ಲಿಯೇ. 'ಗಾಂಧೀವಾದಿ ಗುರುಪಾದಪ್ಪನಿಂದ ಗೋಲ್‌ಮಾಲ್'. ಜೊತೆಗೆ ತಾವು ಮೇಳ ಉದ್ಘಾಟಿಸಿದ ದೊಡ್ಡ ಚಿತ್ರ. ಮೇಳ ಉದ್ಘಾಟಿಸಲು ಬಂದಿದ್ದ ತೋಟಗಾರಿಕೆ ಸಚಿವ ಗುರುಪಾದಪ್ಪ ರೈತರಿಗೆ ಬರೆ ಎಳೆದು ನೂರು ಬುಟ್ಟಿ ಮಲ್ಲಿಕಾ ಹಣ್ಣನ್ನು ಕಬಳಿಸಿದರು. ಉಚಿತವಾಗಿ ದೊರೆತ ನೂರು ಬುಟ್ಟಿ ಹಣ್ಣಿನ ಕನಿಷ್ಠ ಬೆಲೆ ರೂ ೬೦,೦೦೦/–'

ಗುರುಪಾದಪ್ಪ ಸುದ್ದಿ ಓದಿ ಅಪ್ರತಿಭರಾದರು. ಕುಸಿದರು. ಅವರಿಗೆ ಯಾವುದೂ ಅರ್ಥವಾಗಲಿಲ್ಲ. ಕಣ್ಣು ಕತ್ತಲೆ ಬಂದಂತಾಗಿ ಎಷ್ಟೋ ಹೊತ್ತು ಹಾಗೆಯೇ ಇದ್ದರು. ನಿಧಾನಕ್ಕೆ ಸಾವರಿಸಿಕೊಂಡು ಎದ್ದವರು ತಮ್ಮ ದಿನಚರಿ ಪುಸ್ತಕವನ್ನು ತೆಗೆದರು. ಒಂದು ವಾರದ ಜಮಾ ಖರ್ಚಿನ ಲೆಕ್ಕ ನೋಡಿದರು. ಎಲ್ಲವನ್ನೂ ಬರೆದಿಟ್ಟಿದ್ದರು. ಅದರಲ್ಲಿ ಮಾವಿನ ಹಣ್ಣು ತಂದ ದಾಖಲೆಯೇ ಇರಲಿಲ್ಲ. ತಮಗೆ ಸ್ಪಷ್ಟವಾಗಿ ನೆನಪಿತ್ತು. ಒಂದು ಹಣ್ಣನ್ನೂ ಅವತ್ತು ಮನೆಗೆ ತಂದಿರಲಿಲ್ಲ. ಅಲ್ಲಿಂದ ಬಂದವರೇ ಮೈಸೂರಿನ ಇನ್ನೊಂದು ಸಮಾರಂಭಕ್ಕೆ ಹೋಗಿದ್ದರು. ಮನೆಗೆ ಮಾವಿನ ಹಣ್ಣೇನಾದರೂ ಬಂದಿತ್ತಾ, ಬಂದಿದ್ದರೆ ಮಗ ಎಲ್ಲವನ್ನೂ ಹೇಳುತ್ತಿದ್ದ. ಅವನೂ ತನ್ನಂತೆಯೇ ನಿಯತ್ತಿನವನು. ಹಣ್ಣು ತಂದರೆ ಅದಕ್ಕೆ ಕಾಸು ಕೊಟ್ಟೇ ಇರುತ್ತಾನೆ. ಹೆಂಡತಿಯಾದರೂ ಅದಕ್ಕೆಲ್ಲ ಆಸೆ ಪಡುವವಳಲ್ಲ. ಹೀಗಿರುವಾಗ ಏನು ನಡೆದಿರಬಹುದು? ಮಗನನ್ನು ಕರೆದು ಕೇಳಿದರು. 'ಹೌದು ಬಂದಿತ್ತು. ನಾಲ್ಕು ಬುಟ್ಟಿ ಹಣ್ಣು.'

'ಕಾಸು ಕೊಟ್ಟಿದ್ದೆಯಾ?'

'ಕಾಸು ಕೊಡಲು ಹೋಗಿದ್ದೆ. ಸುಬ್ರಮ್ಮಣ್ಯ ಬೇಡ ಅಂದಿದ್ದ. ಸಾಯೆಬ್ರ ಜೊತೆ ಮಾತಾಡ್ತೀನಿ ಅಂದಿದ್ದ. ನಾನು ನಿಮಗೆಲ್ಲ ಗೊತ್ತು ಅಂತ ಸುಮ್ನಾಗಿದ್ದೆ. ನೀವು ವಾಪಸ್ಸು ಬಂದಾಗ ಹೇಳುವುದು ಮರೆತುಬಿಟ್ಟೆ' ಅಂದಿದ್ದ ಮಗ.

ಗುರುಪಾದಪ್ಪನವರಿಗೆ ಇದೇನೋ ತಮ್ಮನ್ನು ಸುತ್ತಿಕೊಳ್ಳುತ್ತಿದೆ ಅಂತ ಅನ್ನಿಸಿತು. ತಮ್ಮ ಆಪ್ತ ಕಾರ್ಯದರ್ಶಿ ಸುಬ್ರಹ್ಮಣ್ಯನ ಕೈ ಶುದ್ಧ. ಅವನೆಂದೂ ಯಾವುದಕ್ಕೂ ಮನಸೋತವನಲ್ಲ. ತನಗೆ ಕೆಟ್ಟ ಹೆಸರು ತಂದವನಲ್ಲ. ಆದರೆ ಇದೆಲ್ಲ ಏನಾಯಿತು? ಅವನನ್ನು ಕರೆಸಿದರು. 'ಇದೆಲ್ಲ ಏನು?' ಎಂದರು. ಸುಬ್ರಹ್ಮಣ್ಯ ಮೊದಲೇ ಪತ್ರಿಕೆ ನೋಡಿದ್ದ. ಅವನಿಗೆ ಎಲ್ಲ ತಿಳಿದಿತ್ತು. ಮಾತಿಲ್ಲದೆ ನಿಂತ. 'ಅದೇನು ನಡೀತು, ಎಲ್ಲ ಹೇಳ್ಬಿಡು' ಎಂದರು ಗುರುಪಾದಪ್ಪ.

ಸಮಾರಂಭ ಮುಗಿಸಿ ಬರುತ್ತಿದ್ದಂತೆಯೇ ಮುಖ್ಯಮಂತ್ರಿಗಳ ಮನೆಯಿಂದ ಸುಬ್ರಹ್ಮಣ್ಯನಿಗೆ ಫೋನ್ ಬಂದಿತ್ತಂತೆ. ಗಾಂಧಿವಾದಿ ಗುರುಪಾದಪ್ಪನವರಿಗೆ ಈ ವಿಚಾರ ತಿಳಿದರೆ, ಪುಕ್ಕಟೆಯಾಗಿ ಒಂದೇ ಒಂದು ಹಣ್ಣೂ ಮುಖ್ಯಮಂತ್ರಿಗಳ ಮನೆ ಸೇರುವುದು ಸಾಧ್ಯವಿಲ್ಲವೆಂದು ತಿಳಿದ ಸುಬ್ರಹ್ಮಣ್ಯ ಏನು ಮಾಡುವುದೆಂಬ ಗೊಂದಲಕ್ಕೆ ಬಿದ್ದ. ತೋಟಗಾರಿಕೆ ಇಲಾಖೆಯ ನಿರ್ದೇಶಕರಿಗೆ ಫೋನ್ ಮಾಡಿ ತನ್ನ ಕಷ್ಟ ತೋಡಿಕೊಂಡ. ಅವರು ತಾನೆಲ್ಲ ಅದನ್ನು ನೋಡಿಕೊಳ್ಳುವ ಭರವಸೆಯನ್ನು ನೀಡಿದರು. ಹಣ್ಣು ಮುಖ್ಯಮಂತ್ರಿಗಳ ಮನೆಯನ್ನು ಸೇರಿರಬೇಕು. ಗುರುಪಾದಪ್ಪನವರ ಮನೆಗೂ ನಾಲ್ಕು ಬುಟ್ಟಿ ಬಂದಿತ್ತು.

'ಇದಿಷ್ಟನ್ನು ನಾನು ಬಲ್ಲೆ. ಉಳಿದ ವಿಚಾರ ತಿಳಿಯದು' ಎಂದು ಸುಬ್ರಹ್ಮಣ್ಯ ಮುಖ ಕೆಳಗೆ ಹಾಕಿದ. ಗುರುಪಾದಪ್ಪನವರಿಗೆ ಎಲ್ಲ ಹೊಳೆದು ಹೋಯಿತು. ಇಂಥ ವ್ಯವಹಾರದಲ್ಲಿ ನೂರು ಬುಟ್ಟಿಯಾದರೂ ಸರಿ, ಇನ್ನೂರಾದರೂ ಸರಿ, ಯಾರೂ ಕಾಸು ಕೊಟ್ಟಿರುವುದಿಲ್ಲ. ಇಂತದಕ್ಕೇ ಕೆಲವರು ಕಾದು ಕುಳಿತಿರುತ್ತಾರೆ. ಇನ್ನು ಕಾಸು ಕೊಡುವ ಮಾತೆಲ್ಲಿ?

ಗುರುಪಾದಪ್ಪ ಮಾತಿಲ್ಲದೆ ಎದ್ದುಹೋದರು. ಗಾಂಧಿ ಫೋಟೋದ ಕೆಳಗೆ ಬಹಳ ಹೊತ್ತು ಮೌನವಾಗಿ ನಿಂತಿದ್ದರು. ಈ ಮೌನವನ್ನು ಕದಡುವಂತೆ ಫೋನ್ ಬಡಿದುಕೊಳ್ಳುತ್ತಿತ್ತು. ಸುಬ್ರಹ್ಮಣ್ಯ, 'ಸಾಹೇಬರು ಮನೆಯಲ್ಲಿ ಇಲ್ಲ' ಎಂದು ಉತ್ತರ ಕೊಡುತ್ತಿರುವುದೂ ಕೇಳಿಸುತ್ತಿತ್ತು. ಮನೆಯಲ್ಲಿ ಮೌನ ಬೀಡುಬಿಟ್ಟಿತ್ತು. ಗುರುಪಾದಪ್ಪ ತಮ್ಮ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡರು.

ಮಧ್ಯಾಹ್ನ ಹೊರಗೆ ಬಂದವರು ತಮ್ಮ ರಾಜೀನಾಮೆ ಪತ್ರವನ್ನು ಮುಖ್ಯಮಂತ್ರಿಗಳಿಗೆ ಕಳುಹಿಸಿದರು. ಅರ್ಧಗಂಟೆಯಲ್ಲಿಯೇ ಮುಖ್ಯಮಂತ್ರಿಗಳು ಮನೆಗೆ ಧಾವಿಸಿದರು. 'ರಾಜೀನಾಮೆಯನ್ನು ಹಿಂತೆಗೆದುಕೊಳ್ಳಿ, ಇದೆಲ್ಲ ಯಾವ ದೊಡ್ಡ ಸಂಗತಿ ಅಂತ ನೀವು ರಾಜೀನಾಮೆ ಕೊಡಬೇಕು? ಸುಮ್ನಿರಿ, ಉಳಿದದ್ದನ್ನೆಲ್ಲ ನಾನು ನೋಡಿಕೊಳ್ಳುತ್ತೇನೆ. ಇದೆಲ್ಲ ಯಾರ ಕಿತಾಪತಿ ಅನ್ನೋದೂ ನನಗೆ ಗೊತ್ತು. ಧೈರ್ಯ ಕಳೆದುಕೊಳ್ಳಬೇಡಿ' ಎಂದು ಏನೇನೋ ಹೇಳಿದರು. ಗುರುಪಾದಪ್ಪ ಮೌನದಿಂದ ಹೊರಬರಲಿಲ್ಲ. 'ನೋಡೋಣ, ಯೋಚಿಸುತ್ತೇನೆ. ನನ್ನ ನಿರ್ಧಾರ ಬದಲಾದರೆ ತಮಗೆ ತಿಳಿಸುತ್ತೇನೆ' ಎಂದು ವಿಷಯವನ್ನು ಅಲ್ಲಿಗೆ ನಿಲ್ಲಿಸಿದ್ದರು.

ಮುಖ್ಯಮಂತ್ರಿಗಳು ರಾಜೀನಾಮೆ ಪತ್ರವನ್ನು ಅಂಗೀಕರಿಸದೆ ಕಾದರು; ಹಲಬಗೆಯಲ್ಲಿ ಒತ್ತಡ ತಂದರು. ಗುರುಪಾದಪ್ಪ ಯಾವುದಕ್ಕೂ ಮಣಿಯಲಿಲ್ಲ. ಗಾಂಧಿ ಮತ್ತೆಮತ್ತೆ ಅವರ ಮನದಲ್ಲಿ ಸುಳಿದಾಡಿದರು. ತಮ್ಮ ತಪ್ಪನ್ನು ತೊಳೆದುಕೊಳ್ಳುವುದಕ್ಕಾಗಿ ಗುರುಪಾದಪ್ಪ ಮೂರು ದಿನ ಮೌನವಹಿಸಿದರು; ಆ ಮೂರೂ ದಿನಗಳು ನೀರಿನ ಹೊರತಾಗಿ ಬೇರೇನನ್ನೂ ತೆಗೆದುಕೊಳ್ಳಲಿಲ್ಲ. ಅದು ಅವರ ಆತ್ಮಶುದ್ಧೀಕರಣದ ಒಂದು ವಿಧಾನ. ಇದನ್ನು ಕೂಡಾ ಗುರುಪಾದಪ್ಪ ಗಾಂಧೀಜಿಯವರಿಂದಲೇ ಕಲಿತಿದ್ದರು.

ಅವರು ಮನೆಯಿಂದ ಹೊರಗೂ ಬರಲಿಲ್ಲ. ಅನೇಕರು ಗುರುಪಾದಪ್ಪನವರ ಭೇಟಿಗೆ ಬಂದರು. ಪತ್ರಕರ್ತರು, ಸಚಿವ ಸಂಪುಟದ ಸಹೋದ್ಯೋಗಿಗಳು, ಪಕ್ಷದ

ಕಾರ್ಯಕರ್ತರು, ಗಾಂಧಿವಾದಿಗಳು, ಹಿತೈಷಿಗಳು, ಸ್ನೇಹಿತರು, ಬಂಧುಗಳು. ಯಾರೂ ಬಂದರೂ ಗುರುಪಾದಪ್ಪ ಮೌನವನ್ನು ಮುರಿಯಲಿಲ್ಲ. ಹೇಳುವವರು ಹೇಳಿದರು. ಗುರುಪಾದಪ್ಪ ಮೌನವಾಗಿಯೇ ಕೇಳಿಸಿಕೊಂಡರು. ಯಾರ ಮಾತೂ ಅವರಿಗೆ ಹೊರದಾರಿಯನ್ನು ತೋರಿಸಲಿಲ್ಲ.

ಕೊನೆಗೊಂದು ದಿನ ಮಂತ್ರಿಗಿರಿಯ ಮನೆಯನ್ನು ಖಾಲಿ ಮಾಡಿ ಮೈಸೂರಿನ ತಮ್ಮ ಮನೆಗೆ ಬಂದುಬಿಟ್ಟರು. ಅವರ ರಾಜಕೀಯ ಜೀವನ ಅಲ್ಲಿಗೆ ಕೊನೆಗೊಂಡಿತು. ಒಂದು ಅಂಕ ಮುಗಿಯಿತೆಂದು ಭಾವಿಸಿದ ಅವರು ನೆಮ್ಮದಿಯ ಬದುಕಿಗೆ ಮಾರ್ಗಗಳನ್ನು ಹುಡುಕತೊಡಗಿದರು. ಆದರೂ ಅವರಿಗೆ ಆ ನೆನಪು ಒಂದು ಭೂತವಾಗಿ ಕಾಡತೊಡಗಿತು.

ಎಲ್ಲಿಯೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲು ಬಯಸದ ಅವರು ಆಲನಹಳ್ಳಿಯ ಬಳಿಯಿದ್ದ ತಮ್ಮ ಜಮೀನಿಗೆ ವಾಸ್ತವ್ಯವನ್ನು ಬದಲಾಯಿಸಿದರು. ಇಡೀ ಕುಟುಂಬ ಮೈಸೂರಿನಲ್ಲಿರಲಿ, ತಾನು ಸ್ವಲ್ಪ ದಿನ ಜಮೀನಿನಲ್ಲಿರುತ್ತೇನೆ, ಅದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತೇನೆಂದು ಅಲ್ಲಿಯೇ ಒಂದು ಸಣ್ಣ ಮನೆಯನ್ನು ಕಟ್ಟಿಸಿದರು. ಅಲ್ಲಿಯೇ ಉಳಿದರು. ಬೇಡವೆಂದರೂ ಕೇಳದೆ ಹೆಂಡತಿ ಬಂದು ಗುರುಪಾದಪ್ಪನವರ ಜೊತೆ ಸೇರಿಕೊಂಡರು.

ಗುರುಪಾದಪ್ಪನವರ ಮುಖದ ಮೇಲೆ ಒಂದು ಬಗೆಯ ಸಂತೃಪ್ತಿಯ ಭಾವ ಮೂಡಿ ಮರೆಯಾಯಿತು. ಅವರು ಮತ್ತೆ ತಮ್ಮ ಕೈಯಲ್ಲಿದ್ದ ಮಾವಿನ ಹಣ್ಣನ್ನು ಮೃದುವಾಗಿ ನೇವರಿಸಿ ಸುಖಿಸಿದರು. ಈ ಮಾವಿನ ಬೆಳೆಯೇ ಅಲ್ಲವೇ ತಮ್ಮ ಬದುಕಿಗೊಂದು ಹೊಸ ತಿರುವನ್ನು ನೀಡಿದ್ದು ಎಂದು ಅದನ್ನೆಲ್ಲ ಮತ್ತೆ ಮೆಲುಕು ಹಾಕತೊಡಗಿದರು... ಗುರುಪಾದಪ್ಪನವರು ಜಮೀನಿಗೆ ಬಂದದ್ದು ಜನರ ಕಾಟದಿಂದ ತಪ್ಪಿಸಿಕೊಳ್ಳಲು, ಅಜ್ಞಾತವಾಗಿರಲು ಎಂಬುದು ನಿಜವಾದರೂ, ನಾಲ್ಕಾರು ದಿನ ಕಳೆಯುತ್ತಿದ್ದಂತೆಯೇ ಅವರಲ್ಲಿ ಹೊಸ ಚೈತನ್ಯ ಮೂಡತೊಡಗಿತು. ಸಂಜೆ ಮತ್ತು ಬೆಳಗಿನ ಹೊತ್ತುಗಳಲ್ಲಿ ಅವರು ಜಮೀನಿನ ಉದ್ದಗಲಕ್ಕೂ ಒಂಟಿಯಾಗಿ ತಿರುಗಾಡುವಾಗ ಜಗತ್ತು ಹೊಸದಾಗಿಯೇ ಕಾಣಿಸತೊಡಗಿತು. ಸಂಜೆಯ ಹೊಂಬಣ್ಣದಲ್ಲಿ ಮಿಂದಂತೆ ಹಕ್ಕಿಗಳು ಬಾನಿನಲ್ಲಿ ಚಿತ್ತಾರ ಬರೆಯುತ್ತ ಹೋಗುವುದನ್ನು ನೋಡುತ್ತ ಅವರು ಮೈಮರೆಯುತ್ತಿದ್ದರು. ಸುತ್ತ ಗುಡ್ಡಸಾಲು, ಹೊಲಗದ್ದೆಗಳ ಹಸಿರು, ದನಕರುಗಳು, ನಿರಾತಂಕವಾಗಿ ಸಾಗುತ್ತಿರುವಂತೆ ಕಾಣುವ ಜಗತ್ತು. ತಾನೇಕೆ ಇಷ್ಟುದಿನ ಈ ಸೊಬಗಿನಿಂದ ವಂಚಿತನಾದೆ ಎಂದು ಚಿಂತಿಸುತ್ತ, ಬೀಸಿಬರುವ ತಂಗಾಳಿಗೆ ಮೈಕೊಟ್ಟು ಸುಖಿಸುತ್ತ ಎಷ್ಟೋ ಹೊತ್ತು ಸುತ್ತುತ್ತಿದ್ದರು. ಸಂಜೆ ಕಪ್ಪಾಗಿ, ಬಾನಿನ ಬಣ್ಣಗಳೆಲ್ಲ ಅಳಿಸಿಹೋಗಿ, ಹಕ್ಕಿಗಳ ಹಾರಾಟವೂ ಕಾಣದಾಗಿ ಗುರುಪಾದಪ್ಪ ಭಾವಪ್ರಪಂಚವನ್ನು ಬಿಟ್ಟು ವಾಸ್ತವಕ್ಕೆ ಮರಳುತ್ತಿದ್ದರು. ಸಂಜೆಯ ಗಾಳಿಯಂತೆಯೇ ಅವರ ಮೈಯ್ಯೂ ಹಗುರಾಗಿ ನಿರುಮ್ಮಳ ಭಾವ ಅವರನ್ನು ಆವರಿಸುತ್ತಿತ್ತು. ಮನೆಗೆ ಬಂದವರೇ ಹೆಂಡತಿ ಸಿದ್ದಮ್ಮನ ಜೊತೆಯಲ್ಲಿ ಮನಸ್ಸು ಬಿಚ್ಚಿ ಹರಟುತ್ತಿದ್ದರು. ಬಿಸಿಬಿಸಿ ಅಡಿಗೆಯನ್ನು ಉಂಡು ಈ ಜಮೀನಿನಲ್ಲಿ ಏನು ಬೆಳೆ ತೆಗೆಯಬಹುದೆಂದು ಚಿಂತಿಸುತ್ತ, ಯೋಜನೆಗಳನ್ನು ರೂಪಿಸುತ್ತಾ ಹಾಸಿಗೆಯನ್ನು ಸೇರಿಬಿಡುತ್ತಿದ್ದರು.

ಒಂದು ಮುಂಜಾನೆ ಮಂಜಿನ ಹನಿಗಳನ್ನು ತುಳಿಯುತ್ತಾ ಗುರುಪಾದಪ್ಪನವರು ಜಮೀನಿನಲ್ಲಿ ನಡೆಯುತ್ತಿದ್ದಾಗ ಮಾವಿನ ಬೆಳೆಯ ಕನಸು ಅವರ ತಲೆಯಲ್ಲಿ ಮೊಳಕೆಯೊಡೆಯಿತು. ತಮ್ಮ ಜಮೀನಿನ ಮಣ್ಣು ಮಾವಿನ ಫಸಲಿಗೆ ಹೇಳಿಮಾಡಿಸಿದ್ದು ಎಂಬುದು ಹೊಳೆಯುತ್ತಿದ್ದಂತೆಯೇ, 'ಹೌದು ಮಾವಿನ ಗಿಡಗಳನ್ನೇ ನೆಡಬೇಕು' ಎಂದುಕೊಂಡರು. ಮಗನನ್ನು ಕರೆಸಿಕೊಂಡು ಮೂರ್‍ನಾಲ್ಕು ಎಕರೆಯಲ್ಲಿ ಮಾವಿನ ಸಸಿಗಳನ್ನೇ ನೆಟ್ಟುಬಿಡುವುದೆಂದು ಹೇಳಿದರು. ಯಾವ ಜಾತಿಯ ಮಾವನ್ನು ಬೆಳೆಸುವುದು ಎಂದು ಮಗ ಕೇಳಿದಾಗ, 'ಹೌದಲ್ಲಾ, ಯಾವುದು ಬೆಳೆಯಬೇಕು?' ಎಂದು ಚಿಂತಿಸಿದರು. ನೀನು ಎಲ್ಲ ಸಿದ್ದಮಾಡು, ಕೊನೆಗೆ ಯಾವ ಮಾವು ಹೇಳ್ತೀನಿ ಎಂದರು. ಆ ಸಿದ್ಧತೆಗೆ ಮುನ್ನವೇ ಅವರ ಮುಂದೆ ಮಲ್ಲಿಕಾ ಬಂದು ನಿಂತುಬಿಟ್ಟಿತು.

ಮಲ್ಲಿಕಾ ಹೊಸ ಸುಗಂಧವಾಗಿ ಗುರುಪಾದಪ್ಪನವರ ಬದುಕಿನಲ್ಲಿ ಬೀಸಿತು. ಸುತ್ತಮುತ್ತಲ ರೈತರು ಇವರ ಜಮೀನಿಗೆ ಬರಲಾರಂಭಿಸಿದರು. ಮಾವಿನ ಗಿಡಗಳನ್ನು ನೋಡುವುದು, ಗುರುಪಾದಪ್ಪನವರ ಜೊತೆಯಲ್ಲಿ ಚರ್ಚಿಸುವುದು ನಿರಂತರವಾಗಿ ನಡೆಯಿತು. ಗುರುಪಾದಪ್ಪ ಮೈಮೇಲೆ ಬಂದವರಂತೆ ಮಲ್ಲಿಕಾ ತಳಿಯ ಬಗ್ಗೆ ಎಲ್ಲರಿಗೂ ಹೇಳತೊಡಗಿದರು. ಮಲ್ಲಿಕಾ ಬೆಳೆಯುತ್ತಿದ್ದ ಕೋಲಾರ ಕಡೆಯ ರೈತರನ್ನು ಭೇಟಿಮಾಡಿ ಮಾಹಿತಿ ಸಂಗ್ರಹಿಸಿಕೊಂಡು ಬಂದರು. ಕೈತುಂಬ ಕಾಸನ್ನು ಈ ಬೆಳೆ ತಂದುಕೊಡುತ್ತದೆ ಎಂದು ಎಲ್ಲರಿಗೂ ಹೇಳಿದರು. ಇವರ ಮಾತುಗಳಿಂದ ಉತ್ತೇಜಿತರಾದ ಹತ್ತಾರು ರೈತರು ತಮ್ಮ ಹೊಲಗಳಲ್ಲಿ ಈ ತಳಿಯ ಸಸಿಗಳನ್ನು ನೆಟ್ಟು ಪೋಷಿಸತೊಡಗಿದರು.

ಸದ್ದಿಲ್ಲದೆ ಮಲ್ಲಿಕಾ ಈ ಭಾಗದಲ್ಲಿ, ಹಲವಾರು ಎಕರೆ ಭೂಮಿಯಲ್ಲಿ ಕಂಗೊಳಿಸತೊಡಗಿತು. ವರ್ಷಗಳು ಹೋದದ್ದೇ ತಿಳಿಯಲಿಲ್ಲ. ಎಲ್ಲೆಲ್ಲೂ ಹಣ್ಣು ಸಮೃದ್ಧವಾಗಿ ಗೊಂಚಲು ಗೊಂಚಲು ತೂಗಿತು. ಬುಟ್ಟಿಬುಟ್ಟಿಗಳು ತುಂಬಿ ಮಾರುಕಟ್ಟೆಯಲ್ಲಿ ಮಲ್ಲಿಕಾ ಬೆಳಗಿತು. ಗುರುಪಾದಪ್ಪ ಯಶಸ್ವಿ ಬೆಳೆಗಾರರಾದರು. ಗುರುಪಾದಪ್ಪನವರ ಜೊತೆ ಸಮಾಲೋಚಿಸಲು ದೂರದೂರುಗಳಿಂದ ರೈತರು ಬರುವುದು ಸಾಮಾನ್ಯವಾಯಿತು.

ಬೇಸಿಗೆಯ ದಿನಗಳಲ್ಲಿ ಗುರುಪಾದಪ್ಪನವರು ತಮ್ಮ ಮಂಚವನ್ನು ಮಾವಿನ ಮರದ ಕೆಳಗೇ ಹಾಕಿಸಿಕೊಂಡು ಅಲ್ಲಿಯೇ ಉಳಿದುಬಿಡುತ್ತಿದ್ದರು. ಮಾವಿನ ಹೂವಿಗೆ ಬರುತ್ತಿದ್ದ ದುಂಬಿಯ ಹಿಂಡು, ಅವುಗಳ ಝೇಂಕಾರ, ಗಾಳಿಯನ್ನು ತುಂಬುತ್ತಿದ್ದ ಪರಿಮಳ, ಬಿರುಬೇಸಿಗೆಯಲ್ಲಿಯೂ ತಂಪಾಗಿ ಬೀಸಿಬರುತ್ತಿದ್ದ ಹಿತವಾದ ಗಾಳಿ. ಮಾವಿನ ಸುಗ್ಗಿಯಲ್ಲಂತೂ ಮನೆ ಮಂದಿಗೆಲ್ಲಾ ಇನ್ನಿಲ್ಲದ ಹಿಗ್ಗು. ಇಂಥ ದಿನಗಳನ್ನು ಆ ಬೆಂಗಳೂರಿನಲ್ಲಿ ಕಳೆಯಲೇ ಇಲ್ಲವಲ್ಲಾ ಎಂದು ಗುರುಪಾದಪ್ಪ ಆಗಾಗ ಅಂದುಕೊಳ್ಳುವರು.

ಜಮೀನಿನಲ್ಲಿ ಗುರುಪಾದಪ್ಪ ನಿತ್ಯ ದುಡಿಯುತ್ತಿದ್ದರು. ಗಿಡದಿಂದ ಗಿಡಕ್ಕೆ ಹೋಗುವುದು, ನೀರು ಗೊಬ್ಬರ ಸರಿಯಾಗಿದೆಯೇ ಎಂದು ನೋಡುವುದು, ಗಿಡದ ಟೊಂಗೆಗಳು ಗೊಂಚಲಿನ ಭಾರಕ್ಕೆ ಬಾಗುತ್ತಿದ್ದರೆ ಅವುಗಳಿಗೆ ಕೊವೆ ಕೋಲನ್ನು ಕೊಟ್ಟು ನಿಲ್ಲಿಸಲು ಹೇಳುವುದು, ಗೊಂಚಲು ಸರಿಯಾಗಿ ಕಟ್ಟಿದೆಯೇ ಇಲ್ಲವೇ, ಈ ವರ್ಷ ಫಸಲು ಚೆನ್ನಾಗಿ ಬರಬಹುದೇ, ಆಲಿಕಲ್ಲಿನ ಮಳೆ ಸುರಿದರೆ ಮಾಡಿದ್ದೆಲ್ಲ ವ್ಯರ್ಥ... ಹೀಗೆಯೇ ಸುತ್ತುತ್ತಿತ್ತು ಅವರ ಮನಸ್ಸು.

ಇಂಥ ದಿನಗಳಲ್ಲೇ ಒಂದು ಬಾರಿ ಗುರುಪಾದಪ್ಪ ಹಾಸಿಗೆ ಹಿಡಿದರು. ಅವರು ಮತ್ತೆ ಜಮೀನಿಗೆ ಕಾಲಿಡದಂತೆ ಆ ಖಾಯಿಲೆ ಅವರನ್ನು ಅಲ್ಲಾಡಿಸಿಬಿಟ್ಟಿತು. ಸಿದ್ದಮ್ಮ ಮೊಮ್ಮಕ್ಕಳನ್ನು ನೋಡಿಕೊಳ್ಳಲೆಂದು ಮೈಸೂರು ಸೇರಿದ್ದಳು. ಮೂರೋ ನಾಲ್ಕು ದಿನಕ್ಕೆ ಜಮೀನಿಗೆ ಬರುವುದು, ಸುತ್ತಾಡುವುದು, ಗಂಡನನ್ನು ನೋಡುವುದು ನಡೆದಿತ್ತು. ಸೊಸೆ ಪುಟ್ಟವ್ವ ಮಾತ್ರ ಈ ಜಮೀನು ಮನೆಯಲ್ಲಿಯೇ ಉಳಿದು ಮಾವನನ್ನು ನೋಡಿಕೊಳ್ಳುತ್ತಿದ್ದಳು. ಜಮೀನಿನ ಉಸ್ತುವಾರಿಯನ್ನು ಹಿರಿ ಮಗ ನೋಡಿಕೊಳ್ಳುತ್ತಿದ್ದ. ಶಾಲೆಯನ್ನು ನಿರಾಕರಿಸಿದ್ದ ಮಾದೇವನೂ ಅಜ್ಜನ ಜೊತೆಯಲ್ಲಿಯೇ ಉಳಿದುಬಿಟ್ಟಿದ್ದ. ಎರಡನೆಯ ಮಗ, ಮೂರನೆಯ ಮಗ, ಅವರ ಸಂಸಾರ ಎಲ್ಲ ಮೈಸೂರಿನಲ್ಲಿಯೇ ಇತ್ತು.

ಕೈಯಲ್ಲಿದ್ದ ಮಲ್ಲಿಕಾ ಹಣ್ಣನ್ನು ಗುರುಪಾದಪ್ಪ ಮತ್ತೆ ಮತ್ತೆ ತಿರುಗಿಸಿ ನೋಡಿದರು. ಆ ಒಂದು ಆಪಾದನೆ ತಮ್ಮ ಮೇಲೆ ಬರದಿದ್ದರೆ ತಾವು ಜಮೀನಿನ ಕಡೆಗೆ ಮುಖವನ್ನೇ ಹಾಕುತ್ತಿರಲಿಲ್ಲ. ಮಾವಿನ ಹಣ್ಣಿನ ಸುಗ್ಗಿಯಲ್ಲಿ ಕೊಂಡು ತರುತ್ತಿದ್ದ ಒಂದೋ ಎರಡೋ ಬುಟ್ಟಿಗಳು. ಅಷ್ಟರಲ್ಲಿಯೇ ತೃಪ್ತಿ. ತಾವು ಮಾವಿನ ಬೆಳೆಗಾರರಾದ ಮೇಲೆ ಬುಟ್ಟಿಗಳಿಗೆಲ್ಲಿ ಬೆಲೆ ಇತ್ತು! ಈ ಮರದ್ದು ಬಹಳ ರುಚಿ, ಇದರ ಕಂಪೇ ಕಂಪು. ಏನೆಲ್ಲ ಹೇಳಿಕೊಂಡು ತಿಂದದ್ದೇ ತಿಂದದ್ದು. ಬಂದವರಿಗೆಲ್ಲ ಮಾವಿನ ಹಣ್ಣಿನ ಆತಿಥ್ಯವೇ. ತಿಂದವರೆಷ್ಟು, ಹೊಗಳಿದವರೆಷ್ಟು, ತಮ್ಮ ಜಮೀನಿನಲ್ಲಿ ಬೆಳೆಯುತ್ತೇವೆಂದು ನಿರ್ಧಾರ ತೆಗೆದುಕೊಂಡವರೆಷ್ಟು?

ಗುರುಪಾದಪ್ಪ ನಕ್ಕರು. ಉನ್ಮಾದ ಉಕ್ಕಿ ಹರಿದಂತೆ ಸೊಸೆಯನ್ನು ಕೂಗಿದರು. ಪುಟ್ಟವ್ವ, 'ಕರೆದಿರಾ ಮಾವ' ಎನ್ನುತ್ತ ಬಂದಳು. 'ಹೌದವ್ವ ಈ ಹಣ್ಣನ್ನು ಕೂದುಕೊಡು, ತಿಂದುಬುಡುವಾ' ಎಂದರು. ಸೊಸೆಯ ಮುಖ ಹಿಗ್ಗಿತು. ಅವಳು ಮಾವಿನ ಹಣ್ಣನ್ನು ಕೊಯ್ದು ತರಲು ಸಂಭ್ರಮದಿಂದ ಒಳಗೆ ಹೋದಳು.



**(ವೃತ್ತಿಯಿಂದ ಪತ್ರಕರ್ತರಾಗಿದ್ದ ಜಿ.ಪಿ. ಬಸವರಾಜು ಅವರು ಕನ್ನಡದ ಹಿರಿಯ ಕಥೆಗಾರ, ಕವಿ ಹಾಗೂ ಸಾಹಿತ್ಯ ಚಿಂತಕರೂ ಹೌದು)**

### ಚಂದಾರರಾಗಬಯಸುವವರಿಗೆ ಸೂಚನೆ

**'ಹೊಸ ಮನುಷ್ಯ; ಪತ್ರಿಕೆಗೆ ಚಂದಾದಾರರಾಗ ಬಯಸುವವರು 2020ರ ಜನವರಿಯಿಂದ ಬರುವ ಸೆಪ್ಟಂಬರ್ ಸಂಚಿಕೆವರೆಗಿನ ಚಂದಾ ಹಣ ನೂರಾ ಐವತ್ತು ರೂಪಾಯಿಗಳನ್ನು ಶಿವಮೊಗ್ಗದ ಎಸ್.ಬಿ.ಐ.ನ ಗೀತಾಕೃಪಾ ಶಾಖೆಯಲ್ಲಿ ಪತ್ರಿಕೆಯ ಸಂಪಾದಕರ ಹೆಸರಿನಲ್ಲಿರುವ ಚಾಲ್ತಿ ಖಾತೆ ಸಂಖ್ಯೆ 64110358330 ಈ ಸಂಖ್ಯೆಗೆ ವರ್ಗಾಯಿಸಿ ಪತ್ರಿಕೆಯನ್ನು ಪಡೆಯಬಹುದು ಹಣ ವರ್ಗಾಯಿಸಿದ ಕೂಡಲೇ 94492 42284 ಈ ಸಂಖ್ಯೆಗೆ ಕರೆ ಅಥವಾ ಸಂದೇಶದ ಮೂಲಕ ಖಚಿತಪಡಿಸಬೇಕು. ಚೆಕ್/ಡಿಡಿ/ಎಂ.ಓ ಮೂಲಕವೂ ಹಣ ಕಳಿಸಬಹುದು–ಸಂ..**

# ನವಿಲುಗರಿ

## ಕನಸು ಕಣ್ಣಿನ ಕೊನೆಗೆ

ಕಗ್ಗತ್ತಲಿನ ಕಣ್ಣಾಣದ ಕಂಗಾಲಿನಲ್ಲೂ
ಅಲ್ಲೊಂದು ಬೆಳಕಿನ ಕಿರು ಓಣಿ ಕಾಣುವಂತಿದೆ
ಕಾರ್ಮುಗಿಲು ಕವಿದ ಕಡು ಕಪ್ಪಿನ ದಿಗ್ಮೂಢತೆಯಲ್ಲೂ
ಅಭಯದ ಮಿಂಚೊಂದು ಬೆಳಗುವಂತಿದೆ.



೨

ದಟ್ಟ ದಾರಿದ್ರ್ಯದ ಕಿಬ್ಬೊಟ್ಟೆಯಲ್ಲೂ
ಕೊಪ್ಪರಿಗೆ ಹೊನ್ನು ಸಿಕ್ಕಂತೆ
ಹಸಿವಿನ ಸಾಮ್ರಾಜ್ಯದಲ್ಲೂ
ಅನ್ನದೊಂದಗುಳು ಕಂಡಂತೆ

ಮಯಾ ಮಯ ಸೃಷ್ಟಿಯಾಘಾತದಲ್ಲೂ
ಏನೋ ಮೈದಡವಿ ಮನದಡವಿ ಸಂತೈಕೆಯ ಕೈ ಚಾಚಿದಂತಿದೆ
ಕ್ರೂರ ನೋಟಗಳ ಸಂದಿನಾಚೆಯ ಬದಿಗೆ
ಕರುಣೆಯ ಕಣ್ಣೆರಡು ಭರವಸೆಯ ದಾರಿ ಕಾಣಿಸಿದಂತಿದೆ

ಕುರುಡು ನಡೆಯಲ್ಲಿ ಹೆಳವ ಗುರಿ ಮುಟ್ಟುವ ತೆರದಿ
ರಾಜ ಹುಕುಮಿನ ಕಠಾರಿ ಮೊನಚಿನ ತುದಿಯಲ್ಲೂ
ಧೃತಿಗೆಡದ ಎದೆಯೊಂದು ಉಬ್ಬಿ ಮಾತಾಡಿದಂತಿದೆ
ಹಬ್ಬಿ ತಬ್ಬಿ ಜ್ವಾಲೆ ಸಂಕಟ ಸುಟ್ಟರೂ
ಪುಟ್ಟ ಹಕ್ಕಿಯ ಕೊಕ್ಕು ನೀರ ಸಿಂಪಡಿಸಿ ಕಣ್ಣೊರೆಸುವಂತಿದೆ
ದಿಗಿಲು ದಿಗ್ಭ್ರಮೆ ಸಂತೆ ನೆರೆದರೂ ಕಂಡ ಕನಸಿನ ಕುಸುಮ ಕಮರದಿದೆ
ಇದು ಅರುಣ, ಇದು ಕಿರಣ, ಮರಣದಾಚೆಯ ಕರುಣ.

೩

ನೆಲತಾಯಿ, ಜಲತಾಯಿ, ಮಂದಮಾರುತದಾಯಿ
ಒಲೆ ಹತ್ತಿ ಪಾಕಾಗ್ನಿ ಬೇಯಿಸಿದ ಅಗುಳ ಗಂಧ
ಎಲೆ ಭರವಸೆಯೆ ಎಲೆ ಅಭಯದಾಯಿನಿಯೆ
ಜಾರು ಜೀವವ ಹಿಡಿದು ನಿಲ್ಲಿಸುವ ಭವತಾರಿಣಿಯೆ

ಆಸೆ ಅಭಯಗಳಲ್ಲಿ ಹೊಸದೊಂದು ದಾರಿಯೇ ತೆರೆದಂತಿದೆ
ಸಂಕಲೆಯ ಪುಡಿಗೈದು, ರೆಕ್ಕೆ ಬಿಚ್ಚುವ ತವಕ
ಟಂಕಸಾಲೆಯಲೊಂದು ಹೊಸ ನಾಣ್ಯ ಮುದ್ರಿಸಿದೆ
ಬದಿಯೆರಡರಲೂ ಮುಗ್ಧ ಮಗುವಿನ ನಗುವೆ ಅಚ್ಚಾದಂತಿದೆ.

**–ಚಂದ್ರಶೇಖರ ತಾಳ್ಯ**



## ಸಂತೋಷ್ ಚೊಕ್ಕಡಿಯವರ ಎರಡು ಪದ್ಯಗಳು

### ಭರವಸೆ

ಕಳ್ಳ ಬೆಕ್ಕಿನ ಹಾಗೆ ಒಳಗಡಿಯಿಟ್ಟಿರುವ ಕಾಲವೇ
ಚಾಣಾಕ್ಷ ನೀನು,ನೇರ ಎದುರಿಗೆ ಬರದೆ ಅವಿತಿರುವೆ
ಮನೆಯ ಮೂಲೆಯಲ್ಲೆಲ್ಲೋ.ಕನ್ನಡಿಯೆದುರು ನಿಂತಾಗ
ಇಣುಕಿ ಪಕ್ಕನೆ ಹಾದುಹೋಗುವೆ,ಸುಸ್ತಾಗಿ
ಕುರ್ಚಿಯಲ್ಲೊರಗಿದಾಗ ಥಟ್ಟನೆ ಜಿಗಿದು ಹಿಂದೆ
ಅಡಗುವೆ,ನಡೆವಾಗ ನೆರಳಲ್ಲಿ ನುಡಿವಾಗ
ಸ್ವರದಲ್ಲಿ ಸಾಗಿಬರುವೆ,ಕೆಲವೊಮ್ಮೆ ಸುಖಿನಿದ್ದೆಯಲ್ಲೂ
ಅವತರಿಸಿ ಬೆಚ್ಚಿಬೀಳಿಸುವೆ,ನಡುಗಿಸುವೆ,ಹೀಗೆ
ಕಣ್ಣಾಮುಚ್ಚಾಲೆಯಾಡುತ್ತ ನನ್ನ ಕಾಡುವೆ.



ಚಿತ್ರಗಳು: **ವಿಜಯಶ್ರೀ ಹಲಾಡಿ**

ಆದರೂ ನೀನು ಬರಲೇಬೇಕು ಬಯಲಿಗೆ
ನನ್ನೆದುರಿಗೆ,ಆಗ ನಾವಿಬ್ಬರೂ ಗೆಳೆಯರ ಹಾಗೆ
ಎದುರು ಬದುರಾಗಿ ಕುಳಿತು ಪಟ್ಟಾಂಗ ಹೊಡೆಯು
ನಿನ್ನ ವಾದಕ್ಕೆಳೆದು ನನಗೆ ಗೆಲ್ಲುವಾಸೆ
ಈ ಹಂಬಲವೇ ನನಗೀಗ ಬದುಕಿಗೆ ಭರವಸೆ.



### ಲೇಹ್



ಈ ಊರು ನಿದ್ರಿಸುವಂತೆ ಕಾಣುವುದಿಲ್ಲ

ರಾತ್ರಿ ಎಂತಾದರೂ
ಬೆಳಕೇ ಸರಿಯುವುದಿಲ್ಲ.

ದೂರದಲ್ಲಿ ಮಿಂಚುವ ಬೆಟ್ಟ,
ಹನಿಹನಿಯಾಗಿ ಸುರಿವ ಮಳೆ
ಸರಳತೆಯೇ ನೆಲೆಯಾದ ಮನೆ,ರಸ್ತೆ,
ಧ್ಯಾನಕ್ಕೆ ಸಂದಂತೆ
ದಿವ್ಯ ನಿರ್ಲಿಪ್ತತೆಯಲ್ಲಿ ಸಾಗುವ ಮಂದಿ
ಎಲ್ಲೂ ಕತ್ತಲಿನ ಸುಳಿವಿಲ್ಲ.

ಬೆಳಕು
ಉಸಿರಲ್ಲಿ, ಕಣ್ಣಲ್ಲಿ, ಬಿರಿವ
ಮಾತುಗಳಲ್ಲಿ,ಪ್ರೀತಿ ಆತಿಥ್ಯದಲ್ಲಿ,
ಕಟ್ಟೆಯೊಡೆಯದ ಗಾಢ ಸಂಯಮದಲ್ಲಿ.

ಅನ್ನಿಸುತ್ತದೆ
ಉಸಿರಾಡುತ್ತಿದೆ ಊರು
ಬುದ್ಧನ ಕರುಣೆಯನ್ನೇ
ಆವಾಹಿಸಿಕೊಂಡಂತೆ
ಹೊಸ ಲೋಕವೊಂದಕ್ಕೆ ಮುನ್ನುಡಿ
ತಾನೇ ಬರೆವಂತೆ.

## ಪೋಲೀಸರ ಲಾಠಿ ದೆಸೆಯಿಂದ



ಕೆಲವು ಪೋಲಿಸರಿಗೆ
ಲಾಠಿ ತಿರುಗಿಸದಿದ್ದರೆ
ತಿಂದದ್ದು ಅರಗುವುದಿಲ್ಲ
ಮತ್ತು ನಿದ್ದೆ ಹತ್ತುವುದಿಲ್ಲ.

ಕೆಲ ಪಡ್ಡೆಗಳಿಗೂ ಹಾಗೆ
ಲಾಠಿ ಮೈ ಸವರದಿದ್ದರೆ
ದಿನ ಕಳೆಯುವುದೇ ಇಲ್ಲ.

ಹಾಗಾಗಿ ಏನೇನನ್ನೋ
ಸವರಲು ಹೋಗುತ್ತಾರೆ.
ದಾರಿಹೋಕ ಹುಡುಗಿಯರನ್ನು
ಹುಡುಗಿಯರ ಜತೆ ಕಾಣುವ
ಬೈಕುಗಳನ್ನು ಕದಿಯಲು ಹೋಗಿ
ಕರೆಂಟು ಹೊಡೆದ ಕಾಗೆಯಾಗುತ್ತಾರೆ.

ಮಕ್ಕಳನ್ನು ಹೆತ್ತ ತಪ್ಪಿಗೆ ಅಪ್ಪ ಅಮ್ಮ
ತಲೆ ತಗ್ಗಿಸಿ ನಿಲ್ಲುತ್ತಾರೆ.
ಅವರ ಮನಸ್ಸಿಗೆ, ಪೋಲೀಸ್ ಕಣ್ಣಿಗೆ ಮಣ್ಣೆರಚಲು
ಸಿದ್ದರಾಗುತ್ತಾರೆ.

ರುಚಿ ಕಂಡ ಲಾಠಿ ಸುಮ್ಮನಿರುವುದಿಲ್ಲ
ಬಂದವರ ಮೈಸವರಿ ಮುಗುಳ್ನಕ್ಕು
ಮೂಲೆ ಸೇರುತ್ತದೆ.
ಮಂದಿ ಮನೆ ಸೇರುತ್ತಾರೆ.
ಅವಮಾನ ತಾಳಲಾರದೆ
ಅಪ್ಪ ಅಮ್ಮ ಮುಸುಕು ಹೊದ್ದು
ಮಲಗಿಬಿಡುತ್ತಾರೆ.

ವಿಶ್ರಾಂತಿ ಇಲ್ಲದ ಲಾಠಿ
ನಿಟ್ಟುಸಿರು ಬಿಡುತ್ತಾ
ಇನ್ನೊಬ್ಬ ಬರುವುದನ್ನೇ ಕಾಯುತ್ತಿರುತ್ತದೆ.

**–ಬಾ.ಹ. ರಮಾಕುಮಾರಿ**

# ಸಾಂಸ್ಕೃತಿಕ ಟಿಪ್ಪಣಿಗಳು: ಸಾಹಿತ್ಯ ಮತ್ತು ಸರ್ಕಾರ ಹಾಗೂ ಎರಡು ಹಳೆಯ ನೆನಪುಗಳು

## ಶೃಂಗೇರಿಯಿಂದ ಕಲಬುರಗಿಯವರೆಗೆ.



..ಕಲಬುರಗಿಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವ ಎಚ್. ಎಸ್. ವೆಂಕಟೇಶ ಮೂರ್ತಿಯವರು ನನ್ನ ಬಹುಕಾಲದ ಗೆಳೆಯರಾಗದ್ದರೂ, ಅವರ ಬಗ್ಗೆಯಾಗಲೀ, ಆ ಸಾಹಿತ್ಯ ಸಮ್ಮೇಳನದ ಬಗ್ಗೆಯಾಗಲೀ ಏನನ್ನೂ ಬರೆಯುವ ಮನಸ್ಸು ನನಗಿರಲಿಲ್ಲ. ಕಾರಣ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡದ ಪಾಲಿಗೆ ಒಂದು ಸತ್ತ ಸಂಸ್ಥೆ. ಅದು ವರ್ಷಕ್ಕೊಮ್ಮೆಯೋ, ಎರಡು ವರ್ಷಕ್ಕೊಮ್ಮೆಯೋ ನಡೆಸುವ ಸಾಹಿತ್ಯ ಸಮ್ಮೇಳನವೆಂಬ ಪುಢಾರಿ ಸಾಹಿತಿಗಳ ಸಮ್ಮೇಳನ ಸರ್ಕಾರದ ಖರ್ಚಿನಲ್ಲಿ ನಡೆಯುವ ಒಂದು ಭರ್ಜರಿ ಭೋಜನ ಕೂಟ. ಭೋಜನ ಅಂದರೆ ಬರೀ ಊಟ ಎಂಬ ಅರ್ಥದಲ್ಲಲ್ಲ. ಹಣ ಅಲ್ಲಿ ಚೆಲ್ಲಾಡುವ ದಿಕ್ಕುಗಳನ್ನು ನೋಡಿದರೇ ಇದರ ಅರ್ಥ ಗೊತ್ತಾಗುತ್ತದೆ. ಕನ್ನಡವನ್ನು ಕಾಪಾಡಲಾಗದ ಸರ್ಕಾರ ತನ್ನ ಸಾಂಸ್ಕೃತಿಕ ಬೇಜವಾಬ್ದಾರಿತನವನ್ನು ಮರೆಮಾಚಿಕೊಳ್ಳಲು ಈ ಭೋಜನ ಕೂಟಕ್ಕೆ ಕೋಟ್ಯಾಂತರ ಹಣ ನೀಡಿ ಕೃತಾರ್ಥವಾಗುತ್ತದೆ.

ಅದರೆ ಈಗ ನಾನು ಈ ಬಗ್ಗೆ ಬರೆಯುವಂತೆ ಮಾಡಿದ್ದು ಚಿಕ್ಕಮಗಳೂರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಆಯ್ಕೆಯ ವಿಷಯದಲ್ಲಿ ಸರ್ಕಾರ ತಲೆ ತೂರಿಸಿ ಅದಕ್ಕೆ ಹಣ ನೀಡಲು ನಿರಾಕರಿಸಿ ಅದನ್ನು ನಿಲ್ಲಿಸಲು ಮಾಡಿದ ಅರೆ ಯಶಸ್ವಿ ಪ್ರಯತ್ನ. ಈ ಸರ್ಕಾರ ಅದರ ಕನ್ನಡ ಮತ್ತು ಸಂಸ್ಕೃತಿ ಮಂತ್ರಿಯ ಹಿನ್ನೆಲೆ ಬಲ್ಲವರಿಗೆ, ಇದೇನೂ ಆಶ್ಚರ್ಯದ ಸಂಗತಿಯಲ್ಲ. ಇನ್ನು ಇದಕ್ಕೆ ಬೆಂಬಲವಾಗಿ ನಿಂತ ಕೇಂದ್ರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಬಗ್ಗೆ ನಾನು ಏನಾದರೂ ಹೇಳಿ ನನ್ನ ಘನತೆಯನ್ನು ಕಳೆದುಕೊಳ್ಳಲು ಇಚ್ಛಿಸುವುದಿಲ್ಲ. ಆದರೆ, ಕಲಬುರಗಿ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿರುವ ಕವಿ ವೆಂಕಟೇಶಮೂರ್ತಿಯವರಿಗೆ ಏನಾಗಿದೆ? ಎಂದು ನನಗೆ ಆಶ್ಚರ್ಯವಾಗುತ್ತಿದೆ. ಇಡೀ ವಿವಾದದ ಬಗ್ಗೆ ಕಮಕ್ ಕಿಮಕ್ ಅನ್ನದೆ ಈ ಎಲ್ಲಕ್ಕೂ ಮೌನ ಸಮ್ಮತಿ ನೀಡಿರುವ ವರ್ತನೆ ಅವರ ವ್ಯಕ್ತಿತ್ವದಲ್ಲಿ ಎದ್ದು ಕಾಣುತ್ತಿದ್ದ ಸೌಜನ್ಯವನ್ನು ಅನುಮಾನಾಸ್ಪದಗೊಳಿಸಿದೆ ಆರಕ್ಕೇರದ ಮೂರಕ್ಕೆ ಇಳಿಯದ ಅವರ ಸಾಧಾರಣ ಗುಣಮಟ್ಟದ ಸಾಹಿತ್ಯ ರಾಶಿ ಈಗ ಪ್ರಭುತ್ವ ಕುರಿತ ಈ ಅತಿ ವಿಧೇಯತೆಯಿಂದಾಗಿ ಗಬ್ಬುನಾತ ಹೊಡೆಯತೊಡಗಿದೆ.

ಎಚ್ಚೆಸ್ವಿ ಈ ವಿವಾದದ ಬಗ್ಗೆ ತಮ್ಮ ನಿಲುವೇನು ಎಂಬುದನ್ನಾದರೂ ಹೇಳಿ ತಮ್ಮ ಘನತೆಯನ್ನು ಉಳಿಸಿಕೊಳ್ಳಬಹುದಿತ್ತು. ಅದಕ್ಕೂ ಅವರಿಗೆ ಧೈರ್ಯವಿಲ್ಲದಂತಾಗಿದೆ. ಅವರ ಆಯ್ಕೆಯಾದಾಗ ಅದನ್ನು ಟೀಕಿಸಿದ ಕೆಲ ಸ್ವಯಂಘೋಷಿತ ಪ್ರಗತಿಪರರ ವರ್ತನೆ ನನಗೆ ಸಲ್ಲದ ಉಸಾಬರಿಯಾಗಿ ಕಂಡಿತ್ತು. ಈಗಲೂ ನನ್ನ ಅಭಿಪ್ರಾಯ ಅದೇ ಇದೆ. ಆದರೆ ಎಚ್ಚೆಸ್ವಿ ತಮ್ಮ ವರ್ತನೆಯ ಮೂಲಕ ಅವರ ಈ ವರ್ತನೆಯನ್ನು ಸಮರ್ಥಿಸಿರುವುದು ಮಾತ್ರ ನನ್ನಲ್ಲಿ ವಿಷಾದವುಂಟು ಮಾಡಿದೆ. ಮುಂದೊಮ್ಮೆ ಇವರು ನನಗೆದುರಾದರೆ ಹೇಗೆ ಅವರೊಡನೆ ವ್ಯವವಹರಿಸುವುದು ಎಂದು ಗೊತ್ತಾಗದೆ ಚಿಂತಿತನಾಗಿದ್ದೇನೆ.

ಇದು ಜಿಲ್ಲಾ ಅಥವಾ ತಾಲ್ಲೂಕು ಸಾಹಿತ್ಯ ಪರಿಷತ್ತುಗಳನ್ನು ಬೆಂಬಲಿಸುವ ಪ್ರಶ್ನೆ ಅಲ್ಲ. ಈ ವಿವಾದದ ಬಗ್ಗೆ ಅವುಗಳ ಮೌನವೇ ಅವುಗಳ ಯೋಗ್ಯತೆಯನ್ನು ಹೇಳುತ್ತಿವೆ. ಸರ್ಕಾರ ಇವುಗಳಿಗೆ ಸಮ್ಮೇಳನಗಳಿಗಾಗಿ ಅನುದಾನ ನೀಡುವುದನ್ನು ನಿಲ್ಲಿಸಿದ ದಿನ ಇವುಗಳಲ್ಲಿ ಹೆಚ್ಚಿನವು ಕುಸಿದು ಬೀಳುತ್ತವೆ. ಈ ಅನುದಾನಗಳ ಕಾರಣದಿಂದಲೇ ಭಜನೆ ಪುಸ್ತಕ ಬರೆದವರನ್ನು ಕೃಷಿ ಪಾಠ ಬರೆದ ಸರ್ಕಾರಿ ನೌಕರರನ್ನು, ಸ್ಥಳೀಯ ಮಂತ್ರಿಯೋ ಸಚಿವನೋ ಹೇಳಿದ ಕಾಗಕ್ಕ ಗುಬ್ಬಕ್ಕಗಳನ್ನೆಲ್ಲ ಸಮ್ಮೇಳನಾಧ್ಯಕ್ಷರನ್ನಾಗಿ ಮೆರೆಸಿ ಸಾರ್ವಜನಿಕವಾಗಿ ಸಾಹಿತ್ಯದ ಘನತೆಯನ್ನೇ ಇವರು ಕಳೆಯುತ್ತಿದ್ದಾರೆ. ಆದರೆ ಇದು ಏನೂ ಮಾಡಲಾಗದ ಸಾರ್ವತ್ರಿಕ ಅವನತಿಯ ಸ್ಥಿತಿ. ಆದರೂ ನಾನು ಚಿಕ್ಕಮಗಳೂರು ಸಾಹಿತ್ಯ ಸಮ್ಮೇಳನಕ್ಕೆ ನನ್ನ ಶಕ್ತ್ಯಾನುಸಾರ ಒಂದಿಷ್ಟು ಹಣ ಕಳಿಸಿ ನನ್ನ ಸಾಹಿತ್ಯ ಧರ್ಮ ಪಾಲಿಸಿದೆ. ಆ ಸ್ಥಳೀಯ ಪರಿಷತ್ತಿನ ಆಯ್ಕೆಯನ್ನು ಬೆಂಬಲಿಸಿ ಅಲ್ಲ; ಬದಲಿಗೆ, ಅದರ ಸ್ವಾಯತ್ತೆಯಲ್ಲಿ ಸರ್ಕಾರ ಮಾಡಿರುವ ಹಸ್ತಕ್ಷೇಪವನ್ನು ಪ್ರತಿಭಟಿಸಿ; ಮತ್ತು ಆ ಸ್ಥಳೀಯ ಪರಿಷತ್ತಿನ ಕೆಚ್ಚನ್ನು ಮೆಚ್ಚಿ. ಆದರೆ ಸಮ್ಮೇಳನ ಒಂದೇ ದಿನಕ್ಕೆ ಮೊಟಕುಗೊಂಡು ಮುಗಿದದ್ದು ಮಾತ್ರ ಆಶ್ಚರ್ಯಕರವಷ್ಟೇ ಅಲ್ಲ. ವಿಷಾದಕರ. ಪೋಲೀಸರು ಬಾಂಬ್ ಭೀತಿಯಿದೆಯೆಂದೂ, ಆದ್ದರಿಂದ ಸಮ್ಮೇಳನಕ್ಕೆ ರಕ್ಷಣೆಯ ಭರವಸೆ ಕೊಡಲಾಗುವುದಿಲ್ಲ ಎಂದುದಕ್ಕೆ ಎರಡನೆಯ ದಿನಗಳ ಕಾರ್ಯಕಲಾಪಗಳನ್ನು ರದ್ದು ಮಾಡಲಾಯಿತೆಂದೂ ಹೇಳಲಾಗುತ್ತಿದೆ. ಆದರೆ ಮೊದಲ ದಿನದ ಕಾರ್ಯಕಲಾಪಗಳಿಗೂ ಪೋಲೀಸ್ ರಕ್ಷಣೆಯ ಖಚಿತ ಭರವಸೆಯೇನೂ ಇರಲಿಲ್ಲವಲ್ಲ? ಹಾಗಿದ್ದಲ್ಲಿ ಮೊದಲ ದಿನ ತೋರಿದ ಕೆಚ್ಚು ಎಲ್ಲಿ ಹೋಯಿತು? ಇದು ರಾಜಿಯೋ, ಅರ್ಧ ಗೆದ್ದ ಅಲ್ಪ ತೃಪ್ತಿಯೋ, ಪ್ರಭುತ್ವದ ಬೆದರಿಕೆಯ ಎದುರಿನ ಅಸಹಾಯಕತೆಯೋ ತಿಳಿಯದು. ಯಾವುದೇ ಆಗಿದ್ದರೂ, ಅದು ಆತಂಕಕಾರಿಯೇ. ಅಂದಹಾಗೆ ಶೃಂಗೇರಿಯ ಕಾಂಗ್ರೆಸ್ ಶಾಸಕರು ಏನು ಮಾಡುತ್ತಿದ್ದರೋ?

## ಅಗಲಿದ ಇಬ್ಬರು ಹಿರಿಯರ ಕೆಲ ವೈಯಕ್ತಿಕ ನೆನಪುಗಳು



ನಾನು ದೆಹಲಿ ಆಕಾಶವಾಣಿಯ ವಾರ್ತಾ ವಿಭಾಗ ಸೇರಲು ೧೯೭೦ರಲ್ಲಿ ನಾನು ಭಾಗವಹಿಸಿದ್ದ ಸಂದರ್ಶನದಲ್ಲಿದ್ದ ಇಬ್ಬರು ಸ್ಥಳೀಯ ಪರಿಣತರಲ್ಲಿ ಎಂ. ಚಿದಾನಂದಮೂರ್ತಿಯವರೂ ಒಬ್ಬರು. ಇನ್ನೊಬ್ಬರು ಖಾದ್ರಿ ಶಾಮಣ್ಣ. ಸಂದರ್ಶನದ ಸಮಿತಿಯ ಅಧ್ಯಕ್ಷರಾಗಿದ್ದ ದೆಹಲಿಯ ವಾರ್ತಾ ವಿಭಾಗದ ನಿರ್ದೇಶಕರು ಈ ಸ್ಥಳೀಯ ಪರಿಣತರತ್ತ ನೋಡುತ್ತಾ ಇವರಾರು ನಿಮಗೆ ಗೊತ್ತಾ? ಎಂದು ನನ್ನನ್ನು ಕೇಳಿದಾಗ ನಾನು ಇಬ್ಬರನ್ನೂ ಸುಲಭವಾಗಿ ಗುರುತಿಸಿದೆ. ಇದರಿಂದ ಹರ್ಷಚಿತ್ತರಾದಂತೆ ಕಂಡ ಖಾದ್ರಿಯವರು ನಗುತ್ತಾ 'ನನ್ನನ್ನು ಬಿಡಿ ನನ್ನ ಆಕಾರದಿಂದಲೇ ಬಹಳ ಜನ ಗುರುತಿಸುವರು. ಆದರೆ ಇವರು ಹೇಗೆ ಗೊತ್ತು?' ಎಂದು ಎದ್ದು ಕಾಣದ ಸಣಕಲ ದೇಹದ ಚಿದಾನಂದಮೂರ್ತಿಯವರತ್ತ ಬೆರಳು ಮಾಡಿದರು. ನಾನು ಗಣಿತಶಾಸ್ತ್ರ ಸ್ನಾತಕೋತ್ತರ ಶಿಕ್ಷಣ ಪಡೆದ ಸೆಂಟ್ರಲ್ ಕಾಲೇಜಿನಲ್ಲಿ ಅವರನ್ನು ಆಗಾಗ್ಗೆ ನೋಡುತ್ತಿದ್ದುರಿಂದ ಮತ್ತು ಅವರು ಆಗ ತಾನೇ ಅಮೆರಿಕಾದಿಂದ ಬಂದು ಕಾಲೇಜಿನ ಆವರಣದಲ್ಲಿ ವಿಶೇಷ ಸುದ್ದಿಯ ವಸ್ತುವಾಗಿದ್ದುದರಿಂದ ಎಲ್ಲರಂತೆ ನನ್ನ ಗಮನವನ್ನೂ ಅವರು ಸೆಳೆದಿದ್ದರು. ಅದನ್ನು ನಾನು ಹೇಳಿದಾಗ ಗಣಿತಶಾಸ್ತ್ರದ ವಿದ್ಯಾರ್ಥಿಯಾಗಿಯೂ ನಾನು ಅವರನ್ನು ಗಮನಿಸಿದ್ದೆ ಎಂಬ ಸಂಗತಿಯಿಂದ ಸ್ವಲ್ಪ ಖುಷಿಯಾದಂತೆ ಕಂಡ ಮೂರ್ತಿಯವರು, ಸ್ವಲ್ಪ ಕಿಚಾಯಿಸುವಂತೆಯೇ, 'ಬರೀ ನನ್ನನ್ನು ಗಮನಿಸಿದ್ದಿರೋ ಅಥವಾ ನನ್ನ ಬರಹಗಳನ್ನೂ ಗಮನಿಸಿದ್ದೀರೋ?' ಎಂದು ಕೇಳಿದರು. ನಾನೋ ಅದಕ್ಕೇ ಕಾಯುತ್ತಿದ್ದಂತೆ ಸ್ವಲ್ಪ ಹಿಂದಷ್ಟೇ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ ಬನಶಂಕರಿ ಪೆಟ್ಟಿಗೆ ಕುರಿತ ಅವರ ಲೇಖನದ ಪ್ರಸ್ತಾಪ ಮಾಡಿ ನೀವು ಕ್ಯಾಲೆಂಡರ್ ಕದ್ದ ಬಗ್ಗೆ ಬರೆದ ಲಘು ಶೈಲಿಯ ಲೇಖನವನ್ನೂ ಓದಿರುವೆ ಎಂದು ನನ್ನ ಮಾತನ್ನು ಮುಗಿಸುವ ಮೊದಲೇ ಅವರು ಮುಖ ನಾಚಿ ನೀರಾದಂತಾಗಿ, 'ಸಾಕಪ್ಪ ಗೊತ್ತಾಯಿತು. ಇಲ್ಲಿ ಅದರ ವಿವರ ಬೇಡ' ಎಂದು ನನ್ನನ್ನು ತಡೆದುಬಿಟ್ಟರು. ಮೂರ್ತಿಯವರ ಈ ಮಾತಿನಿಂದ ಉಳಿದಿಬ್ಬರು ಸಂದರ್ಶಕರಿಗೆ ಕೊಂಚ ಆಶ್ಚರ್ಯವಾಯಿತಾದರೂ ಸಂದರ್ಶನ ಬೇರೆ ವಿಷಯಗಳಿಗೆ ತಿರುಗಿ ಮುಂದುವರೆಯಿತು.

ಚಿದಾನಂದ ಮೂರ್ತಿಯವರು ನನ್ನನ್ನು ತಡೆಯಲು ಕಾರಣ, ಅವರು ಅಮೆರಿಕಾದಿಂದ ಬರುವಾಗ ವಿಮಾನದಲ್ಲಿ ಸಹ ಪ್ರಯಾಣಿಕರೊಬ್ಬರಿಂದ ಕದ್ದ ಆ ಕ್ಯಾಲೆಂಡರ್ ನಗ್ನ ಸುಂದರಿಯ ಚಿತ್ರವಿದ್ದುದಾಗಿತ್ತು. ಅದನ್ನು ಅವರು ನಿಸ್ಸಂಕೋಚವಾಗಿ ಮುಕ್ತವಾಗಿ ತಮ್ಮ ಈ ಲೇಖನದಲ್ಲಿ ಹೇಳಿ ತಮ್ಮ ವ್ಯಕ್ತಿತ್ವವನ್ನೂ ಲಘು ಶೈಲಿಯಲ್ಲೇ ಆದರೂ ಬಿಚ್ಚಿಟ್ಟಿದ್ದರು. ಈ ಕಾರಣದಿಂದಾಗಿಯೇ ಅವರು ನನಗೆ ಮೆಚ್ಚುಗೆಯಾಗಿದ್ದರು. ಆದರೆ ಅದು ಹಿಂದು ಮುಂದಿಲ್ಲದೆ ಇಲ್ಲಿ ಪ್ರಸ್ತಾಪವಾದರೆ ಅಭಾಸವಾದೀತೆಂದು ಅದನ್ನು ತಡೆದಿದ್ದರು.

ಆನಂತರದ ವರ್ಷಗಳಲ್ಲಿ ಚಿದಾನಂದಮೂರ್ತಿಯವರು ನನಗೆ ಆತ್ಮೀಯ ಹಿರಿಯ ಸ್ನೇಹಿತರಂತಾದರು. ದೆಹಲಿಗೆ ಬಂದಾಗ ನನ್ನ ಕೊಠಡಿಯಲ್ಲೇ ಉಳಿದು ಪ್ರೀತಿಯಿಂದ ನನ್ನ ಉಪಚಾರಗಳನ್ನು ಸ್ವೀಕರಿಸುತ್ತಿದ್ದರು. ಆದರೆ ಕೆಲ ಕಾಲದ ನಂತರ ಅವರ ಕನ್ನಡ ಶಕ್ತಿ ಕೇಂದ್ರ ಹೋರಾಟದ ಗುರಿಗಳು ಮತ್ತು ರೀತಿನೀತಿಗಳು ಹಾಗೂ ಆನಂತರದಲ್ಲಿ ಅವರ ಹಿಂದೂವಾದಿ ರಾಜಕೀಯ ಒಲವು ನಿಲುವುಗಳ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದವನಾಗಿ ನಾನು ಅವರ ಸ್ನೇಹದಿಂದಲ್ಲದಿದ್ದರೂ ಆತ್ಮೀಯತೆಯಿಂದ ಕ್ರಮೇಣ ದೂರವಾದೆ. ಅವರ ಕನ್ನಡ ಶಕ್ತಿ ಕೇಂದ್ರವನ್ನು ನಾನೊಮ್ಮೆ–ಅದರ ಅನ್ಯ ಭಾಷಿಕರ ವಿರೋಧ ನೀತಿಗಾಗಿ–ಕನ್ನಡ ದುಷ್ಟ ಶಕ್ತಿ ಕೇಂದ್ರವೆಂದು ಕರೆದುದನ್ನು ಕೊನೆವರೆಗೂ ಅವರು ಕ್ಷಮಿಸಲಿಲ್ಲ!



ಇನ್ನು ನಾನು ಪೇಜಾವರ ಶ್ರೀಗಳನ್ನು ಮೊದಲ ಬಾರಿಗೆ ಮುಖತಃ ಕಂಡದ್ದು ಸುಮಾರು ಮುವ್ವತ್ತು ವರ್ಷಗಳ ಹಿಂದೆ ದ.ಕ.ದ ಬಿಳಿನೆಲೆ ಎಂಬ ಗ್ರಾಮದಲ್ಲಿನ ಒಂದು ಕಾರ್ಯಕ್ರಮಕ್ಕೆ ಗೆಳೆಯ ಲಕ್ಷ್ಮೀಶ ತೋಳ್ಪಾಡಿಯವರು ನನ್ನನ್ನು ಆಹ್ವಾನಿಸಿದಾಗ ಅಲ್ಲಿ ನಡೆದ ಐತಿಹಾಸಿಕ ಕಾದಂಬರಿಗಳನ್ನು ಕುರಿತ ವಿಚಾರ ಸಂಕಿರಣದಲ್ಲಿ ನಾನು ಮಾಸ್ತಿಯವರ 'ಚೆನ್ನಬಸವ ನಾಯಕ' ಕುರಿತು ಮಾತಾಡಿದ ನೆನಪು. ಆ ಕಾರ್ಯಕ್ರಮದ ಸನ್ನಿಧಾನ ಪೇಜಾವರರದ್ದು. ಹಿಂದೆ ನಾನು ಮಂಗಳೂರು ಆಕಾಶವಾಣಿಯಲ್ಲಿದ್ದಾಗ ಉಡುಪಿಯ ಪರ್ಯಾಯ ಉತ್ಸವವನ್ನು ವರದಿ ಮಾಡಲು ಹೋಗಿ ಅಲ್ಲಿ ಮಠಾಧೀಶರುಗಳ ಜಂಬರುಗಳನ್ನೆಲ್ಲ ನೋಡಿ ಕಂಗೆಟ್ಟಿದ್ದ ನಾನು (ನಾನೇನು. ಆ ಉತ್ಸವಕ್ಕೆ ಅತಿಥಿಗಳಾಗಿ ಬಂದಿದ್ದ ಆಗಿನ ರಾಷ್ಟ್ರಪತಿ ಆರ್ ವೆಂಕಟರಾಮನ್ ಅವರು ವೃದ್ಧ ಮಠಾಧೀಶರೊಬ್ಬರ ರುದ್ರ ಇಂಗ್ಲಿಷ ಭಾಷಣ ಕೇಳುತ್ತಾ ನಗು ತಾಳಲಾರದೆ ಮುಖಮುಚ್ಚಿಕೊಂಡು ಕೂತಿದ್ದುದು ನನಗಿನ್ನೂ ನೆನಪಿದೆ) ಪೇಜಾವರರ ಬರವನ್ನು ಕೊಂಚ ಗಾಬರಿಯಿಂದಲೇ ಎದುರು ನೋಡುತ್ತಾ ಕೂತಿದ್ದೆ. ಆದರೆ ನನ್ನ ಎಲ್ಲ ನಿರೀಕ್ಷೆಗಳಿಗೆ ವಿರುದ್ಧವಾಗಿ ಅಂಬಾಸಿಡರ್ ಕಾರ್‌ನಿಂದ ಇಳಿದ ಅವರು ನೇರವಾಗಿ ವೇದಿಕೆಯ ಮೇಲೆ ನನ್ನ ಪಕ್ಕದ ಕುರ್ಚಿಯಲ್ಲೇ, ಅವರ ಜೊತೆ ಬಂದ ಸಹಾಯಕ ಸಂನ್ಯಾಸಿಯೊಬ್ಬರು ತಂದು ಹಾಸಿದ ಕೃಷ್ಣಾಜಿನದ ಮೇಲೆ ಆಸೀನರಾಗಿ ನನ್ನತ್ತ ಆತ್ಮೀಯ ಮುಗುಳ್ನಗೆ ಬೀರಿದರು. ಈ ಸರಳತೆ ನನ್ನನ್ನು ಸುಸ್ತು ಮಾಡಿತೆಂದೇ ಹೇಳಬೇಕು.

ಹಾಸನದಿಂದ ಈ ಕಾರ್ಯಕ್ರಮಕ್ಕೆ ಹೊರಟಿದ್ದ ನಾನು ಮತ್ತು ನನ್ನ ಪತ್ನಿಯೊಂದಿಗೆ ನಮ್ಮ ಪರಿಚಿತ ಅವಿವಾಹಿತ ಯುವತಿಯೊಬ್ಬರೂ ಬಂದಿದ್ದರು. ಅವರು ಆಗಿನ ಸುಬ್ರಮಣ್ಯ ಸ್ವಾಮೀಜಿಯ ಅಭಿಮಾನಿಯಾಗಿದ್ದುದರಿಂದ ಕಾರ್ಯಕ್ರಮದ ನಂತರ ನಮ್ಮನ್ನೆಲ್ಲ ಲಕ್ಷ್ಮೀಶರು ಸುಬ್ರಹ್ಮಣ್ಯ ಮಠಕ್ಕೆ ಕರೆದೊಯ್ದರು. ಆಗ ಇಳಿ ಸಂಜೆಯ ಹೊತ್ತು. ಮಠದ ಹಜಾರದಲ್ಲಿ ವಿದ್ಯಾಭೂಷಣರು ಸಿಕ್ಕರು. ಪರಸ್ಪರ ಪರಿಚಯವಾಯಿತು. ನಮ್ಮೊಡನೆ ಬಂದಿದ್ದ ಅವಿವಾಹಿತ ಯುವತಿ ವಿದ್ಯಾಭೂಷಣರೊಂದಿಗೆ ಅಭಿಮಾನಪೂರ್ವಕವಾಗಿ ಮಾತಾಡಲು ಶುರು ಮಾಡುತ್ತಿದ್ದಂತೆ ಅದೆಲ್ಲಿದ್ದರೋ ಪೇಜಾವರರು ಗಕ್ಕನೆ ಅಲ್ಲಿ ಹಾಜರಾಗಿ ಆ ಯುವತಿ ಮತ್ತು ವಿದ್ಯಾಭೂಷಣರ ಮಧ್ಯೆ ಅಡ್ಡವಾಗಿ ನಿಂತು ಬಿಟ್ಟು ಮಾತಿನ ದಿಕ್ಕನ್ನೇ ಬದಲಿಸಿಬಿಟ್ಟರು! ನಮ್ಮ ಉಭಯಕುಶಲೋಪರಿ ವಿಚಾರಿಸುತ್ತಾ, ನನ್ನ ಬಣ್ಣ ನೋಡಿಯೇ ಈತ ತಮ್ಮಮ್ಮವನಲ್ಲವೆಂದು ಊಹಿಸಿ ನನ್ನ ಪತ್ನಿಯ ಪೂರ್ವಾಪರ ವಿಚಾರಿಸಿ ಅಲ್ಲಿಯೂ ನಿರಾಶರಾಗುವ ಹೊತ್ತಿಗೆ ಆ ಯುವತಿ ಮತ್ತು ವಿದ್ಯಾಭೂಷಣರ ನಡುವಣ ಮಾತುಕತೆ ಸ್ಥಗಿತಗೊಂಡಿತ್ತು.

ಆದರೆ ಛಲ ಬಿಡದ ಆ ಯುವತಿ ತಮಗೆ ಅಡ್ಡ ನಿಂತ ಪೇಜಾವರರ ಪಕ್ಕದಿಂದ ನೋಟ ಕೀಲಿಸಿ ವಿದ್ಯಾಭೂಷಣರೊಂದಿಗೆ ಮಾತಾಡಲು ಯತ್ನಿಸಿದಷ್ಟೂ ಪೇಜಾವರರು ಆ ಯುವತಿಗೆ ವಿದ್ಯಾಭೂಷಣರು ನೇರವಾಗಿ ಕಾಣದಂತೆ ತಾವು ಮತ್ತಷ್ಟು ಪಕ್ಕಕ್ಕೆ ಸರಿಯುತ್ತಿದ್ದರು. ಈ ಕುತೂಹಲಕರ ದೃಶ್ಯವನ್ನು ನಾವು ಆನಂದಿಸುತ್ತಿದ್ದಂತೆ ಆ ಯುವತಿಗೂ ತಾವಿಬ್ಬರು ಮಾತಾಡುವುದು ಪೇಜಾವರರಿಗೆ ಇಷ್ಟವಿಲ್ಲವೆಂದು ಕೊನೆಗೂ ಅರಿತು ತನ್ನ ಪ್ರಯತ್ನಗಳನ್ನು ಕೈಬಿಟ್ಟು ನಮ್ಮೊಂದಿಗೆ ಮಠದ ಆವರಣದಲ್ಲಿ ಸುತ್ತಾಟಕ್ಕೆ ಬಂದರು. ಆದರೇನು ವಿದ್ಯಾಭೂಷಣರನ್ನು ಸಂನ್ಯಾಸಿಯಾಗಿ ಉಳಿಸಿಕೊಳ್ಳು ಸಾಧ್ಯವಾಹಲಿಲ್ಲ ಎಂಬುದು ಈಗ ಸರ್ವವಿದಿತ ವಿಚಾರ.

ನಂತರ ನನಗೂ ಲಕ್ಷ್ಮೀಶರಿಗೂ ಒಂದು ಶಬ್ದದ ಅರ್ಥ ಸಂದಿಗ್ಧತೆ ಉಂಟಾಗಿ ಲಕ್ಷ್ಮೀಶರ ಸಲಹೆಯತ ಮೇರೆಗೆ ಅದನ್ನು ಪರಿಹರಿಸಿಕೊಳ್ಳಲು ಪೇಜಾವರರನ್ನು ಮಠದ ಆವರಣದಲ್ಲಿ ಹುಡುಕಿದೆವು. ಆದರೆ ಅವರು ಯಾರೊಂದಿಗೂ ಗುಪ್ತ ಸಮಾಲೋಚನೆಯಲ್ಲಿ ತೊಡಗಿದ್ದಾರೆಂದು ತಿಳಿದು ನಮ್ಮ ಪ್ರಯತ್ನ ಕೈಬಿಟ್ಟೆವು

ಆ ರಾತ್ರಿ ನಮಗೆ ಮಠದ ಸನಿಹದಲ್ಲೇ ಇದ್ದ ವಿದ್ಯಾಭೂಷಣರ (ಪೂರ್ವಾಶ್ರಮದ) ತಾಯಿಯವರ ಮನೆಯಲ್ಲಿ ಊಟ. ಅಲ್ಲಿಗೆ ಬಂದ ಪೇಜಾವರರು ಅಡುಗೆಯ ಉಸ್ತುವಾರಿ ವಹಿಸಿಕೊಂಡಿದ್ದಲ್ಲದೆ ನಮ್ಮನ್ನು ಆತ್ಮೀಯವಾಗಿ ಉಪಚರಿಸಿದರು. ಆ ಉಪಚಾರದ ಮಧ್ಯೆ ನಮ್ಮ ಶಬ್ದಾರ್ಥ ಸಂದಿಗ್ಧತೆ ಮರೆತು ಹೋಗಿತ್ತು! ಅಂದಿನ ಊಟದಲ್ಲಿನ ಒಂದು ಸಿಹಿ ತಿಂಡಿಯ ಸವಿ ನನ್ನ ನಾಲಗೆಯ ಮೇಲೆ ಬಹುಕಾಲ ಉಳಿದಿತ್ತು. ಆದರೆ ಕಳೆದ ಮೂರು ದಶಕಗಳ ಕಾಲ ಸಂಘ ಪರಿವಾರದ ಮತೀಯ ರಾಜಕಾರಣಕ್ಕೆ ಬೆಂಬಲವಾಗಿ ನಿಂತಿರುವ ವಿಶ್ವ ಹಿಂದೂ ಪರಿಷತ್ತಿನ ಅವರ ವಕ್ತಾರಿಕೆಯು ಅವರ ಕೆಲವು ಅಭಿಮಾನಿಗಳು ಹೇಳುವ ಅವರ ಗಾಂಧಿ ಪ್ರೀತಿ ಕೇವಲ ತೋರಿಕೆಯದೇನೋ ಎಂಬ ಅನುಮಾನ ಹುಟ್ಟಿಸುತ್ತಾ ಆ ಸವಿಯನ್ನು ಸಂಪೂರ್ಣ ಅಳಿಸಿ ಹಾಕಿತು.

**–ಡಿ.ಎಸ್. ನಾಗಭೂಷಣ**

**೫ನೇ ಪುಟದಿಂದ)**

ಸಂಪನ್ಮೂಲಗಳು ಉತ್ಪಾದನೆಯಾಗುವ ದರವನ್ನು ಧಿಕ್ಕರಿಸಿ ಮುನ್ನಡೆಯುತ್ತಿದ್ದೇವೆ. ಮುಂದೆ ಏನಾದರೂ ಪರವಾಗಿಲ್ಲ, ಇಂದೇ ಸಾಧ್ಯವಾದಷ್ಟು ಬಳಸಿಬಿಡಬೇಕು ಎನ್ನುವ ದಾರ್ಷ್ಟ್ಯ ಮತ್ತು ಮೂರ್ಖತನ! ಸಸ್ಯ ಹಾಗೂ ಪ್ರಾಣಿಜನ್ಯ ವಸ್ತುಗಳು ಭೂತಳ ಸೇರಿ, ಅಮ್ಲಜನಕರಹಿತ ಸ್ಥಿತಿಯಲ್ಲಿ ಕೋಟ್ಯಾಂತರ ವರ್ಷಗಳ ಅವಧಿಯಲ್ಲಿ ಉತ್ಪಾದನೆಯಾಗುವ ಪೆಟ್ರೋಲಿಯಂ ಉತ್ಪನ್ನಗಳನ್ನು ಕೆಲವೇ ವರ್ಷಗಳಲ್ಲಿ ಉರಿಸಿಬಿಡುತ್ತಿದ್ದೇವೆ. ಇಂಧನವನ್ನೆಲ್ಲ ಹೀಗೆ ಒಮ್ಮೆಲೆ ಅಗಾಧ ಪ್ರಮಾಣದಲ್ಲಿ ಸುಡುತ್ತಿರುವದರಿಂದಾಗಿ ಹೊರಸೂಸುವ ಅನಿಲಗಳನ್ನು ವಾತವರಣಕ್ಕೆ ಒಗ್ಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಂದರೆ ನೈಸರ್ಗಿಕ ಚಕ್ರೀಯ ವ್ಯವಸ್ಥೆಗೆ ಅಗಾಧ ಪ್ರಮಾಣದ ಇಂಗಾಲ, ಸಾರಕನಕ, ಗಂಧಕ ಇತ್ಯಾದಿ ಸಂಯುಕ್ತ ಅನಿಲಗಳನ್ನು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹೀಗೆ ಅವು ಚಕ್ರದಿಂದ ಬೇರ್ಪಟ್ಟು, ತ್ಯಾಜ್ಯವಾಗಿ ಸಂಗ್ರಹಗೊಳ್ಳುತ್ತಿವೆ. ಹೀಗಾಗಿ, ಇಂದಿನ ಹವಾಮಾನ ಬದಲಾವಣೆಯನ್ನು, ನೈಸರ್ಗಿಕ ಸಂಪತ್ತನ್ನು ಏಕಮುಖವಾಗಿ ಬಳಸುವ ಇಂದಿನ ಅಭಿವೃದ್ಧಿ ವಿಧಾನಗಳ ಪರಿಣಾಮ ಎನ್ನಬಹುದು. ನಿಸರ್ಗಚಕ್ರದ ಲಯವನ್ನು ಮೀರಿ ಉಂಟಾಗುತ್ತಿರುವ ತ್ಯಾಜ್ಯದ ಪರಿಣಾಮವಿದು. ನೆಲ, ಜಲ, ವಾಯು– ಈ ಮೂರು ಮಾಲಿನ್ಯಗಳು ಇಂಥ ಏಕಮುಖೀ ಸಂಪನ್ಮೂಲಗಳ ಬಳಕೆಯ ಪರಿಣಾಮವೇ.

ಒಂದು ಹಂತದವರೆಗೆ ಈ ಮಾಲಿನ್ಯವನ್ನು ಈ ಭೂಮಿ ತಾಳಿಕೊಂಡಿತು. ಆದರೆ, ಆ 'ಧಾರಣಾ ಸಾಮರ್ಥ್ಯ'ವನ್ನೂ ಮೀರಿ ನಮ್ಮ ಅಭಿವೃದ್ಧಿ ರಥ ಸಾಗಿದೆ. ಹೀಗಾಗಿಯೇ, ವಾಹನಗಳ ಹಾಗೂ ಕೈಗಾರಿಕೆಗಳು ಹೊರಸೂಸುವ ಹೊಗೆ ಸೇರಿ, ದೆಹಲಿಯ ಗಾಳಿ ಉಸಿರಾಡಲೂ ಅಪಾಯಕಾರಿಯಾಗಿದೆ. ತ್ಯಾಜ್ಯವನ್ನು ಅರಗಿಸಿಕೊಳ್ಳುವ ನೈಸರ್ಗಿಕ ಸಾಮರ್ಥವನ್ನೂ ಮೀರಿ, ತುಂಗಾ ಹಾಗೂ ಭದ್ರಾ ನದಿಗಳಿಗೆ ಪಟ್ಟಣ–ನಗರಗಳ ಕೊಳಚೆ ಸೇರುತ್ತಿರುವದರಿಂದಲೇ, ಅದರ ನೀರು ಈಗ ಕುಡಿಯಲೂ ಯೋಗ್ಯವಲ್ಲ. ಈ ಕೆಲವು ದಶಕಗಳಿಂದ ಬಯಲುನಾಡಿನ ಬಹುತೇಕ ಪ್ರದೇಶದ ಮಣ್ಣಿಗೆ ಮಿತಿಮೀರಿ ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಸುರಿದದ್ದರಿಂದ, ಅಲ್ಲಿ ಈಗ ಬೆಳೆ ಬೆಳೆಯುವದೇ ದುಸ್ತರವಾಗುತ್ತಿದೆ. ಅಂದರೆ, ಈಗ ನಮ್ಮ ನೆಲ–ಜಲ–ಗಾಳಿಯ ಸ್ವಯಂನಿರ್ವಹಣಾ ಸಾಮರ್ಥ್ಯ ಸಂಪೂರ್ಣ ಕುಸಿಯುತ್ತಿದೆ. ನೈಸರ್ಗಿಕ ಸಂಪನ್ಮೂಲಗಳ ಅವೈಜ್ಞಾನಿಕ, ಹಾಗೂ ಅತಿವೇಗದ ಬಳಕೆಯೇ, ಭೂಮಿಯು ಎದುರಿಸುತ್ತಿರುವ ಹವಾಮಾನ ಬದಲಾವಣೆಗೆ ಮುಖ್ಯ ಕಾರಣ. ನಮ್ಮ ಜೀವನ ದೃಷ್ಟಿ ಹಾಗೂ ಜೀವನ ವಿಧಾನಗಳ ವ್ಯಕ್ತರೂಪವಾದ "ಅಭಿವೃದ್ಧಿ ವಿಧಾನಗಳು", ಶಿಸ್ತು ಮತ್ತು ವಿವೇಕವನ್ನು ಕಳೆದುಕೊಂಡ ಪರಿಣಾಮವಿದು.

ನಾವು ಇಂದು ಎದುರಿಸುತ್ತಿರುವ ಈ ಪರಿಸರ ಬಿಕ್ಕಟ್ಟುಗಳು ಜನರಿಗೆ ಅರಿವಿಗೆ ಬರುತ್ತಿದೆ. ಹಾಗಾದರೆ, ಈ ಅಪಾಯದ ದಾರಿಯ ಕುರಿತು, ಪ್ರಭುಗಳು ಮತ್ತು ಪ್ರಜೆಗಳಿಗೆ ಏಕೆ ಅರ್ಥವಾಗುತ್ತಿಲ್ಲ? ಉತ್ತರ ಸರಳ. ಹಣದ ಮೋಹದಲ್ಲಿ ಬಿದ್ದಿರುವ ಆಳುವ ವ್ಯವಸ್ಥೆ ಮತ್ತು ಉದ್ಯಮಲೋಕ, ಭವಿಷ್ಯದ ಚಿಂತನೆ ಬಿಟ್ಟು, ಸದ್ಯದ ಲಾಭದಲ್ಲಿ ಮಾತ್ರ ದೃಷ್ಟಿನೆಟ್ಟಿದೆ. ಇನ್ನು ಜನಸಾಮಾನ್ಯರಾದರೋ, ಆಧುನಿಕ ಜೀವನ ವಿಧಾನಗಳು ತಂದುಕೊಟ್ಟಿರುವ 'ಸುಖ'ಕ್ಕೆ ಕಟ್ಟುಬಿದ್ದು ತಮ್ಮ ವಿವೇಕ ಕಳೆದುಕೊಳ್ಳುತ್ತಿದ್ದಾರೆ. ಒಂದು ಮೈಲಿ ನಡೆಯಲೂ ಆರೋಗ್ಯವಂತನೊಬ್ಬ ವಾಹನವನ್ನೇ ಅವಲಂಬಿಸುತ್ತಾನೆ ಎಂದಾದರೆ, ಅದು ಮೂರು ಗಂಭೀರ ಪರಿಣಾಮಗಳನ್ನು ಉಂಟುಮಾಡಬಲ್ಲದು. ಒಂದು, 'ವಾಹನ ಸುಖಕ್ಕೆ ಬಿದ್ದು, ನಡೆದಾಟ ನೀಡುವ ಆರೋಗ್ಯ ಕಳೆದುಕೊಳ್ಳುವದು. ಎರಡು, ಹಾಗೆ ಇಂಧನ ಸುಡುವದರಿಂದ, ಮಾಲಿನ್ಯಕಾರಕ ಹೊಗೆಸೂಸಿ ವಾತಾವರಣದ ಮಾಲಿನ್ಯಕ್ಕೆ ಕಾರಣನಾಗುವದು. ಮೂರನೇಯದು, ಇನ್ನಾವುದೋ ಅಗತ್ಯ ಕಾರಣಕ್ಕೆ ಬಳಸಬಹುದಾಗಿದ್ದ ವಾಹನ ಹಾಗೂ ಇಂಧನದ ಅನಗತ್ಯ ಬಳಕೆಗೆ ಕಾರಣನಾಗಿದ್ದು!

ಹವಾಮಾನ ಬದಲಾವಣೆಯ ವೈಪರಿತ್ಯವನ್ನು ಈಗಲಾದರೂ ಎದುರಿಸಲು ಬೇಕಾದದ್ದು, ನಮ್ಮ ಅಭಿವೃದ್ಧಿ ವಿಧಾನಗಳ' ಬದಲಾವಣೆ. ಆದರೆ. ವಾಣಿಜ್ಯಲೋಕ ಕೈಗಿಡಿತ್ತಿರುವ ಹೊಸ ಹೊಸ ಸಲಕರಣೆ ಹಾಗೂ ಸೌಲಭ್ಯಗಳು ಹುಟ್ಟಿಹಾಕುತ್ತಿರುವ 'ಭ್ರಾಮಕ ಸುಖಕ್ಕೆ ದಾಸರಾಗುತ್ತಿರುವ ನಮ್ಮನ್ನು, "ನಿಸರ್ಗ ಹಾಗೂ ಸಮುದಾಯ ಸ್ನೇಹಿ" ಅಭಿವೃದ್ಧಿಯೆಡೆಗೆ ಕರೆದೊಯ್ಯುವ ವಿವೇಕವನ್ನು ಹೇಗೆ ಕಂಡುಕೊಳ್ಳೋಣ?



**(ವೃತ್ತಿಯಿಂದ ಸಸ್ಯಶಾಸ್ತ್ರ ಮತ್ತು ಜೈವಿಕ ತಂತ್ರಜ್ಞಾನದ ಅಧ್ಯಾಪಕರಾಗಿದ್ದ ಕೇಶವ ಕೊರ್ಸೆಯವರು ಈಗ ತಮ್ಮೂರು ಶಿರ್ಸಿಯಲ್ಲಿ ನೈಸರ್ಗಿಕ ಸಂಪನ್ಮೂಳ ಸಂರಕ್ಷಣೆ ಆಧಾರಿತ ಸುಸ್ಥಿರ ಅಭಿವೃದ್ಧಿ ವಿಧಾನಗಳ ಬಗ್ಗೆ ಸಂಶೋಧನೆ, ಜನಜಾಗೃತಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ.)**



# ಪರಮಹಂಸರೊಡನೆ ಮಾತು-ಕತೆ

ಭಾರತದ ನವೋದಯಕ್ಕೆ ನಾಂದಿ ಹಾಡಿತೆಂದು ಹೇಳಲಾಗುವ ವಂಗ ನವೋದಯದ ದಿಗಂತದ ಧೃವ ತಾರೆ ರಾಮಕೃಷ್ಣ ಪರಮಹಂಸರು. ಬಾಲ್ಯದಲ್ಲಿ ತನ್ನ ಹಳ್ಳಿಯ ಗದ್ದೆಕೋಗಿನಲ್ಲಿ ಆಕಾಶದಲ್ಲಿ ಹಾರುತ್ತಿದ್ದ ಬೆಳ್ಳಕ್ಕಿಗಳ ಹಿಂಡೊಂದನ್ನು ನೋಡಿ ಲೋಕೋತ್ತರ ಸತ್ಯಕ್ಕೆ ತೆರೆದುಕೊಂಡ ಗದಾಧರ ರಾಮಕೃಷ್ಣ ಪರಮಹಂಸರಾಗಿ ಬೆಳೆದದ್ದು ಭಾರತದ ನವೋದಯ ಚರಿತ್ರೆಯ ಒಂದು ನಿರ್ಣಾಯಕ ಅಧ್ಯಾಯ. ಅನಕ್ಷರಸ್ಥರಾಗಿದ್ದ ಅವರು ಮುಂದೆ ಸ್ವಾಮಿ ವಿವೇಕಾನಂದರೆಂದು ಪ್ರಸಿದ್ಧರಾದ ನರೇಂದ್ರನೂ ಸೇರಿದಂತೆ ಬಂಗಾಳದ ಮಾತ್ರವಲ್ಲ, ಭಾರತದ ಅತ್ಯುನ್ನತ ಚಿಂತಕರನ್ನೂ, ಸಮಾಜ ಸುಧಾರಕರನ್ನೂ ಮತ ಮೀರಿದ ತಮ್ಮ ವಿಶಿಷ್ಟ ಧರ್ಮ ಜಿಜ್ಞಾಸೆಯ ಮೂಲಕ ಬೆರಗುಗೊಳಿಸಿ ಪ್ರಭಾವಿಸಿದ ಅನುಭಾವಿ. ಅವರೊಡನೆ ವಿವಿಧ ಜನ ನಡೆಸಿದ ಮಾತುಕತೆಯನ್ನು ದಾಖಲಿಸಿರುವ ಮಾಸ್ಟರ್ ಮಹಾಶಯನೆಂದೇ ಪ್ರಸಿದರಾದ ಮಹೇಂದ್ರನಾಥ ಗುಪ್ತರ ;'ರಾಮಕೃಷ್ಣ ವಚನವೇದ'ದ ಕನ್ನಡಾನುವಾದದಿಂದ ಎರಡು ಭಾಗಗಳನ್ನು ಆಯ್ದು ಇಲ್ಲಿ ನೀಡಿದ್ದೇವೆ ಫೆಬ್ರುವರಿ ೧೮ ಪರಮಹಂಸರ ಜನ್ಮದಿನ-.ಸಂ.

## ೧೮೮೩, ಜುಲೈ ೨೨ (ಆಷಾಢ ಕೃಷ್ಣ ಬಿದಿಗೆ, ಭಾನುವಾರ)

ಶ್ರೀ ರಾಮಕೃಷ್ಣರು: "ಒಮ್ಮೆ ನಾನು ಕೇಶವಸೇನನೊಡನೆ ಬ್ರಹ್ಮಜ್ಞಾನದ ಸಂಬಂಧವಾಗಿ ಮಾತನಾಡಿದೆ. ಅದನ್ನು ಇನ್ನೂ ಸ್ವಲ್ಪ ವಿಶದವಾಗಿ ಹೇಳಬೇಕೆಂದು ಆತ ನನ್ನನ್ನು ಕೇಳಿದ. ನಾನು ಹೇಳಿದೆ: 'ನೀನು ಹಾಗೆ ಮಾಡಿದ್ದೇ ಆದರೆ, ನಿನ್ನ ಸಮಾಜ ಯಾವುದೂ ಉಳಿದುಕೊಳ್ಳದು.' ಅದಕ್ಕೆ ಕೇಶವಸೇನ ಹೇಳಿದ: 'ಮಹಾಶಯರೆ, ಹಾಗಾದರೆ ಮುಂದಕ್ಕೆ ಬೇಡಿ!' (ಎಲ್ಲರೂ ನಗುತ್ತಿದ್ದಾರೆ.) ಆದರೂ ನಾನು ಕೇಶವಸೇನನಿಗೆ ಹೇಳಿದೆ: "ನಾನು", "ನನ್ನದು" ಎಂಬುದೇ ಅಜ್ಞಾನ. "ನಾನು ಕರ್ತ; ಈ ಹೆಂಢತಿ ಮಕ್ಕಳು, ಆಸ್ತಿ, ಕೀರ್ತಿ, ಸಂಭ್ರಮ ಇವೆಲ್ಲಾ ನನಗೆ ಸೇರಿದವು" ಎಂಬ ಭಾವನೆ ಅಜ್ಞಾನದಿಂದಲ್ಲದೆ ಬೇರೆ ಯಾವುದರಿಂದಲೂ ಬಾರದು. ಕೇಶವ ಹೇಳಿದ: 'ಮಹಾಶಯರೆ, ಈ "ಅಹಂ" ಎಂಬುದನ್ನು ತ್ಯಜಿಸಿಬಿಟ್ಟದ್ದೇ ಆದರೆ ಇನ್ನು ಏನೂ ಉಳಿದುಕೊಳ್ಳುವುದಿಲ್ಲವಲ್ಲ.' ಆಗ ನಾನು ಆತನಿಗೆ ಹೇಳಿದೆ: ಕೇಶವ, ನಾನು ನಿನಗೆ ಸಂಪೂರ್ಣವಾಗಿ ಎಲ್ಲಾ "ಅಹಂ" ಗಳನ್ನೂ ತ್ಯಾಗಮಾಡು ಅಂತ ಹೇಳುತ್ತಿಲ್ಲ, ನೀನು "ಅಪಕ್ವ ಅಹಂ" ಅನ್ನು ಮಾತ್ರ ತ್ಯಾಗ ಮಾಡು. "ನಾನು ಕರ್ತ, ನನ್ನ ಹೆಂಢತಿ ಮಕ್ಕಳು. ನಾನು ಗುರು"ಎಂಬ ಭಾವನೆ "ಅಪಕ್ವ ಅಹಂ"ಗೆ ಸೇರಿದವು. ಇವನ್ನು ತ್ಯಾಗಮಾಡಿ, "ಪಕ್ವ ಅಹಂ" ಮಾತ್ರ ಉಳಿಸಿಕೊ. ಅದು ನಿನಗೆ ತರುತ್ತದೆ: "ನಾನು ಭಗವಂತನ ದಾಸ. ನಾನು ಆತನ ಭಕ್ತ. ನಾನು ಅಕರ್ತ" ಎಂಬ ಭಾವನೆಯನ್ನು."

ಭಕ್ತ: " 'ಪಕ್ವ ಅಹಂ' ಸಮಾಜ ಕಟ್ಟಬಲ್ಲುದೆ?"

ಶ್ರೀ ರಾಮಕೃಷ್ಣರು: " 'ನಾನು ದಳಪತಿ, ನಾನು ಈ ಸಮಾಜ ಕಟ್ಟಿದ್ದೇನೆ, ನಾನು ಲೋಕಶಿಕ್ಷಣ ಮಾಡುತ್ತಿದ್ದೇನೆ' ಎಂಬ "ಅಹಂ" "ಅಪಕ್ವ ಅಹಂ", ಧರ್ಮಪ್ರಚಾರ ಬಹಳ ಕಠಿಣವಾದ ಕೆಲಸ. ಭಗವಂತನ ಆಜ್ಞೆಯಿಲ್ಲದಿದ್ದರೆ ಅದು ನಡೆಯುವ ಹಾಗಿಲ್ಲ. ಆತನ ಆದೇಶ ಬೇಕೇಬೇಕು. ಭಾಗವತ ಪ್ರವಚನ ಮಾಡಿಸಬೇಕೆಂದು ಶುಕದೇವನಿಗೆ ಆದೇಶವಾಗಿತ್ತು. ಭಗವಂತನ ಸಾಕ್ಷಾತ್ಕಾರ ದೊರೆತ ನಂತರ, ಆದೇಶ ದೊರೆತು, ಮನುಷ್ಯ ಧರ್ಮಪ್ರಚಾರಕನೋ ಲೋಕಶಿಕ್ಷಕನೋ ಆಗುವುದಾದರೆ ಅದರಿಂದ ಯಾವ ಹಾನಿಯೂ ಉಂಟಾಗದು. ಅತನ 'ಅಹಂ' 'ಅಪಕ್ವ 'ಅಹಂ' ಅಲ್ಲ. 'ಪಕ್ವ ಅಹಂ.'

"ನಾನು ಕೇಶವನಿಗೆ ತಿಳಿಸಿದೆ.: 'ಅಪಕ್ವ ಅಹಂ' ಅನ್ನು ತ್ಯಾಗಮಾಡುವ ಹಾಗೆ. 'ದಾಸ ಅಹಂ', 'ಭಕ್ತ ಅಹಂ' ಇವು ಹಾನಿಕರವಾದುದೇನಲ್ಲ. 'ನೀನು ಯಾವಾಗ ನೋಡಿದರೂ "ಸಮಾಜ, ಸಮಾಜ" ಅನ್ನುತ್ತಲೇ ಇದ್ದೀಯೆ. ಆದರೆ ನಿನ್ನ ಸಮಾಜದಿಂದಲೂ ಜನ ಒಡೆದುಕೊಂಡು ಹೋಗಿಬಿಡುತ್ತಾ ಇದ್ದಾರಲ್ಲಾ.' ಕೇಶವಸೇನ ಹೇಳಿದ: 'ಹೌದು, ನಿಜ. ಅನೇಕ ವರ್ಷಗಳು ಇಲ್ಲಿ ಇದ್ದೂ ಬೇರೆ ಸಮಾಜಕ್ಕೆ ಹೊರಟುಹೋಗಿಬಿಡುತ್ತಾರೆ. ಅಷ್ಟೇ ಅಲ್ಲ, ಬಿಟ್ಟು ಹೋಗುವಾಗ ನನ್ನನ್ನು ಚೆನ್ನಾಗಿ ಬಯ್ದೂ ಹೋಗುತ್ತಾರೆ.' ನಾನು ಹೇಳಿದೆ: 'ಜನರ ಸ್ವಭಾವ ನೋಡಿ ನೀನು ಏಕೆ ಅವರನ್ನು ಸೇರಿಸಿಕೊಳುವುದಿಲ್ಲ? ಸಿಕ್ಕಿಸಿಕ್ಕಿದವರನ್ನೆಲ್ಲಾ ಶಿಷ್ಯರನ್ನಾಗಿ ಮಾಡಿಕೊಂಡರೆ, ಅದು ನಡೆಯುತ್ತದೆಯೋ?"

ಮತ್ತೆ ಕೇಶವನಿಗೆ ಹೇಳಿದೆ: 'ನೀನು ಆದ್ಯಾಶಕ್ತಿಯನ್ನು ಒಪ್ಪಿಕೊಂಡುಬಿಡು. ಬ್ರಹ್ಮನಿಗೂ ಶಕ್ತಿಗೂ ಅಭೇದ. ಯಾರು ಬ್ರಹ್ಮನೋ ಆತನೇ ಶಕ್ತಿ. ದೇಹಬುದ್ಧಿ ಇರುವ ವರೆಗೆ ದ್ವೈತ ಎಂಬ ಬೋಧೆ. ಬಾಯಿಬಿಡುವುದು ಅಂದರೇ ದ್ವೈತ.' ಕೇಶವಸೇನ ಕೊನೆಗೆ ಕಾಳಿಯನ್ನು ಸ್ವೀಕರಿಸಿದ.

***

"ಉತ್ತಮ ಭಕ್ತ ಯಾರು ಗೊತ್ತೆ? ಯಾರು ಬ್ರಹ್ಮಜ್ಞಾನವನ್ನು ಪಡೆದುಕೊಂಡ ನಂತರ ಭಗವಂತನೇ ಈ ಜೀವ, ಜಗತ್ತು, ಚತುರ್ವಿಂಶತಿ ತತ್ವ ಆಗಿದ್ದಾನೆ ಎಂಬುದಾಗಿ ನೋಡುತ್ತಾನೋ ಆತ. ಮೊದಲು 'ನೇತಿ,' 'ನೇತಿ,' 'ಇದಲ್ಲ, ಇದಲ್ಲ' ಎಂದು ವಿಚಾರಮಾಡಿ ಚಾವಣಿಯನ್ನು ಮುಟ್ಟಬೇಕು. ಆಗ ಆತನಿಗೆ ಗೊತ್ತಾಗುತ್ತದೆ ಚಾವಣಿ ಯಾವುದರಿಂದ ಇಟ್ಟಿಗೆ, ಸುಣ್ಣ, ಇಟ್ಟಿಗೆಪುಡಿ—ತಯಾರಾಗಿದೆಯೋ ಅದೇ ವಸ್ತುಗಳಿಂದ ಮೆಟ್ಟಲ ಸಾಲೂ ತಯಾರಾಗಿದೆ ಎಂಬುದಾಗಿ. ಆಗ ಆತನಿಗೆ ತೋರಿಬರುತ್ತದೆ. ಬ್ರಹ್ಮನೇ ಜೀವಜಗತ್ತು ಸಮಸ್ತವೂ ಆಗಿದ್ದಾನೆ ಎಂಬುದಾಗಿ.

"ಕೇವಲ ವಿಚಾರವೇ? ಥೂ! ಥೂ! ಯಾವ ಪ್ರಯೋಜನಕ್ಕೂ ಬಂದುದಲ್ಲ. (ಪರಮಹಂಸರು ನೆಲದ ಮೇಲೆ ಉಗುಳುತ್ತಾರೆ.)

"ವಿಚಾರದಲ್ಲಿ ತೊಡಗಿ ನಾನೇಕೆ ಒಣಮರದಂತಾಗಲಿ? ಎಲ್ಲಿಯವರೆಗೆ ನನ್ನಲ್ಲಿ 'ನಾನು,' 'ನೀನು' ಎಂಬ ಭೇದವಿರುವುದೋ ಅಲ್ಲಿಯವರೆಗೆ ಭಗವಂತನ ಪಾದಪದ್ಮಗಳಲ್ಲಿ ನನಗೆ ಶುದ್ಧ ಭಕ್ತಿ ಇರಲಿ.

(ಗೋವಿಂದನಿಗೆ) "ಕೆಲವು ವೇಳೆ ನಾನು ಹೇಳುವುದುಂಟು, 'ನಾನೇ ನೀನು, ನೀನೇ ನಾನು' ಎಂಬುದಾಗಿ ಮತ್ತೆ ಕೆಲವು ವೇಳೆ ಅದು, 'ನೀನೇ ನೀನು' ಎಂಬುದಾಗಿ ಆಗಿಹೋಗುತ್ತದೆ. ಆಗ 'ಅಹಂ' ಎಂಬುದಕ್ಕಾಗಿ ಎಷ್ಟು ಹುಡುಕಿದರೂ ಸಿಕ್ಕದು. ಅವತಾರ ಶಕ್ತಿಯವೇ. ಕೆಲವರ ದೃಷ್ಟಿಯಿಂದ, ರಾಮ–ಕೃಷ್ಣ ಎಂಬವರು ಚಿದಾನಂದ ಸಾಗರದ ಎರಡು ಅಲೆ ಮಾತ್ರ.

"ಅದ್ವೈತಜ್ಞಾನ ದೊರೆತನಂತರ ಆತ್ಮ ಜಾಗ್ರತಿಯುಂಟಾಗಿಬಿಡುತ್ತದೆ. ಆಗ ಸರ್ವಭೂತಗಳಲ್ಲೂ ಭಗವಂತ ಚೈತನ್ಯರೂಪದಿಂದಿರುವುದು ಕಾಣಬರುತ್ತದೆ. ಈ ಅನುಭವ ದೊರೆತ ನಂತರ ಆನಂದ ದೊರೆಯುತ್ತದೆ. ಮೊದಲು ಅದ್ವೈತಜ್ಞಾನ, ಬಳಿಕ ಆತ್ಮ ಜಾಗ್ರತಿ, ಅನಂತರ ನಿತ್ಯಾನಂದ.

(ಮಾಸ್ಟರಿಗೆ) "ಮತ್ತೆ ನಿನಗೆ ಹೇಳುತ್ತೇನೆ, ನೀನು ಭಗವದ್ರೂಪಗಳಲ್ಲಿ ಅವಿಶ್ವಾಸವಿಡಬೇಡ. ಭಗವಂತನಿಗೆ ರೂಪ ಉಂಟು: ನೀನು ಅದರಲ್ಲಿ ಶ್ರದ್ಧೆಯಿಡು. ಆತನ ಯಾವ ರೂಪ ನಿನಗೆ ಹಿಡಿಸುತ್ತದೋ ಅದರ ಮೇಲೆ ನೀನು ಧ್ಯಾನಮಾಡು.

(ಗೋವಿಂದನಿಗೆ) "ಸತ್ಯವೇನೆಂದರೆ, ಎಲ್ಲಿಯವರೆಗೆ ಪ್ರಾಪಂಚಿಕ ವಸ್ತುಗಳಲ್ಲಿ ಭೋಗಾಸಕ್ತಿ ಇರುವುದೊ ಅಲ್ಲಿಯವರೆಗೆ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದಾಗಲೀ, ಆತನ ದರ್ಶನ ಪಡೆಯಬೇಕೆಂದಾಗಲೀ ಪ್ರಾಣ ವ್ಯಾಕುಲಪಡುವುದಿಲ್ಲ. ಮಗು ಆಟದಲ್ಲಿ ತೊಡಗುವಾಗ ಎಲ್ಲವನ್ನೂ ಮರೆತುಬಿಡುತ್ತದೆ. ಅದನ್ನು ಅಟದಿಂದ ಬಿಡಿಸಲು ಸಂದೇಶ(ಸಿಹಿತಿಂಡಿ) ಕೊಟ್ಟರೂ, ಅದನ್ನು ಎಲ್ಲೋ ಕಿಂಚಿತ್ ತಿಂದುಬಿಟ್ಟು ಮತ್ತೆ ಆಟದಲ್ಲಿ ತೊಡಗುತ್ತದೆ. ಯಾವಾಗ ಅದಕ್ಕೆ ಆಟವೂ ರುಚಿಸದೋ, ಸಂದೇಶವೂ ರುಚಿಸದೋ, ಆಗ ಅದು ಹೇಳುತ್ತದೆ: 'ನಾನು ತಾಯಿಯ ಹತ್ತಿರಕ್ಕೆ ಹೋಗಬೇಕು, ನಾನು ತಾಯಿಯ ಹತ್ತಿರಕ್ಕೆ ಹೋಗಬೇಕು' ಎಂಬುದಾಗಿ. ಆಗ ಅದಕ್ಕೆ ಸಂದೇಶ ಬೇಕಾಗುವುದಿಲ್ಲ. ಯಾರನ್ನು ಆ ಮಗು ಎಂದೂ ನೋಡಿಲ್ಲವೋ ಕಂಡಿಲ್ಲವೋ ಆತ ಬಂದು ಹೇಳಿದರೂ: 'ಬಾ ನನ್ನೊಡನೆ. ನಿನ್ನ ತಾಯಿಯ ಹತ್ತಿರ ಕರೆದುಕೊಂಡು ಹೋಗುತ್ತೇನೆ' ಎಂಬುದಾಗಿ. ಒಡನೇ ಅದು ಆತನನ್ನು ಹಿಂಬಾಲಿಸುತ್ತದೆ. ಮನುಷ್ಯ ಯಾರು ಬೇಕಾದರೂ ಆಗಲಿ, ಯಾರು ಅದನ್ನು ತನ್ನ ತಾಯಿಯ ಹತ್ತಿರಕ್ಕೆ ಕರೆದುಕೊಂಡುಹೋಗಿಬಿಡುತ್ತಾನೋ, ಆತನೊಡನೆ ಅದು ಹೊರಟುಹೋಗುತ್ತದೆ.

"ಪ್ರಾಪಂಚಿಕ ವಸ್ತುಗಳನ್ನು ಭೋಗಿಸಿ ತೃಪ್ತಿ ದೊರೆಯಿತು ಎಂದರೆ, ಪ್ರಾಣ ಭಗವಂತನಿಗಾಗಿ ವ್ಯಾಕುಲಪಡುತ್ತದೆ. ಏನು ಮಾಡಿದರೆ ಆತನ ಸಾಕ್ಷಾತ್ಕಾರ ದೊರೆಯುತ್ತದೆ ಎಂಬ ಈ ಚಿಂತೆಯೊಂದೇ ಆಗ ಅದಕ್ಕೆ ಕಿವಿಗೊಡುತ್ತದೆ."

ಮಾಸ್ಟರ್ ತನಗೆ ತಾನೇ: "ಅಯ್ಯೋ! ಪ್ರಾಣಭಗವಂತನಿಗಾಗಿ ವ್ಯಾಕುಲಪಡಬೇಕಾದರೆ ಈ ಹಾಳಾದ ಭೋಗವಾಸನೆ ಮುಗಿಯಬೇಕಲ್ಲ."

(ಮೂಲ: ಶ್ರೀರಾಮಕೃಷ್ಣ ವಚನವೇದ (ಪೂರ್ವಾರ್ಧ) ಪ್ರ: ಶ್ರೀರಾಮಕೃಷ್ಣಾಶ್ರಮ,.ಮೈಸೂರು)

## ಪುಸ್ತಕಾವಲೋಕನ

ಪು: **ಫ್ರೆಡೆರಿಕ್ ನೀಷೆ :** ಬುದ್ಧಿಜೀವಿಯೊಬ್ಬನ ಭಾವಪೂರ್ಣ ಕಥಾನಕ
ಲೇ: **ಟಿ.ಎನ್ ವಾಸುದೇವಮೂರ್ತಿ** ಪ್ರ: **ವಂಶಿ ಪ್ರಕಾಶನ**
ನೆಲಮಂಗಲ (**೯೯೧೬೪೭೯೫೯೧೬**) ಪು: **೨೪೦** ಬೆ: **ರೂ. ೨೬೪/-**

### ವಿವಾದಾಸ್ಪದ ಚಿಂತಕನೊಬ್ಬನ ವಸ್ತುನಿಷ್ಠ ಪ್ರಸ್ತುತಿ




ರಾಕ್ಷಸ ಪ್ರತಿಭೆ ಎಂದು ಚಿಂತಕರಿಂದ ಗುರುತಿಸಲ್ಪಡುವ ಯುರೋಪಿನ್ ಮಹಾನ್ ತತ್ವಶಾಸ್ತ್ರಜ್ಞ ಫ್ರೆಡೆರಿಕ್ ನೀಶೆಯ ಆಯ್ದ ಲೇಖನಗಳನ್ನು "ಹುಚ್ಚುತನವೇ ಅನುಗ್ರಹ" ಹೆಸರಿನಲ್ಲಿ ಪ್ರಕಟಿಸಿದ್ದ ಟಿ.ಎನ್ ವಾಸುದೇವಮೂರ್ತಿಯವರು ಈಗ ಆತನ ಜೀವನ ಹಾಗೂ ಚಿಂತನೆಗಳ ಸ್ವರೂಪವನ್ನು ಕುರಿತ ವಿಸ್ತೃತವಾದ ಗ್ರಂಥವನ್ನು ಕನ್ನಡ ಓದುಗರಿಗೆ ನೀಡಿದ್ದಾರೆ. ಪುಸ್ತಕ ತನ್ನ ಸಹಜತೆಯಿಂದ ಮತ್ತು ಆಳವಾದ ಅಧ್ಯಯನಶೀಲತೆಯ ಗುಣದಿಂದಾಗಿ ಓದುಗರನ್ನು ಸೆಳೆಯುತ್ತದೆ. ಲೇಖಕರಿಗೆ ನೀಶೆ ಕುರಿತು ಎಷ್ಟು ಆಕರ್ಷಣೆ ಇದೆಯೋ ಅಷ್ಟೇ ಆಕರ್ಷಣೆ ಓಷೊ ಬಗ್ಗೆಯೂ ಇರುವುದರಿಂದ 'ಓಷೊ ದರ್ಶನ' ಸಹ ಇಲ್ಲಿ ಧಾರಾಳವಾಗಿ ದೊರೆಯುತ್ತದೆ.

ಕಳೆದ ಒಂದೆರಡು ದಶಕಗಳಲ್ಲಿ ಪಾಶ್ಚಿಮಾತ್ಯ ಚಿಂತಕರುಗಳು, ತತ್ವಶಾಸ್ತ್ರಜ್ಞರು, ಸಿದ್ಧಾಂತಗಳು ಕನ್ನಡ ಸಂವೇದನೆಗೆ ಅನುವಾದಗಳ ಹಾಗೂ ಅಧ್ಯಯನ ಪೂರ್ಣ ಬರಹಗಳ ಮೂಲಕ ಬರುತ್ತಿರುವುದು ಸ್ವಾಗತಾರ್ಹ. ಕೇವಲ ಪಶ್ಚಿಮದ ಯಜಮಾನ್ಯದ ನೆಲೆಯಿಂದ ಈ ಬಗೆಯ ಪ್ರವೇಶಿಕೆಗಳನ್ನು ನೋಡುವ ಅಗತ್ಯವಿಲ್ಲ. ಇಂತವುಗಳು ಕನ್ನಡದ ಅರಿವನ್ನು ವಿಸ್ತರಿಸುವ ಮಹತ್ವದ ಕೆಲಸ ಮಾಡುತ್ತದೆ. ತನ್ನ ವಿಕ್ಷಿಪ್ತತೆ, ಅಸಮಾನ್ಯ ಚಿಂತನೆಗಳ ಮೂಲಕ ನಮ್ಮ ತಿಳುವಳಿಕೆಯನ್ನು ಅಲ್ಲಾಡಿಸುವ ನೀಶೆ ಕುರಿತ ಈ ಬರವಣಿಗೆ ಕೂಡ ಮತ್ತೊಂದು ಸ್ವಾಗತಾರ್ಹ ಜೋಡಣೆ ಎಂದು ತಿಳಿಯಬಹುದು. ಕೇವಲ ತತ್ವಶಾಸ್ತ್ರೀಯ ನೆಲೆಯಿಂದ ಮಾತ್ರವಲ್ಲ, ಸಾಹಿತ್ಯದಲ್ಲಿ ಆಸಕ್ತಿ ಇರುವರಿಗೂ ಕೂಡ ಇದೊಂದು ಆಸಕ್ತಪೂರ್ಣ ಓದನ್ನು ಒದಗಿಸಿದೆ.

ಲೇಖಕರುಗಳನ್ನು ಅವರ ವೈಯಕ್ತಿಕ ಜೀವನದ ವಿವರಗಳ ಮೂಲಕ ಕಟ್ಟಿಕೊಡುವುದನ್ನು ನವ್ಯವಿಮರ್ಶೆಯ ಕಾಲಘಟ್ಟದಲ್ಲಿ ನಿರಾಕರಿಸಲಾಗುತ್ತಿತ್ತು. ಈ ನವ್ಯೋತ್ತರ ಸಂದರ್ಭದಲ್ಲಿ ಈ ಬಗೆಯ ತಿಳುವಳಿಕೆಯನ್ನು ನಿರಾಕರಿಸಿ, ಅವರ ಜೀವನ, ಕೃತಿ ಹಾಗೂ ಇತರ ಚಿಂತಕರುಗಳ ವ್ಯಾಖ್ಯಾನದ ಮೂಲಕ ನಿರೂಪಿಸಲಾಗುತ್ತಿದೆ. ನೀಶೆ ಕುರಿತ ಈ ಪುಸ್ತಕವೂ ಈ ಬಗೆಯ ವೈಧಾನಿಕತೆಯನ್ನು ಹೊಂದಿರುವುದನ್ನು ನಾವು ಗಮನಿಸಬಹುದು.

"ದೇವರು ಸತ್ತ" ಎಂದು ಕ್ರಾಂತಿಕಾರಕವಾಗಿ ಘೋಷಿಸಿದ ನೀಶೆಯ ಕುರಿತಾಗಿರುವ ಕೆಲವು ಅಪಕಲ್ಪನೆಗಳ ಬಗ್ಗೆ ಲೇಖಕರು ಇಲ್ಲಿ ವಿಸ್ತೃತವಾಗಿ ಚರ್ಚಿಸಿದ್ದಾರೆ. ಉದಾಹರಣೆಗೆ ಬಲಪಂಥೀಯರಿಗೆ ಮತ್ತು ಹಿಟ್ಲರ್‌ಗೆ ನೀಶೆ ಕುರಿತಾಗಿ ಇರುವ ಒಲವಿನ ಬಗ್ಗೆ ಪ್ರಸ್ತಾಪಿಸುತ್ತಾ, ನೀಶೆ ವಿಕ್ಷಿಪ್ತ ಸ್ಥಿತಿಯಲ್ಲಿದ್ದಾಗ ಅವನ ಸಹೋದರಿ ಅನೇಕ ಬಾರಿ ಅನಗತ್ಯವಾಗಿ ಲೇಖನಗಳಲ್ಲಿ ಮಧ್ಯಪ್ರದೇಶ ಮಾಡಿದ ಬಗ್ಗೆ ತಿಳಿಸಿಕೊಡುತ್ತಾ ಇದು ಹಸ್ತಕ್ಷೇಪದ ಪರಿಣಾಮ ಹೌದು ಎಂದು ವಿವರಿಸುತ್ತಾರೆ. ಹಾಗೆಯೇ ಅಂಬೇಡ್ಕರ್ ನೀಶೆಯನ್ನು ಮನುಸ್ಮೃತಿಯ ಸಮರ್ಥಕ ಎಂದು ನಿರಾಕರಿಸಿದ್ದರ ಬಗ್ಗೆ ಪ್ರಸ್ತಾಪಿಸುತ್ತಾ ನೀಶೆ ಮನುಸ್ಮೃತಿಯಲ್ಲಿರುವ ಹಲವು ವಿಷಯಗಳ ಬಗ್ಗೆ ನಿರಾಕರಣೆಯ ಧೋರಣೆ ಹೊಂದಿರುವುದನ್ನು ಎತ್ತಿ ತೋರಿಸಿ ಆತ ಏಕಮುಖೀ ಆರಾಧಕನಲ್ಲ ಎಂದು ವಾದಿಸುತ್ತಾರೆ. ಅದರಂತೆಯೇ ಆತ ಕೇವಲ ೨೪ ವರ್ಷಕ್ಕೆ ವಿಶ್ವವಿದ್ಯಾಲಯದಲ್ಲಿ ಬೋಧಕನಾಗಿದ್ದಾಗ ರಚಿಸಿದ ಕೆಲವು ಗ್ರಂಥಗಳನ್ನು ಆಗಿನ ವಿಮರ್ಶಕರು 'ಅತಿರೇಕ' ಎಂದು ತಿರಸ್ಕರಿಸಿದ್ದನ್ನು ಮತ್ತು ಮುಂದೆ ಅದೇ ಗ್ರಂಥಗಳು ಮನ್ನಣೆ ಗಳಿಸಿದ ಅಂಶಗಳನ್ನು ಕೂಡ ವಿವರವಾಗಿ ಚರ್ಚಿಸಿದ್ದಾರೆ.

ನೀಶೆಯ ಬೌದ್ಧಿಕತೆ ಮತ್ತು ಆತನ ವೈಯಕ್ತಿಕ ಜೀವನದ ವಿವರಗಳು ಇಲ್ಲಿ ಮಿಳಿತವಾಗಿರುವುದರಿಂದ ಈ ಪುಸ್ತಕ ಹೆಚ್ಚು ಪರಿಣಾಮಕಾರಿಯಾಗಿದೆ. ಆತನ ಬಾಲ್ಯ, ಏಕಾಂಗಿತನ, ತಬ್ಬಲಿತನ, ವ್ಯಗ್ರತೆ, ಅಲೆಮಾರಿ ಬದುಕು, ಆತ ಸೃಷ್ಟಿಸಿದ ತಾತ್ವಿಕ ಪರಂಪರೆ, ಅರಾಜಕತೆ, ಆತನ ಕೃತಿಗಳ ವೈಶಿಷ್ಠತೆ ಇವೆಲ್ಲವುಗಳನ್ನೂ ಒಟ್ಟೊಟ್ಟಿಗೆ ನೋಡಲಾಗಿದೆ. ಹೀಗೆ ವಿವರಗಳ ಮೂಲಕ ಬುದ್ಧಿಜೀವಿಯೊಬ್ಬನನ್ನು ನಿರೂಪಿಸುವಾಗ ಅತನೊಬ್ಬ ಭಗ್ನಪ್ರೇಮಿಯಾಗಿದ್ದ ಎಂಬ ಅಂಶವನ್ನು ಒಂದು ಅಧ್ಯಾಯದಲ್ಲಿ ಚರ್ಚಿಸಿ ಆತ ಬರೆದ ಪ್ರೇಮ ಪತ್ರವನ್ನು ಸಹ ದಾಖಲಿಸಿರುವುದು ಕುತೂಹಲಕಾರಿಯಾಗಿದೆ.

ಒಟ್ಟಾರೆಯಾಗಿ, ನೀಶೆಯ ಬಹುಶ್ರುತತೆಯನ್ನು, ಆದ್ಯತೆಗಳನ್ನು ಆತನ ತಾತ್ವಿಕ ತಳಹದಿಯನ್ನು ಕನ್ನಡ ಸಂವೇದನೆಗೆ ಜೋಡಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ನೀಶೆ ಜೊತೆಗೆ ಓಷೋನ ವಿಚಾರಗಳನ್ನು, ಒಲವುಗಳನ್ನು ಜೋಡಿಸಿರುವುದು ಚರ್ಚಾರ್ಹ ವಿಚಾರವೇ ಸರಿ. ಹಾಗೆಯೇ ನೀಶೆಯ ವಿಚಾರಗಳು ಜಗತ್ತಿನ ಬೇರೆ ಬೇರೆ ಲೇಖಕರುಗಳನ್ನು ಪ್ರಭಾವಿಸಿರುವಂತೆ, ಯುರೋಪಿನ ಆಧುನಿಕೋತ್ತರವಾದಿಗಳನ್ನು ತೀವ್ರವಾಗಿ ಪ್ರಭಾವಿಸಿದೆ. ಸತ್ಯ, ವಾಸ್ತವ, ಚರಿತ್ರೆ ಇವೆಲ್ಲವುಗಳನ್ನು ಒಂದು 'ಕತೆ'ಯಾಗಿ ಮಾತ್ರ ನೋಡುವ ಆಧುನಿಕೋತ್ತರವಾದಿಗಳಿಗೆ ಯಾವುದೆ ವಿಷಯದ ಬಹು ಆಯಾಮಗಳನ್ನು ವ್ಯಾಖ್ಯಾನಿಸುವ ನೀಶೆ ವಿಶಿಷ್ಟವಾಗಿ ಕಂಡಿದ್ದ. ಈ ಅಂಶವನ್ನು ಇಲ್ಲಿ ಸೇರಿಸಿಕೊಂಡೇ ನಾವು ಪುಸ್ತಕವನ್ನು ಓದಬಹುದು.

ಈ ಪುಸ್ತಕವು ಹಲವು ಬಗೆಯ ಜಿಜ್ಞಾಸು ಸ್ವರೂಪಿ ಪ್ರಶ್ನೆಗಳ ಮೂಲಕ ನೀಶೆಯ ವ್ಯಕ್ತಿತ್ವ ಮತ್ತು ತಾತ್ವಿಕತೆಯನ್ನು ನಿರೂಪಿಸುವ ಕೆಲಸ ಮಾಡಿದೆ. ನೀಶೆಯ ಹಿಂದಿನ ಕಾಲದ ತಾತ್ವಿಕ ದರ್ಶನ, ಸಮಕಾಲೀನರ ಪ್ರತಿಕ್ರಿಯೆ ಮತ್ತು ಆತನ ಒಳಗಿನ ತುರ್ತು ಇವೆಲ್ಲವುಗಳ ಕುರಿತ ಚರ್ಚೆಯೂ ಇಲ್ಲಿದೆ. ಆತ್ಮವಲೋಕನದ ಜೊತೆಗೆ ನೀಶೆಗೆ ಅವನ ಕೃತಿಗಳ ಕುರಿತು ಕೆಲ ದೊಡ್ಡ ಹೆಸರಿನ ವಿಮರ್ಶಕರ ದಿವ್ಯ ತಾತ್ಸರವೂ ತೀವ್ರವಾಗಿ ಕಾಡಿತ್ತಂತೆ. ಇಂತಹ ಹಲವು ಭಿನ್ನ ಆಯಾಮಗಳು ಇಲ್ಲಿ ದಾಖಲಾಗಿವೆ.

ನೀಶೆ ಯಾವ ಪಂಥಕ್ಕೆ ಸೇರಿದವನು ಎಂಬ ಪ್ರಶ್ನೆಗಿಂತ ಹೆಚ್ಚಾಗಿ ಬಲಪಂಥೀಯರು ಈತನ 'ದೈತ್ಯಮನುಷ್ಯ' ಪರಿಕಲ್ಪನೆಯನ್ನು ಹೇಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂಬ ಪ್ರಶ್ನೆಯೂ ಸಹ ಉದ್ಭವಿಸುತ್ತದೆ. ದಾಸ್ತೋವಸ್ತಿಯ ಒಂದು ಬೃಹತ್ ಕಾದಂಬರಿಯಲ್ಲಿ ಅದರ ನಾಯಕ ತನ್ನನ್ನು ತಾನು "ಅತಿಮನುಷ್ಯ" ಎಂದು ತಿಳಿದುಕೊಂಡು ಸಮಾಜದ ಓರೆಕೋರೆಗಳನ್ನು ತಿದ್ದಲು ಹೋಗುತ್ತಾನೆ. ಆದರೆ ಈ ಬಗೆಯ ನೈತಿಕತೆ ಇಲ್ಲದ ಜನ ಹಠಕ್ಕಾಗಿ, ದ್ವೇಷಕ್ಕಾಗಿ ಹಿಂಸೆಯ ಸರಪಳಿಯನ್ನು ಸೃಷ್ಟಿಸುತ್ತಾರೆ ಮತ್ತು ನೀಶೆ ತರಹದ ವ್ಯಕ್ತಿತ್ವದಿಂದ ಸ್ಫೂರ್ತಿ ಪಡೆಯುತ್ತಾರೆ ಎಂಬುದೇ ವ್ಯಂಗ್ಯವಾಗಿದೆ. ಈ ಪುಸ್ತಕದ ದಟ್ಟ ವಿವರಗಳು ಈತನನ್ನು ಒಂದೇ ದೃಷ್ಟಿಕೋನದಿಂದ ನೋಡದಂತೆ ಒತ್ತಾಯಿಸುತ್ತವೆ.

ಕೊನೆಯದಾಗಿ, ಬೌದ್ಧಿಕತೆಯನ್ನೆ ನಿರಾಕರಿಸುತ್ತಿರುವ ಮತ್ತು ಮಾತು ಸೋಲುತ್ತಿರುವ ಈ ಸಮಕಾಲೀನ ಸಂದರ್ಭದಲ್ಲಿ ನೀಶೆಯ ತಾತ್ವಿಕ ಮತ್ತು ಬೌದ್ಧಿಕ ಜಗತ್ತನ್ನು ಈ ಪುಸ್ತಕ ಪರಿಣಾಮಕಾರಿಯಾಗಿ ತೆರೆದಿಟ್ಟಿದೆ.

**–ಅವಿನಾಶ್ ಟಿ.**

ಪು: **ಉಸಾಬರಿ**(ಸಮಕಾಲೀನ ಬರಹಗಳು) ಲೇ: **ಎನ್.ಎಸ್. ಶಂಕರ್** ಪ್ರ: **ಅಕ್ಷರ ಮಂಟಪ,** ಬೆಂಗಳೂರು (**೯೯೮೬೧೬೭೬೮೪**) ಪು: **೨೩೨** ಬೆ: **ರೂ. ೨೦೦/-**

### ಪತ್ರಕರ್ತನೊಬ್ಬನ ಹಲವು ಉಸಾಬರಿಗಳು




**ಮೂ**ಲತಃಲೋಹಿಯಾ ವಿಚಾರಗಳಿಂದ ಪ್ರಭಾವಿತರಾಗಿರುವ ಎನ್.ಎಸ್. ಶಂಕರ್ ಸಹಜವಾಗಿಯೇ ಹಲವು ಉಸಾಬರಿಗಳ ಮನುಷ್ಯ. ಇದರ ಫಲವೇ ಈ ಲೇಖನಗಳ ಸಂಗ್ರಹ. ಸಾಮಾಜಿಕ ಕಾಳಜಿಯ ಪತ್ರಕರ್ತರಾಗಿ ತಮ್ಮ ಕಾಲದ ದಲಿತ ಮತ್ತು ರೈತ ಚಳುವಳಿಗಳೊಂದಿಗೆ ಒಡನಾಡಿದವರು. ಚಲಚಿತ್ರ ಕ್ಷೇತ್ರದಲ್ಲೂ ಕೈಯಾಡಿಸಿ ಒಂದೆರಡು ಸಿನಿಮಾಗಳನ್ನು ನಿರ್ದೇಶಿಸಿದವರು ಕೂಡ. ಹಾಗಾಗಿ ಈ 'ಉಸಾಬರಿ' ಎಂಬ ಅವರ ಈ ಲೇಖನಗಳ ಸಂಗ್ರಹದಲ್ಲಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಬರಹಗಳಿವೆ. ಇವು ವಿವಿಧ ಸಂದರ್ಭಗಳಲ್ಲಿ ವಿವಿಧ ಪತ್ರಿಕೆಗಳಿಗಾಗಿ ಮತ್ತು ತಮ್ಮ ಫೇಸ್‌ಬುಕ್‌ಗಾಗಿ ಬರೆದ ಬರಹಗಳಾಗಿದ್ದು, ಶಂಕರ್ ಮೊದಲೇ ಹೇಳಿದಂತೆ ಮೂಲತಃ ಪತ್ರಕರ್ತರಾಗಿರುವುದರಿಂದ ಅವರ ಬರಹಗಳು ಹೆಚ್ಚಾಗಿ ಸಮಕಾಲೀನ ಸಾಮಾಜಿಕ ಮತ್ತು ರಾಜಕೀಯ ವಿಶ್ಲೇಷಣೆಗಳಿಗೆ ಸಂಬಂಧಿಸಿರುವುದು ಸಹಜವೇ ಆಗಿದೆ.

ಇಲ್ಲಿನ ಲೇಖನಗಳನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದ್ದು ಮೊದಲ

ಭಾಗದಲ್ಲಿ ಸಾಹಿತ್ಯ ಮತ್ತು ವ್ಯಕ್ತಿ ವಿಮರ್ಶೆಗೆ ಸಂಬಂಧಿಸಿದ ಲೇಖನಗಳನ್ನು ಒಳಗೊಂಡಿದ್ದು ಇವುಗಳಲ್ಲಿ 'ಶಿಕಾರಿ'ಯ ನೈತಿಕ ನೆಲೆ ಯಾವುದು?' ಎಂಬ ಲೇಖನ ಹೆಚ್ಚು ಕುತೂಹಲಲ ಹುಟ್ಟಿಸುವಂತಿದೆ. ಪತ್ತೇದಾರಿ ಕಾದಂಬರಿಯಂತೆ ರೋಚಕವಾಗಿ–ಆದರೆ ಬೌದ್ಧಿಕ ನೆಲೆಯಲ್ಲಿ–ಬೆಳೆಯುತ್ತಾ ಹೋಗುವ ಈ ಕಾದಂಬರಿ ಒಂದು ನೆಲೆಯಲ್ಲಿ ಆಧುನಿಕ ಜೀವನ ಮೌಲ್ಯಗಳು ಹುಟ್ಟಿಸುವ ಕ್ರೌರ್ಯವನ್ನು ಅದರ ಹೊರ ರೂಪದಲ್ಲಿ ಹೇಳುತ್ತಿರುವಾಗಲೇ ಅದು ಮನುಷ್ಯನೊಳಗೇ ಸೃಷ್ಟಿಸುತ್ತಿರುವ ಕ್ರೌರ್ಯದ ಒಳ ರೂಪಗಳನ್ನೂ ಚಿತ್ರಿಸುತ್ತದೆ. ಆದರೆ ಶಂಕರ್ ಇಲ್ಲಿ ಕಾದಂಬರಿಯ ನಾಯಕ ನಾಗಪ್ಪನನ್ನು ಹಲವು ಹೊರ ಕಾರಣಗಳಿಗಾಗಿ ಕಾದಂಬರಿಕಾರ ಚಿತ್ತಾಲರೆಂದೇ ನಿರ್ಧರಿಸಿಕೊಂಡಂತೆ ಕೃತಿಯನ್ನು ನೋಡಿರುವುದರಿಂದಲೋ ಏನೋ, ಚಿತ್ತಾಲರು ತಮ್ಮ ಅದ್ಭುತ ಕಸುಬುದಾರಿಕೆಯ ಮೂಲಕ ಹೇಳುತ್ತಿರುವ ಕ್ರೌರ್ಯದ ಹೊರ ಮತ್ತು ಒಳರೂಪಗಳ ನಡುವಣ ಸಂಬಂಧವನ್ನು ಗ್ರಹಿಸದೆ ಹೋಗಿದ್ದಾರೆನಿಸುತ್ತದೆ. ಬಹುಶಃ ಹಾಗಾಗಿಯೇ ಅವರು ನಾಗಪ್ಪನ ವ್ಯಕ್ತಿತ್ವದಲ್ಲಿನ ಬಿರುಕನ್ನು ಕಾದಂಬರಿಯಲ್ಲಿನ (ನೈತಿಕ) ಬಿರುಕು ಎಂದು ತೀರ್ಮಾನಕ್ಕೆ ಬರುತ್ತಾರೆ. ಇನ್ನು ಈ ಹಿಂದೆ ಕಿರು ಪುಸ್ತಕವಾಗಿಯೂ ಪ್ರಕಟವಾಗಿರುವ 'ಲಂಕೇಶ್–ಇಂತಿ ಕೆಲ ಪ್ರಶ್ನೆಗಳು' ಎಂಬ ಲೇಖನದಲ್ಲಿ ನಟರಾಜ್ ಹುಳಿಯಾರ್ ಅವರು ಲಂಕೇಶ್ ಮತ್ತು ಡಿ.ಆರ್. ನಾಗರಾಜ್ ಬಗ್ಗೆ ಬರೆದಿರುವ 'ಇಂತೀ ನಮಸ್ಕಾರಗಳು' ಪುಸ್ತಕವನ್ನು ನೆಪವಾಗಿಟ್ಟುಕೊಂಡು ಲಂಕೇಶರ ವ್ಯಕ್ತಿತ್ವದಲ್ಲಿನ ಬಿರುಕನ್ನು ಗುರುತಿಸುತ್ತಾ ಎತ್ತಿರುವ ಪ್ರಶ್ನೆಗಳು ಮುಖ್ಯವಾಗಿ ನೈತಿಕ ನೆಲೆಗಳದ್ದಾಗಿದೆ. ಆದರೆ ಈ ಸಂಬಂಧವಾಗಿ ಶಂಕರ್ ಹೇಳಬೇಕಾದುದನ್ನು ಖಚಿತವಾಗಿ ಹೇಳಲಾಗದ ಸಂಕೋಚದಿಂದಾಗಿ ಈ ಬರಹ ದೇಶಾವರಿ ಎನಿಸಿಬಿಡುತ್ತದೆ. ದೇವನೂರ ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಕೃತಿ ಕುರಿತ' ಬರಹವೂ ಇಂತಹುದೇ ತಾಕಲಾಟಕ್ಕೆ ಸಿಕ್ಕಿ, ಕೃತಿಕಾರನೊಡನೆಯ ಅವರ ವೈಯಕ್ತಿಕ ಸ್ನೇಹ ಸಂಬಂಧದ ನೆನಪುಗಳ ಹಳಹಳಿಕೆಗಳ ಮಧ್ಯೆ ಗಂಟಲಿಗೆ ಬಂದ ಮಾತುಗಳು ಮತ್ತೆ ಹೊಟ್ಟೆಯೊಳಕ್ಕೇ ವಾಪಸು ಹೋದಂತೆನಿಸಿ ಲೇಖನ 'ದಂ' ಕಳೆದುಕೊಂಡಿದೆ ಎನಿಸದಿರದು.

ಪುಸ್ತಕದ ಎರಡನೆಯ ಭಾಗದಲ್ಲಿ ದಲಿತ ಮತ್ತು ರೈತ ಚಳುವಳಿ, ಅಂಬೇಡ್ಕರ್ ವಿಚಾರ, ಗಾಂಧಿಯ ಅಹಿಂಸೆ, ಗಂಡು–ಹೆಣ್ಣಿನ ಸಂಬಂಧ, ವಿಚಾರವಾದ, ಪತ್ರಿಕಾ ಸ್ವಾತಂತ್ರ್ಯ ಇತ್ಯಾದಿ ಚರ್ವಿತ ಚರ್ವಣ ವಿಷಯ ಕುರಿತ ಲೇಖನಗಳಿವೆ. ಇವುಗಳಲ್ಲಿ ಹೊಚ್ಚ ಹೊಸದೆನಿಸುವುದು ಏನಿಲ್ಲವಾದರೂ, ಇತ್ತೀಚಿನ ವರ್ಷಗಳಲ್ಲಿನ ಸಮಕಾಲೀನ ವಿಷಯಗಳ ಬಗ್ಗೆ ನಡೆದ ಚರ್ಚೆಗಳ ಮುಖ್ಯ ಅಂಶಗಳನ್ನು ನೆನಪಿಸುವಲ್ಲಿ ನೆರವಾಗುತ್ತದೆ ಮತ್ತು ಕೆಲವು ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತದೆ. ಉದಾ: ಅಂಬೇಡ್ಕರ್ ನಿಧನರಾದ ನಂತರ ಅವರ ಹಸ್ತಪ್ರತಿಗಳಿಗೆ ಒದಗಿದ ದುರ್ಗತಿ ಕುರಿತ ವಿವರಗಳು ನಮ್ಮನ್ನು ಬೆಚ್ಚಿಬೀಳಿಸುವಂತಿವೆ. 'ಮಿ ಟೂ' ಸುತ್ತ ಬರೆದ ಬರಹ ನಮ್ಮ ಚಿತ್ರರಂಗದಲ್ಲಿನ ಪಾಪಕೂಪದ ಪರಿಚಯ ಮಾಡಿಕೊಡುತ್ತದೆ. ಇನ್ನು ದಲಿತ ಚಳುವಳಿಯ ಅವನತಿಯ ಅದೇ ಹಳೇ ಕಥೆ ಹೇಳುವ ಲೇಖನ ಇವರಿನ್ನೂ ಚರಿತ್ರೆಯ ಹಾಳುಭಾವಿಯಿಂದ ಈಚೆ ಬರಲು ನಿರಾಕರಿಸುತ್ತಿದ್ದಾರೆಂಬುದಷ್ಟನ್ನೇ ಸೂಚಿಸುವಂತಿದೆ. ಆದರೆ ಟಿವಿ ಮಾಧ್ಯಮ ಕುರಿತ ಬರಹದಲ್ಲಿ ಕಳಂಕಿತರಾಗುವುದೇ ಸ್ಟಾರ್‌ಗಿರಿಗೆ ದಾರಿ ಎನ್ನುವುದನ್ನು ಹಲವು ದೃಷ್ಟಾಂತಗಳ ಮೂಲಕ ವಿಷದೀಕರಿಸುತ್ತಾ ಅದನ್ನು ನರೇಂದ್ರ ಮೋದಿಯವರ ಉದಾಹರಣೆಯವರೆಗೂ ವಿಸ್ತರಿಸಿರುವುದು ಲೇಖನಕ್ಕೆ ಒಂದು ಹೊಸ ಆಳ ಒದಗಿಸಿದೆ ಎನ್ನಿಸದಿರದು.

ಇನ್ನು ಪುಸ್ತಕದ ಮೂರನೆಯ ಭಾಗ ಪೂರ್ಣ ಮೋದಿ ಮತ್ತು ಅವರ ಆಡಳಿತ ವೈಖರಿಯನ್ನು ಕುರಿತ ತೀಕ್ಷ್ಣ ನೋಟಗಳು ಮತ್ತು ವ್ಯಾಖ್ಯಾನಗಳಿಂದ ಕೂಡಿದ್ದು ಈ ಆಡಳಿತದ ಮಾಧ್ಯಮ ನೀತಿ, ರೈತ ನೀತಿ, ಭೂಸ್ವಾಧೀನ ನೀತಿ, ಬಹುಸಂಖ್ಯಾತವಾದಿ ನೀತಿ ಇವುಗಳ ನೆಲೆಗಳಲ್ಲಿ ವಿಶ್ಲೇಷಿಸುತ್ತಾ ದೇಶಭಕ್ತಿ ಮತ್ತು ರಾಷ್ಟ್ರೀಯತೆಗಳ ಅರ್ಥಗಳನ್ನೇ ವಿರೂಪಗೊಳಿಸುವ ವಿಕ್ಷಿಪ್ತ ರಾಜಕಾರಣ ಉದಯವಾಗಿರುವುದರತ್ತ ನಮ್ಮ ಗಮನ ಸೆಳೆಯುತ್ತಾರೆ. ಆದರೆ ಇಂತಹ ವಿಶ್ಲೇಷಣೆಗಳು ವಿಪರೀತವಾಗಿ ಜನರನ್ನು ಸುಸ್ತುಗೊಳಿಸಿದ್ದು , ಈಗ ಬೇಕಾಗಿರುವುದು ರಾಜಕಾರಣವು ಈ ಅಪಾಯಕಾರಿ ಘಟ್ಟ ತಲುಪಿರುವುದರ ಹಿಂದಿನ ಚಾರಿತ್ರಿಕ ಸಂದರ್ಭಗಳ ಆತ್ಮವಿಶ್ಲೇಷಣೆಯ ಬರಹಗಳಲ್ಲವೇ ಎಂಬ ಪ್ರಶ್ನೆಯೂ ಇಲ್ಲಿ ಏಳುತ್ತದೆ. ಶಂಕರ್ ಅವರ ಮುಂದಿನ ಬರಹಗಳ ನೆಲಗಟ್ಟು ಬದಲಾಗಲಿ ಎಂದು ಆಶಿಸೋಣ.

ಶಂಕರ್ ಅವರದ್ದು ಪತ್ರಕರ್ತನ ಶೈಲಿಯ ಅನೌಪಚಾರಿಕ ಬರವಣಿಗೆ. ಇದು ಎಲ್ಲೋ ವಿಷಯಗಳ ಆಳವಾದ, ಅದರ ಬಹು ಆಯಾಮಗಳ ವಿಶ್ಲೇಷಣೆಗೆ ತಡೆಯೊಡ್ಡಿದೆಯೇ, ರೂಪವೇ ನಿರ್ಣಾಯಕವಾಗಿ ವಸ್ತುವನ್ನು ನಿಯಂತ್ರಿಸುತ್ತಿದೆಯೇ ಎಂಬ ಅನುಮಾನವೂ ಇಲ್ಲಿನ ಲೇಖನಗಳನ್ನು ಓದಿದಾಗ ಬರುತ್ತದೆ. ಶಂಕರ್ ಈ ಬಗ್ಗೆಯೂ ಯೋಚಿಸುತ್ತಾರೆಂದು ಹಾರೈಸೋಣ.

**–ಡಿಎಸ್ಸೆನ್**

ಪು: ಉತ್ಕಲ ವಂಗ(ಪ್ರವಾಸ ಕಥನ) ಲೇ: **ವೆಂಕಟೇಶ ಮಾಚಕನೂರ** ಪ್ರ: **ಸಪ್ನ ಬುಕ್ ಹೌಸ್**, ಬೆಂಗಳೂರು(೪೦೧೧೪೪೫೫) ಪು: ೧೯೫ ಬೆ:**ರೂ. ೧೫೦/–**

## ಹಲವು ಕುತೂಹಲಗಳ ಪ್ರವಾಸ ಕಥನ



**ನ**ಮ್ಮ ರಾಷ್ಟ್ರಗೀತೆಯನ್ನು ನೆನಪಿಗೆ ತರುವ ಶೀರ್ಷಿಕೆಯ 'ಉತ್ಕಲ ವಂಗ ' ವೆಂಕಟೇಶ ಮಾಚಕನೂರರ ಒಂಬತ್ತನೆಯ ಪ್ರವಾಸ ಕಥನ. ಒಡಿಶಾದ ಭುವನೇಶ್ವರ, ಕೋನಾರ್ಕ, ಪುರಿ, ಚಿಲ್ಕಾ ಸರೋವರ, ಕಟಕ್ ಮತ್ತು ಬಂಗಾಳದ ಕೋಲ್ಕತ್ತಾ ನಗರದ ಎಲ್ಲಾ ಪ್ರೇಕ್ಷಣೀಯ ಸ್ಥಳಗಳು, ಸುಂದರಬನಕ್ಕೆ ಭೇಟಿ ನೀಡಿದ ಅನುಭವವನ್ನು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಪ್ರವಾಸ ಮಾಡಿದ ಸ್ಥಳಗಳ ಭೌಗೋಳಿಕ, ಚಾರಿತ್ರಿಕ ವಿವರಗಳನ್ನು ನೀಡಿರುವುದರಿಂದ ಪ್ರವಾಸಿಗರಿಗೆ ಒಂದು ಉತ್ತಮ ಮಾರ್ಗದರ್ಶಿ ಆಗಬಲ್ಲದು.

ಒಡಿಶಾದ ಜನರು ವಿವಿಧ ಕಲೆಗಳಲ್ಲಿ ಉತ್ಕೃಷ್ಟತೆಯನ್ನು ಸಾಧಿಸಿದ್ದರಿಂದ ಉತ್ಕಲ ಎಂಬ ಹೆಸರು ಬಂದಿತಂತೆ. ಭುವನೇಶ್ವರ, ಕೋನಾರ್ಕ್, ಪುರಿ ಈ ಮೂರು ಒಡಿಶಾದ ಸುವರ್ಣ ತ್ರಿಭುಜ ಪ್ರವಾಸಿ ತಾಣಗಳು. ಒಡಿಶಾ ಪ್ರವಾಸೋದ್ಯಮ ನಿಗಮದ ಯೋಜಿತ ಪ್ರವಾಸ ಮಾಡಿ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿದ್ದಾರೆ. ಕಳಿಂಗ ಯುದ್ಧ ನಡೆದ ಸ್ಥಳ ಧೌಲಿಯಲ್ಲಿರುವ ಶಾಂತಿಸ್ತೂಪವನ್ನು ಜಪಾನಿನ ಬೌದ್ಧಗುರು ಫೂಜಿಗುರೂಜಿ ನೇತೃತ್ವದಲ್ಲಿ ನಿರ್ಮಾಣವಾದ ಬಗ್ಗೆ, ಇವರು ಭಾರತಕ್ಕೆ ಬಂದು ಗಾಂಧೀಜಿಯವರ ಜೊತೆ ವರ್ಧಾ ಆಶ್ರಮದಲ್ಲಿದ್ದ ಬಗ್ಗೆ ಬರೆದಿದ್ದಾರೆ. ಲಿಂಗರಾಜ ಮಂದಿರನ್ನು ಇತಿಹಾಸಕಾರರು ಅತ್ಯಂತ ಸುಂದರವಾದ ದೇವಸ್ಥಾನವೆಂದು ವರ್ಣಿಸಿದ್ದನ್ನು ನೆನಪಿಸಿಕೊಳ್ಳುತ್ತಾರೆ. ಇಲ್ಲಿನ ಎಲ್ಲಾ ದೇವಾಲಯಗಳಲ್ಲಿ ಪಂಡರು ತೊಂದರೆ ಕೊಡುವುದರ ಬಗ್ಗೆ ಹೇಳುತ್ತಾ, ಇಲಾಖೆಗೂ ಅವರ ಮೇಲೆ ಹಿಡಿತವಿಲ್ಲ, ದೇವರಿಗೂ ಅವರ ಮೇಲೆ ಹಿಡಿತವಿದ್ದಂತೆ ಕಾಣುವುದಿಲ್ಲ ಎಂದು ವಿನೋದ ಮಾಡುತ್ತಾರೆ. ಈ ದೇವಾಲಯದ ಅಂದ ಇರುವುದು ಹೊರನೋಟದಲ್ಲಿ, ಗೋಪುರಗಳ ವಿನ್ಯಾಸ, ಬ್ರಹತ್ ಗಾತ್ರ ಮತ್ತು ಅಂದದ ಸಂಯೋಜನೆ ಬೆರಗುಗೊಳಿಸುವಂತಹದ್ದು, ಮುಕ್ತೇಶ್ವರ ದೇವಾಲಯ, ರಾಜರಾಣಿ ಮಂದಿರ ಮತ್ತು ಸರ್ಕಾರಿ ವಸ್ತುಸಂಗ್ರಹಾಲಯದ ಬಗ್ಗೆ ಉಪಯುಕ್ತ ಮಾಹಿತಿಯನ್ನು ಕೊಡುತ್ತಾರೆ.

ಕೋನಾರ್ಕ ಸೂರ್ಯದೇವಾಲಯದಲ್ಲಿ ದಿನದ ನಿರ್ದಿಷ್ಟ ವೇಳೆಯನ್ನು ತೋರಿಸುವಂತೆ ಚಕ್ರಗಳನ್ನು ನಿರ್ಮಿಸಿದ ಶಿಲ್ಪಿಗಳ ತಾಂತ್ರಿಕ ನೈಪುಣ್ಯ, ಪುರಿ ದೇವಾಲಯದ ೨೧೪ ಅಡಿ ಎತ್ತರದ ಗೋಪುರದ ಮೇಲೆ ೩೬ ಅಡಿ ವ್ಯಾಸದ ಎಂಟು ಲೋಹಗಳಿಂದ ಮಾಡಲಾದ ಎರಡು ಇಂಚು ದಪ್ಪದ ೨೨೦೦ ಕೆ.ಜಿ. ತೂಕದ ಸುದರ್ಶನಚಕ್ರವನ್ನು ಅಳವಡಿಸಲಾಗಿರುವುದು, ಇತ್ಯಾದಿ ವಿಶೇಷತೆಗಳ ಬಗ್ಗೆ ನಿರೂಪಿಸಿದ್ದಾರೆ. ಭಾರತದಲ್ಲಿಯೇ ಅತಿ ದೊಡ್ಡದಾದ, ಪುರಿ, ಖುರ್ದಾ, ಗಂಜಾಂ ಜಿಲ್ಲೆಗಳನ್ನು ಆವರಿಸಿರುವ ೧೧೦೦ ಕಿ.ಮೀ. ವಿಸ್ತೀರ್ಣವುಳ್ಳ ಚಿಲ್ಕಾ ಸರೋವರ, ಇಲ್ಲಿ ಅಳಿವಿನಂಚಿನಲ್ಲಿರುವ ಇರಾವದಿ ಡಾಲ್ಫಿನ್‌ಗಳ ಚಲನವಲನಗಳ ವೀಕ್ಷಣೆ ಬಗ್ಗೆ ಬರೆದಿದ್ದಾರೆ.

ಕಾಳಿಘಾಟದಲ್ಲಿರುವ ಕಾಳಿ ಮಂದಿರ, ರಾಮಕೃಷ್ಣ ಪರಮಹಂಸರು ಆರಾಧಿಸಿದ ದಕ್ಷಿಣೇಶ್ವರದ ಕಾಳಿಮಂದಿರ, ಬೇಲೂರು ಮಠದಲ್ಲಿರುವ ರಾಮಕೃಷ್ಣ ಮಂದಿರ, ಸಾಲ್ಟ್‌ಲೇಕ್ ಸಿಟಿ, ವಿಕ್ಟೋರಿಯಾ ಮೆಮೋರಿಯಲ್, ಪ್ರಿನ್ಸೆಪ್ ಘಾಟ್, ಇಂಡಿಯನ್ ಮ್ಯೂಸಿಯಂ, ರವೀಂದ್ರ ಭಾರತಿ ಸಂಗ್ರಹಾಲಯ, ಮಾರ್ಬಲ್ ಪ್ಯಾಲೇಸ್, ನೇತಾಜಿ ಭವನ, ಮದರ್ ತೆರೇಸಾ ಸ್ಮಾರಕ, ಸುಂದರಬನದ ಪ್ರವಾಸದ ಕಥನವಿದೆ.

ಸುಭಾಷಚಂದ್ರ ಬೋಸ್, ಪರಮಹಂಸರು, ವಿವೇಕಾನಂದರು, ಟ್ಯಾಗೋರ್, ಬಿ.ಸಿ.ರಾಯ್ ಮುಂತಾದ ಮೇರುವ್ಯಕ್ತಿತ್ವಗಳ ದರ್ಶನವನ್ನು ಈ ಪ್ರವಾಸಕಥನದಲ್ಲಿ ಸಾಕಷ್ಟು ವಿವರವಾಗಿ ಮಾಡಿಸಿದ್ದಾರೆ. ಸ್ವಾತಂತ್ರ್ಯ ಬರುವ ಸಮಯದಲ್ಲಿ ಗಾಂಧಿ ಕೋಲ್ಕತ್ತಾದಲ್ಲಿದ್ದ ಬಗ್ಗೆ, ನೌಖಾಲಿಯ ಹಳ್ಳಿಗಳಿಗೆ ಭೇಟಿ ನೀಡಿ ಗಲಭೆಗಳನ್ನು ತಡೆಯಲು ಉಪವಾಸ ವ್ರತ ಕೈಗೊಂಡಿದ್ದರ ಬಗ್ಗೆ ಬರೆದಿದ್ದು, ಇದೂ ಪ್ರವಾಸದ ಮುಖ್ಯ ಭಾಗವೇ ಅನ್ನಿಸುತ್ತದೆ.

ಹಲವಾರು ಮುದ್ರಣದೋಷಗಳು ಕಂಡುಬಂದರೂ, ಈ ಪ್ರವಾಸಕಥನ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಐತಿಹಾಸಿಕ, ಭೌಗೋಳಿಕ, ಪ್ರಚಲಿತವಿರುವ ಕುತೂಹಲಕರವಾದ ಕಥೆ ಉಪಕಥೆಗಳನ್ನು ಪ್ರಸ್ತಾಪಿಸಿ ಓದುಗರಿಗೆ ಪ್ರವಾಸದ ಸಮಗ್ರ ನೋಟ ಸಿಗುವಂತೆ ನಿರೂಪಿಸಿದ್ದಾರೆ.

**–ಕೆ. ಪದ್ಮಾಕ್ಷಿ**

'ಹೊಸ ಮನುಷ್ಯ' ಪತ್ರಿಕೆಗೆ
ಒಂಭತ್ತನೇ ಹುಟ್ಟು ಹಬ್ಬದ ಶುಭಾಶಯಗಳು



**ಕೆ.ಜಿ. ಶ್ರೀನಿವಾಸ್**
ಸಪ್ತಗಿರಿ ಡೆವಲಪರ್ಸ್
ಬೆಂಗಳೂರು

'ಹೊಸ ಮನುಷ್ಯ' ಪತ್ರಿಕೆಗೆ
ಒಂಭತ್ತನೇ ಹುಟ್ಟು ಹಬ್ಬದ ಶುಭಾಶಯಗಳು



**ಶಿವೇಗೌಡರು**
ಮತ್ತು ಕುಟುಂಬ
ಗೊಟ್ಟಿಕೆರೆ
(ತುರುವೇಕೆರೆ ತಾ. ತುಮಕೂರು ಜಿ.)

**'ಹೊಸ ಮನುಷ್ಯ' ಪತ್ರಿಕೆಗೆ**
**ಒಂಭತ್ತನೇ ಹುಟ್ಟು ಹಬ್ಬದ ಶುಭಾಶಯಗಳು**



## ಕುವೆಂಪು ವಿಚಾರ ವೇದಿಕೆ

ನಂ. 72, 'ಸರ್ವೋದಯ', ಪ್ರೊ. ಎ.,ಆರ್. ಕೃಷ್ಣಶಾಸ್ತ್ರಿ ರಸ್ತೆ, ಬಸವನಗುಡಿ,. ಬೆಂಗಳೂರು–560004

### ತಿಂಗಳ ಕೊನೆಯ ಸಾಲುಗಳು



ನದಿಯಲ್ಲಿನ ಮೀನು ಬಾಯಾರಿಕೆ ಎಂದರೆ ನನಗೆ ನಗೆ ಬರುತ್ತದೆ. ಹಾಗೇ ಜಗದ ಜನ ತೀರ್ಥಯಾತ್ರೆಗೆ ಹೊರಡುವುದನ್ನು ಕಂಡರೂ ನನಗೆ ನಗೆ ಬರುತ್ತದೆ.

-ಸಂತ ಕಬೀರ

ಶುಭಾಶಯಗಳೊಂದಿಗೆ
ಎಸ್ ಪಾಪಣ್ಣ
ಶ್ರೀರಾಮಕೃಷ್ಣ ಇಂಡಸ್ಟ್ರೀಸ್
ಬೆಂಗಳೂರು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)